ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 20 ಬುಧವಾರ 2022

43

₹4

ದೂರವಾಣಿ: 2496520, 2496521, 2496526, 2496527, 2496528, **FAX:** 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ **Ph:** 2431774, ಡಿ. ದೇವರಾಜ ಅರಸು ರಸ್ತೆ, **Ph:** 2428695

ಸಂಪುಟ: 43 | ಸಂಚಿಕೆ: 95 | ಪುಟಗಳು: 10

ಸುದ್ದಿ ಮತ್ತು ಫೋಟೋಗೆ: **news@mysurumithra.com**

ಜಾಹೀರಾತು: **ad@mysurumithra.com**

ಅಗತ್ಯ ವಸ್ತುಗಳಿಗೆ ಜಿಎಸ್‌ಟಿ: ಕರ್ನಾಟಕ ಸೇನಾ ಪಡೆ ಪ್ರತಿಭಟನೆ



ಮೈಸೂರು,ಜು.19(ಪಿಎಂ)– ದೈನಂದಿನ ಅಗತ್ಯ ವಸ್ತುಗಳಿಗೆ ಶೇ.5ರಷ್ಟು ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಗತ್ಯ ವಸ್ತುಗಳ ಮೇಲೆ ವಿಧಿಸಿರುವ ಜಿಎಸ್‌ಟಿ ಕೈಬಿಡುವಂತೆ ಆಗ್ರಹಿಸಿದರಲ್ಲದೆ, ಕೇಂದ್ರ ಸರ್ಕಾರ ಬಡ–ಮಧ್ಯಮ ವರ್ಗವನ್ನು ನೇಣುಗಂಬಕ್ಕೆ ದೂಡುತ್ತಿದೆ ಎಂಬಂತೆ ಅಣಕು ಪ್ರದರ್ಶನ ನೀಡಿ, ಅಕ್ಕಿ, ಗೋಧಿ, ಮೊಸರು, ಜೇನು, ಬೆಲ್ಲ, ತರಕಾರಿ, ಮೀನು, ಮಾಂಸ ಸೇರಿದಂತೆ ಹಲವು ದೈನಂದಿನ ಬಳಕೆ ಪದಾರ್ಥಗಳಿಗೆ (ಪ್ಯಾಕ್ ಮಾಡಲಾದ) ಜಿಎಸ್‌ಟಿ ವಿಧಿಸಿರುವುದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಗತ್ಯ ವಸ್ತುಗಳ ದರ ದಿನೇ ದಿನೆ ಗಗನಕ್ಕೇರುತ್ತಿದ್ದರೂ ಇದಕ್ಕೆ ಯಾವುದೇ ರೀತಿಯಲ್ಲಿ ಕಡಿವಾಣ ಹಾಕದ ಕೇಂದ್ರ ಸರ್ಕಾರ, ಇವುಗಳ ಮೇಲೆ ಶೇ.5ರಷ್ಟು ಜಿಎಸ್‌ಟಿ ವಿಧಿಸುವ ಮೂಲಕ ಬಡ–ಮಧ್ಯಮ ವರ್ಗದ ಮೇಲೆ ಗದಾಪ್ರಹಾರ ನಡೆಸಿದೆ. ಕಳೆದೆರಡು ವರ್ಷಗಳಿಂದ ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಲಕ್ಷಾಂತರ ಕುಟುಂಬಗಳು ಬೀದಿಗೆ ಬಂದಿವೆ. ತುತ್ತು ಅನ್ನಕ್ಕೂ ಕಷ್ಟಪಡುವ ಪರಿಸ್ಥಿತಿ ಇದೆ. ಇಂತಹ ಸಮಯದಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ತಿನ್ನುವ ಅನ್ನ ಹಾಗೂ ಉಪ್ಪಿನ ಮೇಲು ಜಿಎಸ್‌ಟಿ ವಿಧಿಸಿರುವುದು ಅತ್ಯಂತ ನೋವಿನ ಸಂಗತಿ ಎಂದು ಕಿಡಿಕಾರಿದರು.

ದೇಶದ ಜನತೆಗೆ ಕೇಂದ್ರ ಸರ್ಕಾರ ಆಹಾರ ಭದ್ರತೆ ನೀಡುತ್ತಿಲ್ಲ. ಇದೊಂದು ಜನವಿರೋಧಿ ಸರ್ಕಾರ. ಜನತೆಗೆ ಉದ್ಯೋಗ ನೀಡುವ ಬದಲಾಗಿ, ಹೆಚ್ಚಿನ ತೆರಿಗೆ ವಿಧಿಸುತ್ತಿದೆ. ದೇಶದಲ್ಲಿ ಈಗ ಬಡ–ಮಧ್ಯಮ ವರ್ಗದ ಜನತೆಗೆ ಸಾಮಾಜಿಕ ಭದ್ರತೆಯಿಲ್ಲ. ಗುಣಮಟ್ಟದ ಆರೋಗ್ಯ ಸೇವೆ, ಶಿಕ್ಷಣ ಸೇರಿದಂತೆ ಎಲ್ಲಾ ರೀತಿಯ ಸಾರ್ವಜನಿಕ ಸೇವೆಗಳು ಬಡವರ ಕೈಗೆ ಎಟುಕದಂತಹ ವಾತಾವರಣ ಸೃಷ್ಟಿಸಲಾಗಿದೆ ಎಂದು ದೂರಿದರು. ಕರ್ನಾಟಕ ಕಾವಲು ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮುಖಂಡರಾದ ಕೃಷ್ಣಪ್ಪ, ಪಿ.ಪ್ರಜೀಶ್, ವಿಜಯೇಂದ್ರ, ವಿ.ಜಯಣ್ಣ, ವೈ.ಕೆ.ನಾಗರಾಜ್, ಮನು ನಾಯಕ್, ಎಸ್.ಚಂದ್ರಶೇಖರ್, ಅನಿತಾ ಚೇತನ್, ಎಳನೀರು ರಾಮಣ್ಣ, ದರ್ಶನ್‌ಗೌಡ, ಮಧುವನ ಚಂದ್ರು, ರಾಧಾಕೃಷ್ಣ, ಅಂಬಾ ಅರಸ್, ಪದ್ಮಾ, ಡಾ.ಮೊಗಣ್ಣಾಚಾರ್, ನಂದಕುಮಾರ್, ಆರ್.ಪ್ರದೀಪ್, ಡಾ. ನರಸಿಂಹೇಗೌಡ, ಚಂದನಾ, ಜ್ಯೋತಿ, ಇಂದಿರಾ, ಬಂಗಾರಪ್ಪ, ಗುರುಮಲ್ಲಪ್ಪ, ಗಣೇಶ್ ಪ್ರಸಾದ್, ಬಸವರಾಜು, ಭರತ್, ಗೊರೂರು ಮಲ್ಲೇಶ್, ದೀಪಕ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ನಾಮ ನಿರ್ದೇಶನ ರದ್ದು

ಚಾಮರಾಜನಗರ, ಹಾಸನ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷ ನೇಮಕವೂ ರದ್ದು



ಹೆಚ್.ವಿ.ರಾಜೀವ್

ಮೈಸೂರು, ಜು.19(ಎಂಕೆ)– ರಾಜ್ಯದ ವಿವಿಧ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರ ನಾಮ ನಿರ್ದೇಶನವನ್ನು ರದ್ದುಗೊಳಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಲಲಾಟಮೂರ್ತಿ, ಚಾ.ನಗರ ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ರಮೇಶ್ ಹೊಳ್ಳ, ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಸಂಗೂರ, ಕೆಜಿಎಫ್ ನಗರಾಭಿವೃದ್ಧಿ ಪ್ರಾಧಿಕಾರ ಅಶ್ವಿನಿ, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅಶೋಕ ಜೀರೆ, ಹುಬ್ಬಳ್ಳಿ–ದಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ನಾಗೇಶ್ ಮುಂಡಲೀಕ ಸಾ ಕಲಬುರ್ಗಿ, ಮಂಗಳೂರು ನಗರಾಬಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರವಿಶಂಕರ ಮಿಜಾನ್, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಆನಂದ, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವಲಿಂಗಪ್ಪ ಹಾಗೂ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಯಾಘನ್ ಪ್ರಹ್ಲಾದ್ ರಾವ್ ಧಾರವಾಡಕರ್ ಅವರ ಅಧ್ಯಕ್ಷ ಸ್ಥಾನವನ್ನು ರದ್ದುಗೊಳಿಸಿ ನಗರಾಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಲತಾ ಆದೇಶಿಸಿದ್ದಾರೆ.



ಕೆಂಪೇಗೌಡ ಜಯಂತಿಯಲ್ಲಿ ಪಾಲ್ಗೊಳ್ಳಲು ಹೆಚ್.ಡಿ.ಕೋಟೆಗೆ ಆಗಮಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ರಿಗೆ ಕಾರ್ಯಕರ್ತರು, ಅಭಿಮಾನಿಗಳು ಭವ್ಯ ಸ್ವಾಗತ ಕೋರಿದರು. ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಜತೆಗಿದ್ದರು.

ಮೈಸೂರಲ್ಲಿ ಕನ್ನಡ ವೇದಿಕೆ ಪ್ರತಿಭಟನೆ



ಮೈಸೂರು,ಜು.19(ಪಿಎಂ)–ದಿನ ಬಳಕೆ ಅಗತ್ಯ ವಸ್ತುಗಳಿಗೆ ಶೇ.5ರಷ್ಟು ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ಉಪ್ಪಿನ ಮೇಲೆ ಕರ ವಿಧಿಸಿದ್ದರ ವಿರುದ್ಧ ಮಹಾತ್ಮ ಗಾಂಧಿಯವರು ಉಪ್ಪಿನ ಸತ್ಯಾಗ್ರಹ ನಡೆಸಿದ್ದರು. ಇಂದಿನ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಮೇಲೂ ಜಿಎಸ್‌ಟಿ ವಿಧಿಸಿರುವುದನ್ನು ನೋಡಿದರೆ, ಇದು ಬ್ರಿಟಿಷರಿಗಿಂತಲೂ ಒಂದು ಹೆಜ್ಜೆ ಮುಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ಮಹಾಮಾರಿ ಕೋವಿಡ್ ನಿಂದ ತತ್ತರಿಸಿದ್ದ ದೇಶದ ಜನತೆ, ಈಗಷ್ಟೇ ಚೇತರಿಸಿಕೊಳ್ಳುವ ಸಂದರ್ಭದಲ್ಲಿ ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿ ಬಡ–ಮಧ್ಯಮ ವರ್ಗದ ಮೇಲೆ ಕೇಂದ್ರ ಸರ್ಕಾರ ಗದಪ್ರಹಾರ ನಡೆಸುತ್ತಿದೆ. ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೇ ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರ ಮೇಲೆ ಆರ್ಥಿಕ ಹೊರೆ ಬೀಳುವಂತೆ ಕೇಂದ್ರ ಸರ್ಕಾರ ನಡೆದುಕೊಳ್ಳುತ್ತಿದೆ ಎಂದು ದೂರಿದರು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾ ಬೀದಿ ರವಿ, ಬೋಗಾದಿ ಸಿದ್ದೇಗೌಡ, ಪ್ಯಾಲೇಸ್ ಬಾಬು, ಗೋಪಿ, ಎಲ್‌ಐಸಿ ಸಿದ್ದಪ್ಪ, ಸುನೀಲ್, ಸ್ವಾಮಿ ಗೈಡ್, ಬೀಡಾ ಬಾಬು ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಯಶಸ್ವಿ ಚಾರಣ: ಸುಧಾ ಸತೀಶ್‌ಗೆ ಅಭಿನಂದನೆ



ಮೈಸೂರು, ಜು. 19–ಮೈಸೂರಿನ ಟೈಗರ್ ಅಡ್ವೇಂಚರ್ ಫೌಂಡೇಷನ್ ಹಾಗೂ ಮೌಂಟೇನ್ ಗೋಟ್ ಸಂಸ್ಥೆ ವತಿಯಿಂದ ಉತ್ತರಕಾಂಡದ ಹಿಮಾಲಯ ಶಿಖರದ ಕೇದಾರ ತಾಲ್ ಚಾರಣ ಏರ್ಪಡಿಸಲಾಗಿದ್ದು, ಅದರಲ್ಲಿ ಮೈಸೂರಿನ ಶ್ರೀಮತಿ ಎನ್.ಸುಧಾ ಸತೀಶ್ ಪಾಲ್ಗೊಂಡು, ಯಶಸ್ವಿಯಾಗಿ ಚಾರಣ ಮಾಡಿ ಬಂದಿದ್ದಾರೆ. ಸುಮಾರು 4,750 ಮೀಟರ್ ಎತ್ತರದ ಶಿಖರವನ್ನು ಮೇ 23ರಿಂದ ಜೂ.1ರವರೆಗೆ ಚಾರಣದಲ್ಲಿ ಪಾಲ್ಗೊಂಡು ಯಶಸ್ವಿ ಆರೋಹಣಗೈದಿದ್ದಾರೆ.

ಇತ್ತೀಚೆಗೆ ಮೈಸೂರಿನ ರಿಂಗ್ ರಸ್ತೆಯ ಫ್ಯಾಂಟಸಿ ಪಾರ್ಕ್ ಬಳಿಯ ಕೊಯಿನೂರ್ ಹಾಲ್‌ನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಶ್ರೀಮತಿ ಎನ್.ಸುಧಾ ಸತೀಶ್ ಅವರನ್ನು ಟೈಗರ್ ಅಡ್ವೇಂಚರ್ ಫೌಂಡೇಷನ್ ಅಧ್ಯಕ್ಷರಾದ ಪಿಹೆಚ್‌ಎಸ್ ಡಿಎಸ್‌ಡಿ ಸೋಲಂಕಿ, ಕಾರ್ಯದರ್ಶಿ ಆರ್.ಸಂತೋಷ್ ಪ್ರಶಂಸನಾ ಪತ್ರ ನೀಡಿ ಅಭಿನಂದಿಸಿದರು. ಶ್ರೀಮತಿ ಸುಧಾ ಅವರು ಮೈಸೂರು ನಗರಪಾಲಿಕೆ ಕಂದಾಯ ಅಧಿಕಾರಿ ಸತೀಶ್ ಅವರ ಪತ್ನಿಯಾಗಿದ್ದು, ಸಾಹಸ ಯಾತ್ರೆಗಳಲ್ಲಿ ಬಹಳ ಉತ್ಸುಕತೆಯನ್ನು ಹೊಂದಿದ್ದಾರೆ.

ನೂಪುರ್ ಶರ್ಮಾಗೆ ಬಿಗ್ ರಿಲೀಫ್



ನವದೆಹಲಿ: ಪ್ರವಾದಿ ಮೊಹಮ್ಮದ್ ಕುರಿತ ವಿವಾದಾತ್ಮಕ ಹೇಳಿಕೆಗೆ ಸಂಬಂಧಿಸಿದಂತೆ ಅಮಾನತುಗೊಂಡಿರುವ ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ಅವರು ಸುಪ್ರೀಂಕೋರ್ಟ್‌ನಿಂದ ರಿಲೀಫ್ ಪಡೆದಿದ್ದಾರೆ. ಬಂಧನದಿಂದ ರಕ್ಷಣೆ ಕೋರಿ ನೂಪುರ್ ಶರ್ಮಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಆಗಸ್ಟ್ 10ರ ವರೆಗೆ ಬಂಧಿಸದಂತೆ ಆದೇಶಿಸಿದೆ.

ನೂಪುರ್ ಶರ್ಮಾ ಅವರಿಗೆ ಕೊಲೆ ಬೆದರಿಕೆಗಳು ಬರುತ್ತಿದ್ದು, ಆಕೆಗೆ ಬಂಧನದಿಂದ ತಡೆಯಾಜ್ಞೆ ಹಾಗೂ ರಕ್ಷಣೆ ನೀಡಬೇಕು ಎಂದು ವಕೀಲರು ನ್ಯಾಯಾಲಯದಲ್ಲಿ ವಾದಿಸಿದರು. ಈ ಹಿನ್ನೆಲೆಯಲ್ಲಿ ಆಗಸ್ಟ್ 10ರವರೆಗೆ ನೂಪುರ್ ಅವರನ್ನು ಬಂಧಿಸದಂತೆ ನ್ಯಾಯಾಲಯ ಸೂಚಿಸಿದೆ. ಇದರೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೂ ಈ ಸಂಬಂಧ ನೋಟಿಸ್ ಜಾರಿ ಮಾಡಲಾಗಿದೆ. ಆಕೆಯ (ನೂಪುರ್) ಜೀವಕ್ಕೆ ಗಂಭೀರ ಬೆದರಿಕೆ ಇದೆ ಎಂದು ನೂಪುರ್ ಶರ್ಮಾ ಪರವಾದ ಮಂಡಿಸಿದ ವಕೀಲ ಮಣಿಂದರ್ ಸಿಂಗ್ ಹೇಳಿದರು. ಆದೇಶವನ್ನು ಉಚ್ಚರಿಸುವಾಗ, ಪೀಠವು, ಅರ್ಜಿದಾರರ ಹತ್ಯೆಯ ಬಗ್ಗೆ ಸಲ್ಮಾನ್ ಚಿಶ್ತಿಯ ವೈರಲ್ ಹೇಳಿಕೆಯನ್ನು ಸಹ ಗಮನಕ್ಕೆ ತೆಗೆದುಕೊಂಡಿತು. ಯುಪಿಯ ವ್ಯಕ್ತಿಯೊಬ್ಬರು ಅರ್ಜಿದಾರರ ಶಿರಚ್ಛೇದ ಮಾಡುವುದಾಗಿ ಬೆದರಿಕೆ ಹಾಕಿರುವುದನ್ನು ನ್ಯಾಯಾಲಯವು ಆಲಿಸಿತು. ಪ್ರವಾದಿ ಮೊಹಮ್ಮದ್ ಕುರಿತ ವಿವಾದಾತ್ಮಕ ಹೇಳಿಕೆ ನೀಡಿದ ಶರ್ಮಾ ವಿರುದ್ಧ ದೆಹಲಿ, ಮಹಾರಾಷ್ಟ್ರ, ತೆಲಂಗಾಣ, ಪಶ್ಚಿಮ ಬಂಗಾಳ, ಕರ್ನಾಟಕ, ಉತ್ತರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಅಸ್ಸಾಂನಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಪಾಕಿಸ್ತಾನದ ವ್ಯಕ್ತಿ ಬಂಧನ: ಬಿಜೆಪಿಯ ಉಚ್ಚಾಟಿತ ವಕ್ತಾರೆ ನೂಪುರ್ ಶರ್ಮಾ ಅವರನ್ನು ಹತ್ಯೆ ಮಾಡುವ ಉದ್ದೇಶದಿಂದ ಭಾರತದ ಗಡಿ ದಾಟಿ ಬಂದಿದ್ದ ಎನ್ನಲಾದ ಪಾಕಿಸ್ತಾನದ ವ್ಯಕ್ತಿಯೋರ್ವ ನನ್ನು ರಾಜಸ್ಥಾನದ ಶ್ರೀಗಂಗಾ ನಗರ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ.

ಉಪರಾಷ್ಟ್ರಪತಿ ಚುನಾವಣೆಗೆ ಆಳ್ವ ನಾಮಪತ್ರ; ಟಿಎಂಸಿ, ಎಎಪಿ ಗೈರು

ನವದೆಹಲಿ: ಉಪರಾಷ್ಟ್ರಪತಿ ಚುನಾವಣೆಗೆ ವಿಪಕ್ಷಗಳ ಅಭ್ಯರ್ಥಿಯಾಗಿರುವ ಮಾರ್ಗರೇಟ್ ಆಳ್ವ ನಾಮಪತ್ರ ಸಲ್ಲಿಸಿದ್ದಾರೆ. ಈ ವೇಳೆ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಶಿವಸೇನೆ ನಾಯಕ ಸಂಜಯ್ ರಾವುತ್ ಮತ್ತು ಇತರ ವಿರೋಧ ಪಕ್ಷದ ನಾಯಕರು ಉಪಸ್ಥಿತರಿದ್ದರು. ಆದರೆ ಟಿಎಂಸಿ ಹಾಗೂ ಆಮ್ ಆದ್ಮಿ ಪಕ್ಷದ ನಾಯಕರು ಗೈರಾಗಿದ್ದರು. ಆ.6ರಂದು ಉಪರಾಷ್ಟ್ರಪತಿ ಚುನಾವಣೆ ನಡೆಯಲಿದ್ದು, ಆ.10ರಂದು ಹಾಲಿ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರ ಅವಧಿ ಪೂರ್ಣಗೊಳ್ಳಲಿದೆ. ಎನ್ ಡಿಎ ಅಭ್ಯರ್ಥಿ ಜಗದೀಪ್ ಧನ್ಕರ್ ಅವರ ವಿರುದ್ಧ ಮಾರ್ಗರೇಟ್ ಆಳ್ವ ಸ್ಪರ್ಧಿಸಿದ್ದಾರೆ.ಉಪರಾಷ್ಟ್ರ ಪತಿ ಚುನಾವಣೆಗೆ ಅಭ್ಯರ್ಥಿಯನ್ನು ಅಂತಿಮಗೊಳಿಸುವ ವಿಪಕ್ಷಗಳ ಸಭೆಗೂ ಟಿಎಂಸಿ ಹಾಗೂ ಆಮ್ ಆದ್ಮಿ ಪಕ್ಷಗಳು ಗೈರಾಗಿದ್ದವು. ಆದರೆ ಪವಾರ್ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹಾಗೂ ಆಮ್ ಆದ್ಮಿ ಪಕ್ಷದ ನಾಯಕ ಕೇಜ್ರಿವಾಲ್ ಅವರೊಂದಿಗೆ ಸಂಪರ್ಕದಲ್ಲಿದ್ದೇನೆ ಎಂದು ಹೇಳಿದ್ದಾರೆ. ಇಂದು ಉಪರಾಷ್ಟ್ರಪತಿ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ.

ಚಾಮುಂಡೇಶ್ವರಿ ವರ್ಧಂತಿ: ಚಾಮುಂಡಿಬೆಟ್ಟದ ಸ್ವಚ್ಛತಾ ಕಾರ್ಮಿಕರಿಗೆ ಬಾಗಿನ ಸಮರ್ಪಣೆ



ಮೈಸೂರು, ಜು.19(ಆರ್‌ಕೆಬಿ)–ಆಷಾಢ ಮಾಸ ಹಾಗೂ ಚಾಮುಂಡೇಶ್ವರಿ ವರ್ಧಂತಿ ಹಿನ್ನೆಲೆಯಲ್ಲಿ ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಚಾಮುಂಡಿಬೆಟ್ಟದಲ್ಲಿ ದೇವಸ್ಥಾನದ ಸ್ವಚ್ಛತೆ ಮಾಡುವ 50 ಮಹಿಳಾ ಸ್ವಚ್ಛತಾ ಸೇನಾನಿಗಳಿಗೆ ಸೀರೆ, ಬಳೆ, ಹೂವು, ಕುಂಕುಮ, ಅರಿಶಿನ ಸಹಿತ ಬಾಗಿನ ನೀಡಿ, 'ಅರಿಶಿನ–ಕುಂಕುಮ' ಎಂಬ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಚಾಮುಂಡಿಬೆಟ್ಟದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ಮೈಸೂರು ಪ್ರಾಂತ್ಯದಲ್ಲಿ ಆಷಾಢ ಮಾಸವೆಂದರೆ ದೇವಿ ಆರಾಧನೆಗೆ ಮಹಿಳೆಯರು ಹೆಚ್ಚು ಪ್ರಾಧಾನ್ಯತೆ ನೀಡುತ್ತಾರೆ. ಚಾಮುಂಡಿಬೆಟ್ಟದಲ್ಲಿ ಪ್ರತಿನಿತ್ಯ ಸೇವೆ ಸಲ್ಲಿಸುವ ಮಹಿಳಾ ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿಗೆ ಬಾಗಿನ ಸಮರ್ಪಣೆ ಮಾಡುವ ಮೂಲಕ ಅವರಲ್ಲೂ ಹಬ್ಬದ ಸಡಗರ ಮನೆ ಮಾಡಿದೆ. ಮಹಿಳಾ ಸಿಬ್ಬಂದಿಗಳಲ್ಲಿ ಮತ್ತಷ್ಟು ಆತ್ಮ ಸ್ಥೈರ್ಯ ತುಂಬಲಿದೆ ಎಂದರು.

ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್ ಮಾತನಾಡಿ, ಆಷಾಢ ಮಾಸದ ಆಚರಣೆ ಮೈಸೂರು ಭಾಗವಲ್ಲದೇ ಇಡೀ ದೇಶದಲ್ಲಿ ಮಹಿಳೆಯರು ಸಾಂಪ್ರದಾಯಿಕ ಹಬ್ಬವಾಗಿ ಆಚರಣೆಯಲ್ಲಿದೆ. ಮಹಿಳೆಯರು ಹೆಚ್ಚಾಗಿ ಮೆಟ್ಟಿಲು ಹತ್ತಿಕೊಂಡು ಅರಿಶಿನ ಕುಂಕುಮ ಸೇವೆ ಸಲ್ಲಿಸಿ, ಚಾಮುಂಡಿ ದರ್ಶನ ಪಡೆಯಲು ಬರುತ್ತಾರೆ. ಹಾಗಾಗಿ ಮುಜರಾಯಿ ಇಲಾಖೆ ಅದಕ್ಕೊಂದು ಧಾರ್ಮಿಕ ಯೋಜನೆ ರೂಪಿಸಿ ಅವಕಾಶ ಕಲ್ಪಿಸಿಕೊಡಬೇಕು ಎಂದು ಹೇಳಿದರು. ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಚಾಮುಂಡಿಬೆಟ್ಟ ಗ್ರಾಪಂ ಅಧ್ಯಕ್ಷ ಭರತ್, ಮಾಜಿ ಅಧ್ಯಕ್ಷ ಸೋಮಣ್ಣ, ವಿದ್ಯಾ, ಸಂತೋಷ್ ಕಿರಾಳು, ರಾಜೇಶ್, ಪವನ್, ಸಿದ್ದರಾಮ ಇನ್ನಿತರರು ಉಪಸ್ಥಿತರಿದ್ದರು.

ಭಾರತೀಯ ರೈಲ್ವೆ ಆವಿಷ್ಕಾರ ನೀತಿ ಕುರಿತು ಕಾರ್ಯಾಗಾರ



ಮೈಸೂರು, ಜು.19(ಆರ್‌ಕೆ)–ಮೈಸೂರಿನ ಯಾದವಗಿರಿಯಲ್ಲಿರುವ ಚಾಮುಂಡಿ ಕ್ಲಬ್‌ನಲ್ಲಿ 'ಭಾರತೀಯ ರೈಲ್ವೆ ಆವಿಷ್ಕಾರ ನೀತಿ–ರೈಲ್ವೆಗಾಗಿ ಸ್ಟಾರ್ಟ್ ಆಪ್ಸ್' ವಿಷಯ ಕುರಿತ ಕಾರ್ಯಾಗಾರ ನಡೆಯಿತು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಭಾಗೀಯ ರೈಲ್ವೇ ವ್ಯವಸ್ಥಾಪಕ ರಾಹುಲ್ ಅಗರವಾಲ್ ಅವರು, ಸಮಾನ ಹಂಚಿಕೆ ಆಧಾರದ ಮೇಲೆ ನವ ಉದ್ಯಮಿಗಳಿಗೆ 1.5 ಕೋಟಿ ರೂ.ವರೆಗೆ ಅನುದಾನ ನೀಡಬಹುದಾಗಿದ್ದು, ಪಾರದರ್ಶಕವಾಗಿ ಆನ್‌ಲೈನ್ ಮೂಲಕ ಸಹಾಯ ಧನ ಮಂಜೂರು ಮಾಡಿ ನೆರವು ನೀಡಲಾಗುವುದು ಎಂದು ಹೇಳಿದರು.

ಕೃತಕ ಬುದ್ಧಿಮತ್ತೆ, ಡೇಟಾ ಅನಾಲಿಟಿಕ್ಸ್, ಕಾಡ ಕಂಪ್ಯೂಟಿಂಗ್, ಡ್ರೋಣ್ ತಂತ್ರಜ್ಞಾನ, ರೋಬೋಟಿಕ್ಸ್, ನ್ಯಾನೋ ತಂತ್ರಜ್ಞಾನಗಳೊಂದಿಗೆ ಕೈಗಾರಿಕಾ ಕ್ರಾಂತಿಯಾಗುತ್ತಿದ್ದು, ನವ ಉದ್ಯಮಿಗಳು ಕೈಗಾರಿಕೋದ್ಯಮದಲ್ಲಿ ಹೊಸ ಆವಿಷ್ಕಾರ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತೀಯ ರೈಲ್ವೆಯು ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನ ನೀಡುತ್ತಿದೆ ಎಂದು ತಿಳಿಸಿದರು.

ಗುಣಮಟ್ಟ, ವಿಶ್ವಾಸಾರ್ಹತೆಯೊಂದಿಗೆ ಆವಿಷ್ಕಾರ ನೀತಿಯನ್ನು ಬಳಸಿಕೊಂಡು ಉದ್ದಿಮೆ ಆರಂಭಿಸಲು ಭಾರತೀಯ ರೈಲ್ವೆಯು ಉತ್ತೇಜನ ನೀಡಲಿದೆ. ಆಸಕ್ತರು www.innovation.indianrailways.gov.in ರೈಲ್ವೆ ವೆಬ್‌ಸೈಟ್‌ನಲ್ಲಿರುವ ಇನೋವೇಷನ್ ಪೋರ್ಟಲ್‌ಗೆ ಲಾಗಿನ್ ಆಗಿ ಮಾಹಿತಿ ಪಡೆಯಬಹುದು ಎಂದರು. ರೈಲ್ವೇ ಅಧಿಕಾರಿಗಳಾದ ಎ.ದೇವ ಸಹಾಯಂ, ಇ–ವಿಜಯ, ಲೆವಿನ್ ಪ್ರಭು, ರಾಜ್ಯದಾದ್ಯಂತ 43 ಸ್ಟಾರ್ಟ್ ಅಪ್‌ಗಳು, ಎಂಎಸ್‌ಎಂಇ ಹಾಗೂ ಇತರ ಕೈಗಾರಿಕಾ ಘಟಕಗಳ ಉದ್ಯಮಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಇಲವಾಲ–ಜಯಪುರ ಬ್ಲಾಕ್ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಮನೋಜ್ ಸಿ.ಮಹದೇವು ನೇಮಕವಾಗಲು ಸಹಕರಿಸಿದ ಕೆಪಿಸಿಸಿ ಸದಸ್ಯ ಹಾಗೂ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ಸದಸ್ಯ ನರಸೇಗೌಡ ಅವರನ್ನು ಕೋಟೆ ಹುಂಡಿ ಕಾಂಗ್ರೆಸ್ ಮುಖಂಡರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ರಾಜ್ಯ ಒಬಿಸಿ ಪ್ರಧಾನ ಕಾರ್ಯದರ್ಶಿ ಸಿ.ಮಹದೇವು, ಇಲವಾಲ–ಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರುಸ್ವಾಮಿ ಇನ್ನಿತರರಿದ್ದರು.

ವಿವಿಧ ಯೋಜನೆಗಳಡಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಜು.19–ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ 2022–23ನೇ ಸಾಲಿಗೆ ಸುವಿಧಾ ಪೋರ್ಟಲ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದ್ದು, ಆ.20ರೊಳಗಾಗಿ ಅರ್ಜಿ ಸಲ್ಲಿಸಬೇಕಿದೆ. ಮಾಹಿತಿಗಾಗಿ ವೆಬ್‌ಸೈಟ್: https://kvcdcl.karnataka.gov.inರಲ್ಲಿ ಪಡೆಯಬಹುದಾಗಿದೆ ನಿಗಮದ ಜಿಲ್ಲಾ ಕಚೇರಿ ಅಥವಾ ನಿಗಮದ ಕೇಂದ್ರ ಕಚೇರಿಯ ಸಹಾಯವಾಣಿ ದೂ:821–2341194 ಪೂರ್ವಾಹ್ನ 10.00ರಿಂದ ಸಂಜೆ 5.30ರವರೆಗೆ ಸಂಪರ್ಕಿಸಿ.



ಮೈಸೂರು ಮೇಟಗಳ್ಳಿ ಪೊಲೀಸ್ ಠಾಣೆಯ ಎಎಸ್‌ಐ ರವಿ ವಂಶೋ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಬಡವರ ಬಂಧು ಕನ್ನಡ ಯುವಕರ ಸಂಘದಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಪಡುವಾರಹಳ್ಳಿ ಪಾಪಣ್ಣ, ರಮೇಶ, ಬಸವರಾಜು, ಮಹದೇವು, ಮಾದೇಶು, ಭೈರ, ಸತೀಶ ಇತರರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.07.2022 ಬುಧವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ:ಸಪ್ತಮಿ, ನಕ್ಷತ್ರ : ರೇವತಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಭಾವಸಾರ ಕ್ಷತ್ರಿಯ ಸೇವಾ ಸಮಿತಿ, ಕೃಷ್ಣರಾಜ ಕ್ಷೇತ್ರ :** ಆಷಾಢ ಮಾಸದ 3ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ, ಸಂಜೆ 7ಕ್ಕೆ ಸನ್ಮಾನ ಹಾಗೂ ಪ್ರಸಾದ ವಿತರಣಾ ಕಾರ್ಯಕ್ರಮ, ಸ್ಥಳ: ಬಿ.ಬಿ. ಲಾಯ ರಸ್ತೆ, ಕೆ.ಆರ್. ಮೊಹಲ್ಲಾ.
- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಾಸಿಷ್ಠ ಕುರಿತು ಪ್ರವಚನ, ವಿಶೇಷ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ತೈಲಾಭಿಷೇಕ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ:** ಗ್ರೆಗರ್ ಜಾನ್ ಮೆಂಡಲ್ 200ನೇ ಜನ್ಮ ಶತಮಾನೋತ್ಸವ ಸಮಾರಂಭ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ, ಪ್ರೊ.ಹೆಚ್.ಎ.ರಂಗನಾಥ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಸನ್ಮಾನ : ಪ್ರೊ.ಎಸ್.ಎನ್.ಹೆಗ್ಡೆ, ಪ್ರೊ. ಎಸ್.ಆರ್.ರಮೇಶ್, ಪ್ರೊ.ಎನ್.ಬಿ.ರಾಮಚಂದ್ರ, ಡಾ.ಟಿ.ಶಿವಾನಂದಪ್ಪ, ಸ್ಥಳ: ಪ್ರೊ.ಎಂ.ಆರ್. ರಾಜಶೇಖರ ಶೆಟ್ಟಿ ಮೆಮೋರಿಯಲ್ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು:** ವಿಶೇಷ ಪ್ರಚಾರೋಪನ್ಯಾಸ ಮಾಲೆ ಕಾರ್ಯಕ್ರಮ, ಉದ್ಘಾಟನೆ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಡಾ.ವಿದ್ಯಾಶಂಕರ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ವಿಶೇಷ ಉಪನ್ಯಾಸ: ಡಾ.ಮ.ರಾಮಕೃಷ್ಣ ಅವರಿಂದ ಕುವೆಂಪು ಸಾಹಿತ್ಯದಲ್ಲಿ ಪಂಚಮಂತ್ರಗಳ ಪ್ರಸ್ತುತತೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ಕರಾಮುವಿವಿ ಕುಲಸಚಿವ ಡಾ.ಎ.ಖಾದರ್ ಪಾಷ, ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣನವರ್, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.
- **ಶ್ರೀ ಚಾಮುಂಡೇಶ್ವರಿ ಟ್ರಸ್ಟ್:** ಮಧ್ಯಾಹ್ನ 12ಕ್ಕೆ ಶ್ರೀಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ಅನ್ನಸಂತರ್ಪಣೆ, ಸಂಜೆ 6.30 ಕ್ಕೆ ಮೈಸೂರು ಮಹಾಲಿಂಗು ಮತ್ತು ತಂಡದವರಿಂದ ಸುಗಮ ಸಂಗೀತ, ಸ್ಥಳ: ಶ್ರೀಚಾಮುಂಡೇಶ್ವರಿ ದೇವಸ್ಥಾನ, ವಿಜಯನಗರ 1ನೇ ಹಂತ.
- **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಯುವಕರ ಸೇವಾ ಸಮಿತಿ:** 24ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಸಂಜೆ 6ರಿಂದ ನಿವೇದಿತನಗರದ ಶ್ರೀ ಹರಿ ಹರಿದಾಸ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸಂಜೆ 7ಕ್ಕೆ ವಿಶೇಷ ಪೂಜೆ, ಸ್ಥಳ: ಶಾರದಾದೇವಿನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ, ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ– ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15ಆದಾಯಕರ ಲೆಕ್ಕಾಚಾರ ಹೇಗೆ–ಮೈಸೂರಿನ ಲೆಕ್ಕ ಪರಿಶೋಧಕ ರವಿಕುಮಾರ್ ಅವರೊಡನೆ ಸಂದರ್ಶನ. ಸಂದರ್ಶಕರು – ದಿವಾಕರ ಹೆಗಡೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಬಾಲಚಂದ್ರ ನಾಕೋಡ್ –ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಎಂ.ಪ್ರಭಾಕರ್, ಕವಿತಾ ಕೃಷ್ಣಮೂರ್ತಿ, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್ ಡೌನ್ ಕಥೆಗಳನ್ನಾಧರಿಸಿದ ಸರಣಿ "ವಿವೇಚನೆ", ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್, 1.20 ಭಾವಗೀತೆ–ಆರತಿ ಆನಂದ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ನಟಿ, ರಂಗಭೂಮಿ ಕಲಾವಿದೆ ಅಕ್ಷತಾ ಪಾಂಡವಪುರ ಅವರೊಂದಿಗೆ ಮಾತುಕತೆ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಶಾಂತಾ ಡಿ. ಕಿಣಿ, 6.50 ಕೃಷಿರಂಗ–ಕಿಸಾನ್‌ವಾಣಿ, ನೈಸರ್ಗಿಕವಾಗಿ ತೋಟಗಾರಿಕೆ ಹಾಗೂ ಮೌಲ್ಯವರ್ಧನೆಯಲ್ಲಿನ ಅನುಭವ ಕುರಿತು ಬಿ.ಜಿ. ಮೋಹನ್‌ಕುಮಾರ್ ಅವರೊಂದಿಗೆ ಸಂದರ್ಶನ, 9.05 ಕ್ಷಿತಿಜ–Literacy ಗುರು, ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಜಾನಪದ ಸಂಗೀತ–ಮಳವಳ್ಳಿ ಮಹದೇವ ಸ್ವಾಮಿ ಮತ್ತು ತಂಡ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 20 ಬುಧವಾರ 2022

ಸಂಪುಟ: 43 | ಸಂಚಿಕೆ: 95 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

43

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಅದ್ಧೂರಿ ದಸರಾ ಆಚರಣೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ತೀರ್ಮಾನ




- ದಸರಾ ಬ್ರ್ಯಾಂಡ್ ಮಾಡಲು ಜಾಗತಿಕ ಮಟ್ಟದಲ್ಲಿ ಭಾರೀ ಪ್ರಚಾರ
- ದೇಶದ ಎಲ್ಲಾ ಮೆಟ್ರೋಪಾಲಿಟನ್ ನಗರಗಳಲ್ಲೂ ಪ್ರಚಾರಕ್ಕೆ ಸೂಚನೆ
- ನವರಾತ್ರಿಗೆ 15 ದಿನ ಮುನ್ನವೇ ದಸರಾ ವಸ್ತು ಪ್ರದರ್ಶನ ಆರಂಭಕ್ಕೆ ನಿರ್ದೇಶನ
- ಅರಮನೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅರಮನೆ ಮಂಡಳಿಯಿಂದಲೇ ಖರ್ಚು ವೆಚ್ಚ
- ಮುಡಾದಿಂದ 10 ಕೋಟಿ ಅನುದಾನ; ಅಗತ್ಯವಿದ್ದರೆ ಸರ್ಕಾರದ ನೆರವು
- ಶ್ರೀರಂಗಪಟ್ಟಣ, ಚಾಮರಾಜನಗರ ದಸರಾಕ್ಕೆ ತಲಾ ಒಂದು ಕೋಟಿ ಬಿಡುಗಡೆ

ಬೆಂಗಳೂರು, ಜು.19(ಕೆಎಂಶಿ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದ್ದು, ಇದಕ್ಕೆ ಪೂರಕವಾಗಿ ದಸರಾ ಬ್ರ್ಯಾಂಡ್ ಸೃಜಿಸಿ ಜಾಗತಿಕ ಮಟ್ಟದಲ್ಲಿ ಭಾರೀ ಪ್ರಚಾರ ಕೈಗೊಳ್ಳಲು ಸೂಚಿಸಲಾಗಿದೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ದಸರಾ–2022 ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆ ಜನಪ್ರತಿನಿಧಿಗಳು, ಅಧಿಕಾರಿಗಳಿಂದ ಅಭಿಪ್ರಾಯ ಸಂಗ್ರಹಿಸಿ, ಕೊರೊನಾ ನಂತರದಲ್ಲಿ ಈ ಬಾರಿ ಎಲ್ಲಾ ಕಾರ್ಯಕ್ರಮಗಳೊಂದಿಗೆ ಅದ್ಧೂರಿಯಾಗಿ ದಸರಾ ಆಚರಿಸಲು ನಿರ್ಣಯ ಕೈಗೊಳ್ಳಲಾಯಿತು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳ ಜನಪ್ರತಿನಿಧಿಗಳ ಅಪೇಕ್ಷೆಯಂತೆ ಈ ಬಾರಿ ವಿಜೃಂಭಣೆಯಿಂದ ದಸರಾ ಆಚರಿಸಲು ತೀರ್ಮಾನಿಸಲಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ಅಲ್ಲದೆ ಹೊರ ರಾಜ್ಯ, ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ದಸರಾ ಬ್ರ್ಯಾಂಡ್ ಮಾಡಿ ದೊಡ್ಡ ಮಟ್ಟದ ಪ್ರಚಾರಕ್ಕೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸರ್ಕಾರದ ಎಲ್ಲಾ ಜಾಹೀರಾತು, ಪ್ರಕಟಣೆಗಳು, ವೆಬ್‌ಸೈಟ್, ಸಾಮಾಜಿಕ ಮಾಧ್ಯಮಗಳಲ್ಲಿ ಮೈಸೂರು ದಸರಾ ಲಾಂಛನ ಪ್ರಕಟಿಸಿ ಜಾಗತಿಕ ಮಟ್ಟದಲ್ಲಿ ಪ್ರಚಾರ ಮಾಡಬೇಕು. ಮೆಟ್ರೋಪಾಲಿಟನ್ ಸಿಟಿಗಳಾದ ಮುಂಬೈ, ದೆಹಲಿ ಹಾಗೂ ಚೆನ್ನೈ ವಿಮಾನ ನಿಲ್ದಾಣಗಳಲ್ಲಿ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಚುರಪಡಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಿಗೆ ಸೂಚಿಸಲಾಗಿದೆ. ನವರಾತ್ರಿಗೆ 15 ದಿನ ಮುಂಚಿತವಾಗಿಯೇ ದಸರಾ ವಸ್ತು ಪ್ರದರ್ಶನ ಆರಂಭಿಸುವಂತೆ ▶ 8ನೇ ಪುಟಕ್ಕೆ

“ವಾರದಲ್ಲಿ ಮೈಸೂರು ಟೂರಿಸಂ ಸರ್ಕಿಟ್ ರಚನೆ ಆದೇಶ



ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಿರುವ ಮೈಸೂರು ಟೂರಿಸಂ ಸರ್ಕಿಟ್ ಅನ್ನು ದಸರಾ ವೇಳೆಗೆ ಆರಂಭಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ. ಮೈಸೂರು ಹಾಗೂ ಹಂಪಿಯಲ್ಲಿ ಟೂರಿಸಂ ಸರ್ಕಿಟ್ ಆರಂಭಿಸಲು ಬಜೆಟ್‌ನಲ್ಲಿ ▶ 8ನೇ ಪುಟಕ್ಕೆ

“ದಸರಾ ಉದ್ಘಾಟಕರ ಬಗ್ಗೆ ಮುಖ್ಯಮಂತ್ರಿಗಳು ತೀರ್ಮಾನ

ದಸರಾ ನೆಪದಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುತ್ತಿವೆ ಎಂದು ಜನಪ್ರತಿನಿಧಿಗಳು ಮುಖ್ಯಮಂತ್ರಿಗಳ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅರಮನೆ ಆವರಣದೊಳಗೆ ನಡೆಯುವ ಕಾರ್ಯಕ್ರಮಗಳ ವೆಚ್ಚವನ್ನು ಅರಮನೆ ಆಡಳಿತ ಮಂಡಳಿ ಭರಿಸುವಂತೆ, ವಿದ್ಯುತ್ ದೀಪಾಲಂಕಾರದ ವ್ಯವಸ್ಥೆಯನ್ನು ಸಂಬಂಧಪಟ್ಟ ಇಲಾಖೆ ನೋಡಿಕೊಳ್ಳುವಂತೆ ಸೂಚಿಸಲಾಗಿದೆ. ದಸರಾ ಉದ್ಘಾಟನೆ ಯಾರಿಂದ ಮಾಡಿಸಬೇಕು ಎಂಬುದನ್ನು ಎಲ್ಲರ ಅಭಿಪ್ರಾಯ ಪಡೆದು ಮುಖ್ಯಮಂತ್ರಿಗಳು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ.

–ಎಸ್.ಟಿ.ಸೋಮಶೇಖರ್
ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು

ಸೆ.26ರಂದು ಈ ಬಾರಿಯ ದಸರಾ ಉತ್ಸವಕ್ಕೆ ಚಾಲನೆ

9 ದಿನವೂ ಚಾಮುಂಡೇಶ್ವರಿಗೆ ವಿಶೇಷ ಪೂಜೆ
ಅಕ್ಟೋಬರ್ 5ಕ್ಕೆ ಜಂಬೂ ಸವಾರಿ

ಮೈಸೂರು, ಜು.19(ಎಸ್‌ಬಿಡಿ)– ಅಧಿದೇವತೆ ಶ್ರೀ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಸೆ.26ರಂದು ಬೆಳಗ್ಗೆ 9.45ರಿಂದ 10.05ರ ನಡುವಿನ ವೃಶ್ಚಿಕ ಲಗ್ನದಲ್ಲಿ ಶೈಲಾ ವ್ರತ ಪೂಜೆ ಮೂಲಕ ದಸರಾ ಮಹೋತ್ಸವ(ಶರನ್ನವರಾತ್ರಿ)–2022ಕ್ಕೆ ಚಾಲನೆ ದೊರಕಲಿದೆ. ಅಂದು ಸಂಜೆ 5.45 ರಿಂದ 6.30ರ ಮೀನಲಗ್ನದಲ್ಲಿ ಅರಮನೆಯಲ್ಲಿ ಪೂಜಾ ಕೈಂಕರ್ಯ ನೆರವೇರಲಿದೆ.



ಚಾಮುಂಡೇಶ್ವರಿ ದೇವಿಯನ್ನು ಎರಡನೇ ದಿನ(ಸೆ.27) ಬ್ರಹ್ಮಚಾರಿಣಿ ರೂಪದಲ್ಲಿ, ಮೂರನೇ ದಿನ(ಸೆ.28) ಚಂದ್ರಘಂಟ ದೇವಿ, ನಾಲ್ಕನೇ ದಿನ(ಸೆ.29) ಕೂಷ್ಮಾಂಡ ದೇವಿ, ಐದನೇ ದಿನ (ಸೆ.30) ಸ್ಕಂದ ಮಾತೆ, ಆರನೇ ದಿನ(ಅ.1) ಕಾತ್ಯಾಯಿನಿ, ಏಳನೇ ದಿನ(ಅ.2) ▶ 8ನೇ ಪುಟಕ್ಕೆ

ಆಗಸ್ಟ್ 7ಕ್ಕೆ ಗಜ ಪಯಣ



ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯನ್ನು ಸಾಂಪ್ರದಾಯಿಕ ಹಾಗೂ ಅದ್ಧೂರಿಯಾಗಿ ಬರಮಾಡಿಕೊಳ್ಳಲಾಗುವುದು. ವೀರನ ಹೊಸಹಳ್ಳಿ ಗ್ರಾಮದಿಂದ ಆ.7ರ ಬೆಳಗ್ಗೆ 9.01ರಿಂದ 9.35ರ ಕನ್ಯಾ ಲಗ್ನದಲ್ಲಿ ಜಿಲ್ಲಾಡಳಿತದ ವತಿಯಿಂದ ಪೂಜೆ ಸಲ್ಲಿಸುವ ಮೂಲಕ ಗಜ ಪಯಣಕ್ಕೆ ಚಾಲನೆ ಸಿಗಲಿದೆ. ಆ.10ರ 9.20ರಿಂದ 10 ಗಂಟೆ ನಡುವಿನ ಕನ್ಯಾ ಲಗ್ನದಲ್ಲಿ ಗಜಪೂಜೆ ನೆರವೇರಿಸಿ ಮೈಸೂರು ಅರಮನೆ ಅಂಗಳಕ್ಕೆ ಗಜಪಡೆಯನ್ನು ಸಾಂಪ್ರದಾಯಿಕವಾಗಿ ಸ್ವಾಗತಿಸಲಾಗುತ್ತದೆ. ▶ 8ನೇ ಪುಟಕ್ಕೆ

ಮಳೆಯಿಂದ ಹಾನಿ: ರಸ್ತೆ ದುರಸ್ತಿಗೆ 200 ಕೋಟಿ ಬಿಡುಗಡೆ

ಬೆಂಗಳೂರು, ಜು.19(ಕೆಎಂಶಿ)– ಇತ್ತೀಚೆಗೆ ಬಿದ್ದ ಭಾರೀ ಮಳೆ ಮತ್ತು ನೆರೆಯಿಂದ ಹಾನಿಯಾಗಿರುವ ರಾಜ್ಯ ಮತ್ತು ಜಿಲ್ಲಾ ಹೆದ್ದಾರಿ ದುರಸ್ಥಿಗಾಗಿ ರಾಜ್ಯ ಸರ್ಕಾರ 200 ಕೋಟಿ ರೂ. ಬಿಡುಗಡೆ ಮಾಡಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಲೋಕೋಪಯೋಗಿ ಸಚಿವ ಸಿಸಿ ಪಾಟೀಲ್, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗದಲ್ಲಿ ಉಂಟಾಗುತ್ತಿರುವ ಭೂ ಕುಸಿತ ಹಾಗೂ ಭೂಕಂಪಕ್ಕೆ ಸಂಬಂಧಿಸಿದಂತೆ ಪರಿಶೀಲನೆ ▶ 4ನೇ ಪುಟಕ್ಕೆ

ಕೆಆರ್‌ಎಸ್, ಕಬಿನಿಗೆ ಇಂದು ಮುಖ್ಯಮಂತ್ರಿ ಬೊಮ್ಮಾಯಿ ಬಾಗಿನ

ಮೈಸೂರು, ಜು.19(ಆರ್‌ಕೆ)–ಮೈದುಂಬಿರುವ ಕೃಷ್ಣರಾಜಸಾಗರ ಮತ್ತು ಕಬಿನಿ ಜಲಾಶಯಗಳಿಗೆ ನಾಳೆ (ಜು.20) ಸಿಎಂ ಬಸವರಾಜ ಬೊಮ್ಮಾಯಿ ಬಾಗಿನ ಅರ್ಪಿಸುವರು.




ಬುಧವಾರ ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯ ಕಬಿನಿ ಜಲಾಶಯಕ್ಕೆ ತೆರಳಿ ಬಾಗಿನ ಅರ್ಪಿಸುವ ಮುಖ್ಯಮಂತ್ರಿಗಳು, ನಂತರ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು, ಕೃಷ್ಣರಾಜಸಾಗರ ಜಲಾಶಯದ ಕಾವೇರಿಗೆ ಬಾಗಿನ ಅರ್ಪಿಸುವರು. ಕೃಷ್ಣರಾಜ ಸಾಗರ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 124.80 ಅಡಿ ತಲುಪಿದ್ದು, ಜಲಾಶಯಕ್ಕೆ 57,765 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಅಣೆಕಟ್ಟೆಯ ಸುರಕ್ಷತೆ ದೃಷ್ಟಿಯಿಂದ 57,557 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಇಂದು ಕಬಿನಿ ಜಲಾಶಯದ ನೀರಿನ ಮಟ್ಟ ▶ 4ನೇ ಪುಟಕ್ಕೆ

ಮಡಿಕೇರಿ ಸಮೀಪ ಭಾರೀ ಜಲಸ್ಫೋಟ

ಉಕ್ಕಿ ಹರಿಯುವ ನೀರಿನಲ್ಲಿ ಕೊಚ್ಚಿ ಹೋದ ಮರದ ದಿಮ್ಮಿಗಳು, ಕಲ್ಲು ಬಂಡೆಗಳು, ಸೇತುವೆ ಧ್ವಂಸ

- ಗ್ರಾಮ ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳಿದ ಗ್ರಾಮಸ್ಥರು
- ನಿಶಾನಿ ಬೆಟ್ಟದಲ್ಲಿ ಭಾರೀ ಬಿರುಕು, ಪ್ರಾಕೃತಿಕ ವಿಕೋಪದ ಆತಂಕ
- ಶಾಸಕರು, ಜಿಲ್ಲಾಧಿಕಾರಿ, ಅಧಿಕಾರಿಗಳು ಸ್ಥಳಕ್ಕೆ ಭೇಟಿ



ಮಡಿಕೇರಿ, ಜು.19– ಮಡಿಕೇರಿ ತಾಲೂಕಿನ ಮದೆನಾಡು ಸಮೀಪದ 2ನೇ ಮೊಣ್ಣಂಗೇರಿಯಲ್ಲಿ ಸೋಮವಾರ ರಾತ್ರಿ ಭಾರೀ ಶಬ್ದದೊಂದಿಗೆ 'ಜಲ ಸ್ಫೋಟ' ಸಂಭವಿಸಿದ್ದು, ನಿಶಾನಿ ಬೆಟ್ಟದಲ್ಲಿ ಭಾರೀ ಭೂ ಕುಸಿತವಾಗಿದೆ. ಮಳೆ ಪ್ರಮಾಣ ಕುಗ್ಗಿದ್ದರೂ ರಾತ್ರೋ ರಾತ್ರಿ ಜಲಸ್ಫೋಟ ಸಂಭವಿಸಿರುವುದು ಗ್ರಾಮಸ್ಥರು ಸೇರಿದಂತೆ ಆಡಳಿತ ವ್ಯವಸ್ಥೆಯನ್ನೇ ಬೆಚ್ಚಿ ಬೀಳಿಸಿದೆ.

ತೊರೆಯ ನೀರಿನಲ್ಲಿ ಭಾರೀ ಪ್ರಮಾಣದ ಮರದ ದಿಮ್ಮಿಗಳು ಕೊಚ್ಚಿ ಬಂದಿದ್ದರೆ, ಬೃಹತ್ ಕಲ್ಲು ಬಂಡೆಗಳು ಉರುಳಿ ಬಂದು 2ನೇ ಮೊಣ್ಣಂಗೇರಿಯಲ್ಲಿರುವ ರಾಮನಕೊಲ್ಲಿ ಸೇತುವೆಗೆ ಅಳವಡಿಸಿದ್ದ ಮರದ ಸೇತುವೆಯನ್ನು ಧ್ವಂಸಗೊಳಿಸಿದೆ. ಜಲಸ್ಫೋಟದ ಶಬ್ದ ಕೇಳಿ ಬಂದ ತಕ್ಷಣವೇ ಗ್ರಾಮಸ್ಥರು ▶ 8ನೇ ಪುಟಕ್ಕೆ

ದೇಶದಲ್ಲೇ ರಾಜ್ಯ ಬಿಜೆಪಿ ಸರ್ಕಾರ ಅತ್ಯಂತ ಭ್ರಷ್ಟ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ



ಮೈಸೂರು ಪತ್ರಕರ್ತರ ಭವನದಲ್ಲಿ ಪತ್ರಕರ್ತರ ಸಂಘ ಆಯೋಜಿಸಿದ್ದ 'ಸಂವಾದ' ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿದರು. ಚಿತ್ರದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಇದ್ದಾರೆ.

ಮೈಸೂರು, ಜು.19 (ಆರ್‌ಕೆಬಿ)–ಕರ್ನಾಟಕದ ಬಿಜೆಪಿ ಸರ್ಕಾರವು ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರದ ವಿರುದ್ಧ ಇಂದಿಲ್ಲಿ ವಾಗ್ದಾಳಿ ನಡೆಸಿದರು.

ಹೆಚ್.ಡಿ.ಕೋಟೆಯಲ್ಲಿ ಕೆಂಪೇಗೌಡ ಜಯಂತಿ ಆಚರಣೆಯಲ್ಲಿ ಭಾಗವಹಿಸಲು ತೆರಳುವ ಮುನ್ನ ಮೈಸೂರು ಪತ್ರಕರ್ತರ ಭವನದಲ್ಲಿ ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ 'ಸಂವಾದ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದಿನದಿಂದ ದಿನಕ್ಕೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದರಿಂದ ಜನಸಾಮಾನ್ಯರು ಹಿಂದೆಂದೂ ಕಾಣದಷ್ಟು ಕಂಗಾಲಾಗಿದ್ದಾರೆ. ಬಿಜೆಪಿ ನೀಡಿದ್ದ 2 ಕೋಟಿ ಉದ್ಯೋಗದ ಭರವಸೆ ಏನಾಯಿತು ಎಂದು ಪ್ರಶ್ನಿಸಿದ ಅವರು, ಉದ್ಯೋಗ ನೀಡುವ ಭರವಸೆ ಕೇವಲ 60 ಲಕ್ಷಕ್ಕೆ ಕುಸಿದಿದೆ. ಇದು ನಿರುದ್ಯೋಗಿಗಳಲ್ಲಿ ಆತಂಕ ಉಂಟು ಮಾಡಿದೆ ಎಂದು ದೂರಿದರು. ಪ್ರಸ್ತುತ ಆಡಳಿತದಲ್ಲಿ ಭ್ರಷ್ಟಾಚಾರ ಎಲ್ಲ ಹಂತಗಳಲ್ಲಿ ಮೇಲುಗೈ ಸಾಧಿಸಿದೆ. ಕೇಂದ್ರವು ಗುತ್ತಿಗೆ ನೀಡುವಿಕೆ ಮತ್ತು ಬಿಲ್‌ಗಳ ಪಾವತಿಯಲ್ಲಿ ಶೇ.40ರಷ್ಟು ಕಮೀಷನ್ ವಿಚಾರ ಗಂಭೀರತೆ ಪಡೆದಿದೆ. ಆತ್ಮಹತ್ಯೆಯೂ ಆಗಿದೆ. ಸಂಬಂಧಿಸಿದ ಮಂತ್ರಿ ರಾಜೀನಾಮೆ ನೀಡಿದ್ದಾರೆ. ಹೀಗಿದ್ದೂ ಅದನ್ನು ತನಿಖೆ ನಡೆಸದೆ ▶ 4ನೇ ಪುಟಕ್ಕೆ

ಮೈಸೂರು ಪತ್ರಕರ್ತರೊಂದಿಗೆ 'ಸಂವಾದ' ಕಾರ್ಯಕ್ರಮ

ಇಡೀ ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರ ಇದಾಗಿದೆ. ಬಿಜೆಪಿಯವರೇ ಆದ ವಿಶ್ವನಾಥ್, ತಮ್ಮದೇ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ಯತ್ನಾಳ್ ಅವರು ಕೂಡ ಹಲವು ಹಗರಣಗಳ ಬಗ್ಗೆ ತಮಗೆ ಸಂಪೂರ್ಣ ಮಾಹಿತಿ ಇದೆ ಎಂದು ಹೇಳುತ್ತಿದ್ದಾರೆ. ಆದರೂ ಅವರಿಗೆ ನೋಟೀಸ್ ನೀಡಿ ವಿಚಾರಣೆ ಮಾಡಿಲ್ಲ. ಆದರೆ ಅಕ್ರಮಗಳನ್ನು ಬಯಲಿಗೆಳೆದ ಪ್ರಿಯಾಂಕ್ ಖರ್ಗೆ ಅವರಿಗೆ ನೋಟೀಸ್ ಕೊಡುತ್ತಾರೆ. ಅವರ ಪಕ್ಷದವರು ಹೇಳಿದಾಗ ಸುಮ್ಮನಿರುತ್ತಾರೆ. ವಿರೋಧ ಪಕ್ಷದವರು ಮಾತನಾಡಿದರೆ ಅವರನ್ನು ಬೆದರಿಸುವ ಪ್ರಯತ್ನ ಮಾಡಲಾಗುತ್ತಿದೆ.

– ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ


ಆ.15ರಂದು ಬೆಂಗಳೂರಿನಲ್ಲಿ ಸ್ವಾತಂತ್ರ್ಯ ನಡಿಗೆ

ಆ.15ರಂದು ದೇಶದ 75ನೇ ಸ್ವಾತಂತ್ರ್ಯೋತ್ಸವ ಆಚರಣೆ ಮಾಡುತ್ತಿದ್ದು, ರಾಜ್ಯದ ಎಲ್ಲ ಕಡೆಗಳಿಂದ ಬೆಂಗಳೂರಿನಲ್ಲಿ ನಡೆಯಲಿರುವ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮಕ್ಕೆ ಬರಬೇಕು. ಸಂಗೊಳ್ಳಿ ರಾಯಣ್ಣ ವೃತ್ತದಿಂದ 1 ಲಕ್ಷ ಜನ ರಾಷ್ಟ್ರ ಧ್ವಜ ಹಿಡಿದು ನ್ಯಾಷನಲ್ ಕಾಲೇಜು ಮೈದಾನ ಸೇರುತ್ತೇವೆ. ಇದು ಪಕ್ಷಾತೀತ ಕಾರ್ಯಕ್ರಮವಾಗಿದ್ದು, ಎಲ್ಲ ಸಂಘಗಳು, ಶಿಕ್ಷಣ ಸಂಸ್ಥೆಗಳು, ಕಾರ್ಮಿಕ ಘಟಕ, ಕಲಾವಿದರು ಭಾಗವಹಿಸುವಂತೆ ಆಹ್ವಾನ ನೀಡುತ್ತೇವೆ. ಆ.1ರಿಂದ 10ರವರೆಗೆ ಎಲ್ಲ ಜಿಲ್ಲೆಗಳಲ್ಲಿ 75 ಕಿ.ಮೀ. ಪಾದಯಾತ್ರೆ ಮಾಡಲಾಗುವುದು. ಬೆಂಗಳೂರಿನ ಕಾರ್ಯಕ್ರಮಕ್ಕೆ ಈ ಭಾಗದ ಜನರು ಆಗಮಿಸಬೇಕು ಎಂದು ಡಿ.ಕೆ.ಶಿವಕುಮಾರ್ ಆಹ್ವಾನ ನೀಡಿದರು.

ಬಿಜೆಪಿ ಸರ್ಕಾರದ ಬಗ್ಗೆ ಜನರಲ್ಲಿ ಬೇಸರವಿದೆ

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಹಿಡಿಯುವುದು ಶತಸಿದ್ಧ

ಮೈಸೂರು, ಜು.19– ಭ್ರಷ್ಟಾಚಾರದಲ್ಲಿ ಮುಳುಗಿ, ಜನಪರ ಆಡಳಿತ ನೀಡುವಲ್ಲಿ ಸಂಪೂರ್ಣ ವಿಫಲವಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರದ ಬಗ್ಗೆ ಜನತೆ ಬೇಸತ್ತಿದ್ದಾರೆ. ಹಿಂದಿನ ಕಾಂಗ್ರೆಸ್ ಸರ್ಕಾರವೇ ಚೆನ್ನಾಗಿತ್ತು ಎಂಬ ಮಾತುಗಳು ರಾಜ್ಯದೆಲ್ಲೆಡೆ ಕೇಳಿ ಬರುತ್ತಿದೆ. ಜನರಿಗೆ ಕಾಂಗ್ರೆಸ್ ಸರ್ಕಾರದ ಆಡಳಿತ ಮತ್ತು ಕಾರ್ಯಕ್ರಮಗಳ ಬಗ್ಗೆ ಅರಿವಾಗಿದೆ. ಹೀಗಾಗಿ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು. ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ 135ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ಭರ್ಜರಿ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಲಿದೆ ಎಂದು ಅಭಿಪ್ರಾಯಪಟ್ಟರು. ▶ 4ನೇ ಪುಟಕ್ಕೆ



ಕಾಂಗ್ರೆಸ್‌ನಲ್ಲಿ ಯಾವುದೇ ಬಣ ಇಲ್ಲ... ಇರುವುದೊಂದೇ ಕಾಂಗ್ರೆಸ್ ಬಣ

ಮೈಸೂರು, ಜು.19(ಆರ್‌ಕೆಬಿ)–ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಣ ಇಲ್ಲ. ಇರುವುದು ಒಂದೇ ಬಣ ಅದು ಕಾಂಗ್ರೆಸ್ ಬಣ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಮೈಸೂರಿನಲ್ಲಿ ಸಂವಾದ ಕಾರ್ಯಕ್ರಮದಲ್ಲಿ 'ಸಿದ್ದರಾಮೋತ್ಸವ' ಹಣೆಪಟ್ಟಿ ಹೊತ್ತಿರುವ ಮಾಜಿ ಸಿಎಂ ಸಿದ್ದರಾಮಯ್ಯನವರ 75ನೇ ಜನ್ಮದಿನಾಚರಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಸಿದ್ದರಾಮಯ್ಯ ವಿಪಕ್ಷ ನಾಯಕರು, ನಾನು ರಾಜ್ಯ ಕಾಂಗ್ರೆಸ್ ನಾಯಕ. ಇಲ್ಲಿ ಯಾವುದೇ ಬಣ ಇಲ್ಲ. ಇರುವುದು ಒಂದೇ ಅದು ಕಾಂಗ್ರೆಸ್ ಬಣ. ನನಗೆ ಕಾಂಗ್ರೆಸ್ ಪಕ್ಷ ಮುಖ್ಯ, ಪಕ್ಷ ಅಧಿಕಾರಕ್ಕೆ ಬರುವುದು ಮುಖ್ಯ. ಕಾಂಗ್ರೆಸ್‌ನಲ್ಲಿ ವ್ಯಕ್ತಿಗಿಂತ ಸಿದ್ಧಾಂತವೇ ಮುಖ್ಯ ಎಂದು ಕಾಂಗ್ರೆಸ್‌ನಲ್ಲಿ ಬಣ ಕಲಹದ ವರದಿಗಳನ್ನು ತಳ್ಳಿ ಹಾಕಿದರು. ಮನುಷ್ಯನ ಬದುಕಿನಲ್ಲಿ ಒಂದೊಂದು ಮೈಲಿಗಲ್ಲು ಇರುತ್ತದೆ. ಕೆಲವರು ನಾಮಕರಣ ಮಾಡಿಕೊಳ್ಳುತ್ತಾರೆ, ಕೆಲವರು ಕಿವಿ ಚುಚ್ಚಿಸುವ, ಮೂಗುಬಟ್ಟು ಚುಚ್ಚಿಸುವ, ಉಪನಯನ, ಮದುವೆ ಹೀಗೆ ಒಂದೊಂದು ರೀತಿ ಸಂಭ್ರಮಿಸುತ್ತಾರೆ. ಕೆಲವರು ಪುಸ್ತಕ ಬರೆದು ತಮ್ಮ ಭಾವನೆ ಹಂಚಿಕೊಳ್ಳುತ್ತಾರೆ. ಆಗ ಅವರ ▶ 4ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮನೆಯಾಕೆ : (ಹಾಲಿನವನೊಡನೆ)
ಏನಯ್ಯ ಇವತ್ತು ಹಾಲು ತುಂಬಾ ನೀರಾಗಿದೆ?
ಹಾಲಿನವ : ಏನಿಲ್ಲ ತಾಯಿ, ರಾತ್ರಿ ಮಳೆಯಲ್ಲಿ ನಮ್ಮ ಹಸು ಚೆನ್ನಾಗಿ ನೆನೆದಿತ್ತು!

ಮೈಸೂರು ಮಿತ್ರ
ಬುಧವಾರ, 20 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಏನನ್ನೂ ನೀಡಲಾಗದಿದ್ದರೂ ಒಳ್ಳೆಯ ಮಾತುಗಳಿಂದಾದರೂ ಸತ್ಕರಿಸು
– ಹಿತೋಪದೇಶ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಪ್ಪ ಅವ್ವನಂತ ನೆಂಟ್ರಿಲ್ಲ, ಹಿಟ್ಟು ಸೊಪ್ಪಿಗಿಂತ ಊಟವಿಲ್ಲ

ನಿಮ್ಮ ಪತ್ರಗಳು

ಸಮಸ್ಯೆಗಳ ಆಗರ ಓಂಕಾರ್ ಬಡಾವಣೆ

ಮಾನ್ಯರೆ,



ಮೈಸೂರಿನ ಜೆ.ಪಿ.ನಗರದ ಅಕ್ಕ ಮಹಾದೇವಿ ರಸ್ತೆ ಹಾಗೂ ಅಕ್ಕ ಮಹಾದೇವಿಯವರ ಪ್ರತಿಮೆ ಎಲ್ಲರಿಗೂ ಚಿರಪರಿಚಿತ ಏಕೆಂದರೆ ಇದನ್ನು ಉದ್ಘಾಟನೆ ಮಾಡಿದ್ದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು. ಈಗ ನಾವು ಮಾತನಾಡುತ್ತಿರುವ ವಿಚಾರ ಅಕ್ಕಮಹಾದೇವಿಯ ಪ್ರತಿಮೆಯಿಂದ ಕೇವಲ 100 ಮೀಟರ್ ಅಂತರದಲ್ಲಿ ಓಂಕಾರ್ ಬಡಾವಣೆಯಿದ್ದು ಇಲ್ಲಿನ ರಸ್ತೆಯ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಹಿರಿಯ ನಾಗರಿಕರು, ಮಕ್ಕಳು ಹಾಗೂ ಮಹಿಳೆಯರು ಇಲ್ಲಿ ಗಾಡಿ, ಸೈಕಲ್ ಓಡಿಸಲು ಅಥವಾ ನಡೆದಾಡುವುದು ಅಸಾಧ್ಯ. ಇನ್ನು ಮಳೆ ಬಂದರೆ ದೇವರೇ ಗತಿ. ಎಲ್ಲಿ ಹೊಂಡವಿದೇ ಎಲ್ಲಿ ರಸ್ತೆ ಇದೆ ಎಂದು ತಿಳಿಯುವುದಿಲ್ಲ. ರಸ್ತೆಯ ಹೊಂಡಗಳು ಮನುಷ್ಯರನ್ನೇ ನುಂಗುವಂತೆ ಕಾಣುತ್ತವೆ.

ಪ್ರತಿಮೆಯ ಪಕ್ಕದಲ್ಲಿ ಇರುವ ಮಳೆ ನೀರು ಚರಂಡಿ. ಈ ಚರಂಡಿಯ ಬಲ ಭಾಗಕ್ಕೆ ಕೇವಲ ಮೂರು ಅಥವಾ ನಾಲ್ಕು ಮನೆಗಳಿಗೆ ಕಾಂಕ್ರೀಟ್ ವಾಲ್ ಅಳವಡಿಸಲಾಗಿದೆ. ವಿಚಾರಣೆ ಮಾಡಿದ ನಂತರ ತಿಳಿದು ಬಂದದ್ದು, ಅದರಲ್ಲಿ ಒಂದು ಮನೆ ಯಾರೋ ರಾಜಕೀಯ ವ್ಯಕ್ತಿಗೆ ಸೇರಿದ್ದಾಗಿದೆ ಎಂದು. ಹಾಗಾದರೆ ನಾವು ಸಾಮಾನ್ಯ ಜನರು ಏನು ಮಾಡಬೇಕು ಸ್ವಾಮಿ? ಎಲ್ಲಾ ಕಸದ ರಾಶಿ ಹಾಗೂ ಮಣ್ಣು ರಾಶಿಯನ್ನು ಇತ್ತೀಚೆಗೆ ಚರಂಡಿಯೊಳಗೆ ತಳ್ಳಲಾಗಿದೆ. ಮುಂಚಿನಿಂದಲೂ ಇಲ್ಲಿ ಹಾವು ಹಾಗೂ ಇತರೆ ಕ್ರಿಮಿಗಳ ಹಾವಳಿ ಇದೆ. ಆದರೆ ಈಗ ಭಯದಲ್ಲಿ ನಡೆದಾಡುವ ಪರಿಸ್ಥಿತಿ ಎದುರಾಗಿದೆ.

ಬಡಾವಣೆಯ ಖಾಲಿ ನಿವೇಶನಗಳಲ್ಲಿ ಎತ್ತರವಾಗಿ ಬೆಳೆದು ನಿಂತಿರುವ ಗಿಡಗಂಟಿಗಳನ್ನು ಮುಡಾ ಅಥವಾ ಕಾರ್ಪೊರೇಷನ್‌ನವರು ಇಲ್ಲಿಯವರೆಗೂ ಒಂದು ಸಾರಿಯೂ ತೆರವುಗೊಳಿಸಿಲ್ಲ. ವಿಪರ್ಯಾಸವೆಂದರೆ ಪಕ್ಕದ ಪ್ರತಿಮೆಯ ಸುತ್ತಲಿನ ರಸ್ತೆ ಹಾಗೂ ಖಾಲಿ ನಿವೇಶನಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ತೆರವುಗೊಳಿಸಲಾಗುತ್ತದೆ. ಇದನ್ನು ಪ್ರಶ್ನೆ ಮಾಡಿದ್ದಕ್ಕೆ ಸಿಕ್ಕ ಉತ್ತರ ಆ ಜಾಗ ಮುಡಾಗೆ ಸೇರಿದ್ದು ಎಂದು. ಯಾಕೆ ಸ್ವಾಮಿ ನಾವು ಕಂದಾಯ ಕಟ್ಟುವುದಿಲ್ಲವೇ?

ಈ ಎಲ್ಲಾ ಸಮಸ್ಯೆಗಳ ಬಗ್ಗೆ ಬಡಾವಣೆಯ ಕಾರ್ಪೊರೇಟರ್ ಶ್ರೀಮತಿ ಶಾಂತಮ್ಮ ವಡಿವೇಲು ಅವರನ್ನು ನಿವಾಸಿಗಳು ಪ್ರಶ್ನಿಸಿದರೂ ಏನು ಪ್ರಯೋಜನವಾಗಿಲ್ಲ. ಕಾರ್ಪೊರೇಟರ್ ಈಗಲಾದರೂ ಎಚ್ಚರಗೊಳ್ಳುವರೇ, ಕಾದು ನೋಡಬೇಕಾಗಿದೆ. ಶೀಘ್ರವೇ ಪಾಲಿಕೆ ಅಥವಾ ಸಂಬಂಧಿತ ಅಧಿಕಾರಿಗಳು ಗಮನಹರಿಸಿ ದುರಸ್ತಿ ಮಾಡಬೇಕೆಂದು ಮನವಿ.

– ಓಂಕಾರ್ ಬಡಾವಣೆಯ ನಿವಾಸಿಗಳು, ಮೈಸೂರು.

ಸರ್ಕಾರಕ್ಕೆ ಕನಿಷ್ಠ ಮಾನವೀಯತೆ ಅಗತ್ಯ

ಮಾನ್ಯರೆ,

ದಿನಬಳಕೆಯ ವಿವಿಧ ವಸ್ತುಗಳು ಮತ್ತು ಹಲವು ಸೇವೆಗಳ ಮೇಲಿನ ಜಿಎಸ್‌ಟಿ ತೆರಿಗೆ ದರ ಜಾರಿಗೆ ಬಂದಿದೆ. ಹೀಗಾಗಿ ಜನಸಾಮಾನ್ಯರಿಗೆ ಮತ್ತೊಂದು ಸುತ್ತಿನಲ್ಲಿ ಜೇಬು ಸುಡುವುದು ಖಚಿತವಾಗಿದೆ. ಪ್ಯಾಕ್ ಮಾಡಿದ ಮೀನು, ಮಾಂಸ, ಮೊಸರು, ಪನ್ನೀರ್, ಜೇನುತುಪ್ಪ, ಬೆಲ್ಲ, ಒಣಗಿಸಿದ ತರಕಾರಿ, ಗೋಧಿ, ಇತರೆ ಧಾನ್ಯಗಳು, ಮಂಡಕ್ಕಿ, ಸಾವಯುವ ಗೊಬ್ಬರ, ಕೋಕೋಪೀಟ್‌ಗೆ ಶೇ.5ರಷ್ಟು ತೆರಿಗೆ ಜಾರಿಯಾಗಿರುವ ಹಿನ್ನೆಲೆಯಲ್ಲಿ ಇವೆಲ್ಲಾ ದುಬಾರಿಯಾಗಿದೆ. ಜೊತೆಗೆ ನಿತ್ಯದ ಬಾಡಿಗೆ 1000 ರೂ.ಗಿಂತ ಕಡಿಮೆ ಇರುವ ಹೋಟೆಲ್ ಕೊಠಡಿಗಳಿಗೆ ಇದ್ದ ವಿನಾಯ್ತಿ ರದ್ದಾಗಿ, ಇನ್ನು ಶೇ.12ರಷ್ಟು ತೆರಿಗೆ ಬೀಳಲಿದೆ. ಅಲ್ಲದೆ ನಿತ್ಯ 5000 ರೂ.ಗಿಂತ ಹೆಚ್ಚಿನ ಶುಲ್ಕ ಇರುವ ಐಸಿಯು ಹೊರತುಪಡಿಸಿದ ಆಸ್ಪತ್ರೆ ಕೊಠಡಿಗಳ ಬಿಲ್‌ಗೆ ಶೇ.5ರಷ್ಟು ಜಿಎಸ್‌ಟಿ ಜಾರಿಯಾಗುವ ಕಾರಣ ಅದು ಕೂಡ ದುಬಾರಿಯಾಗಿದೆ. ಈಗಾಗಲೇ ಹಲವು ಬಗೆಯ ಪದಾರ್ಥಗಳಿಗೆ ಹೆಚ್ಚಿನ ದರ ನಿಗದಿಪಡಿಸಲಾಗಿದ್ದು, ಮತ್ತೆ ಬೆಲೆ ಏರಿಕೆ ಬಹಳ ಅನ್ಯಾಯ. ಕೇಂದ್ರದ ಈ ನಿರ್ಧಾರಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದು, ಜನಸಾಮಾನ್ಯರ ಕಷ್ಟವನ್ನು ಕೇಂದ್ರ ಸರ್ಕಾರ ಅರಿತುಕೊಳ್ಳಬೇಕು. ಜನರ ಕಷ್ಟ ಅರಿಯಬೇಕಾದ ಸರ್ಕಾರ ಬಡ ಜನರ ಬದುಕಿನ ಜೊತೆ ಚೆಲ್ಲಾಟ ಆಡಬಾರದು.

–ಅನನ್ಯ, ಮಹಾರಾಜ ಕಾಲೇಜು, ಮೈಸೂರು.

ಚಾಮರಾಜ ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ನಾವು ನೂತನ ಮಹಾರಾಣಿ ಕಾಲೇಜು ಪಡುವಾರಹಳ್ಳಿಯಲ್ಲಿ ವ್ಯಾಸಂಗ ಮಾಡುತ್ತಿದ್ದೇವೆ. ಇಲ್ಲಿ ತಾವು ತಮ್ಮ ಅನುದಾನದಲ್ಲಿ ಸುಸಜ್ಜಿತ ಬಸ್ ತಂಗುದಾಣವನ್ನು ನಿರ್ಮಿಸಿದ್ದೀರಿ. ಆದರೆ ಏನು ಪ್ರಯೋಜನ ಸ್ವಾಮಿ. ಒಂದೇ ಒಂದು ಬಸ್ ಸಹ ಬರುವುದಿಲ್ಲ. ಆಕಾಶವಾಣಿಯಿಂದ ನಡೆದುಕೊಂಡು ಕಾಲೇಜಿಗೆ ಬರಬೇಕು. ಕಾಲೇಜು ಮುಗಿದ ನಂತರ ಆಕಾಶವಾಣಿಗೆ ತೆರಳಬೇಕು. ಕೆಆರ್‌ಎಸ್, ಇಲವಾಲ, ಹೆಬ್ಬಾಳು ಕಡೆಯಿಂದ ಬರುವ ಬಸ್‌ಗಳನ್ನು ಶ್ರೀ ರಾಮಕೃಷ್ಣ ಆಶ್ರಮದ ಬಲಕ್ಕೆ ಮಹರ್ಷಿ ವಾಲ್ಮೀಕಿ ರಸ್ತೆಯಿಂದ ಮಹಾರಾಣಿ ಕಾಲೇಜು, ಕಲಾಮಂದಿರದ ಮೂಲಕ ಮೆಟ್ರೋಪೋಲ್ ವೃತ್ತದ ಎಡಕ್ಕೆ ಸಂಚರಿಸಿ ಸಿಟಿ ಬಸ್ ನಿಲ್ದಾಣ ತಲುಪಿದರೆ ಬಸ್ ಸಮಸ್ಯೆ ಬಗೆಹರಿಯುತ್ತದೆ. ಪ್ರಾದೇಶಿಕ ಆಯುಕ್ತರ ಕಚೇರಿ ಜಲದರ್ಶಿನಿಯಲ್ಲಿರುವ ಶಾಸಕರ, ಸಂಸದರ ಕಚೇರಿಗೆ ತೆರಳುವವರಿಗೆ ಅನುಕೂಲವಾಗುತ್ತದೆ. ಚಾಮರಾಜ ಕ್ಷೇತ್ರದ ಶಾಸಕರು ಇದನ್ನು ಕಾರ್ಯರೂಪಕ್ಕೆ ತರುವಂತೆ ಮನವಿ.

– ನೊಂದ ವಿದ್ಯಾರ್ಥಿನಿಯರು, ಮಹಾರಾಣಿ ಕಾಲೇಜು, ಪಡುವಾರಹಳ್ಳಿ.

ಡೋಲಿಯೂ ದೇಶವೂ

ಮಾನ್ಯರೆ,

ತುಂಬು ಗರ್ಭಿಣಿಯನ್ನು (ಸೀರೆಯ) ಡೋಲಿಯಲ್ಲಿ ಹೊತ್ತು, ನಡು ರಾತ್ರಿ ಕಾಡು ದಾರಿಯಲ್ಲಿ 15 ಕಿ.ಮೀ. ಸಾಗಿ, ಆಸ್ಪತ್ರೆಗೆ ಸೇರಿಸಲಾಯಿತಂತೆ!

ಎಂಥ ಸಿಹಿ ಸುದ್ದಿ! ಆ ಅವೇಳೆಯಲ್ಲಿ ಆಸ್ಪತ್ರೆಗೆ ಸೇರಿಸಿಕೊಂಡರೆ? ಇರಲಿ. ದೇಶದ 'ಅಭಿವೃದ್ಧಿ'ಗೆ ಇದಕ್ಕಿಂತ ದೊಡ್ಡ ದ್ಯೋತಕ ಬೇರೊಂದುಂಟೆ? ವಾಸ್ತವವಾಗಿ, ಇಡೀ ದೇಶವನ್ನು ಡೋಲಿಯಲ್ಲಿ ಹೊತ್ತು ಸಾಗಿಸಿ, ಯಾವುದಾದರೂ "ಅತೀತ" ಆಸ್ಪತ್ರೆಗೆ ಸೇರಿಸಬೇಕು!

ಸರಳ ಮತ್ತು ಸಂಕೀರ್ಣ

ಶಾಸ್ತ್ರಸಂಪ್ರದಾಯಗಳಿಲ್ಲದ ಸರಳ ವಿವಾಹಗಳಿಗೆ ಈಗ ಪತ್ರಿಕೆಗಳಲ್ಲಿ ಪ್ರಚಾರ! ತಪ್ಪೇನಿಲ್ಲ. ಆದರೆ 'ಸರಳ' ವಿವಾಹಗಳಿಗಿಂತ 'ಸಂಕೀರ್ಣ'– ಅರ್ಥಾತ್ ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಗಳು ಹೆಚ್ಚು ಹೆಚ್ಚಾಗಿ ನಡೆಯಲಿ. ಅವುಗಳ ಸುದ್ದಿಗಳು ಪತ್ರಿಕೆಗಳಲ್ಲಿ ರಾರಾಜಿಸಲಿ!

–ಸಿಪಿಕೆ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ದಾರಿಯ ತಿರುವಿನ ದೀಪಗಳ ಚಿತ್ತಾರ

ಜೀವನದಲ್ಲಿ ಪ್ರತಿಯೊಬ್ಬರೂ ಹಲವಾರು ವ್ಯಕ್ತಿಗಳನ್ನು ಕಾಣುತ್ತಾರೆ. ಅವರಲ್ಲಿ ಕೆಲವರು ರಾಜಕೀಯ ನಾಯಕರಿರಬಹುದು, ಇನ್ನು ಕೆಲವರು ಅಧಿಕಾರಿಗಳಾಗಿರಬಹುದು, ಮತ್ತೆ ಕೆಲವರು ಪ್ರಸಿದ್ಧ ಕಲಾವಿದರಾಗಿರಬಹುದು, ಅನೇಕರು ಸಾಮಾನ್ಯ ಮಾನವರೇ ಆಗಿರಬಹುದು. ಆದರೆ ಗಮನಿಸಿ ನೋಡಿದರೆ, ಒಬ್ಬೊಬ್ಬರ ಜೀವನವೂ ಒಂದು ಕಥೆಗೆ ವಿಷಯವಾಗಬಹುದು, ಬಿಚ್ಚಿ ನೋಡಿದರೆ ಒಂದು ಕಾದಂಬರಿಗೆ ವಸ್ತುವಾಗಬಹುದು. ಬದುಕನ್ನು ದಾಖಲಿಸಲು ಶಕ್ತಿ ಇದ್ದವರಿಗೆ ಎಲ್ಲೆಲ್ಲೂ ಸಾಮಗ್ರಿ ಸಿಕ್ಕುತ್ತದೆ. ಲೇಖನವನ್ನು ಬರೆಯಲು ಮಹಾತ್ಮ ಗಾಂಧಿ, ಪಂಡಿತ್ ನೆಹರೂ ಅಂತಹ ದೊಡ್ಡವರೇ ಆಗಬೇಕಾಗಿಲ್ಲ. ಸಾಧಾರಣರಂತೆ ಕಾಣಿಸುವ ವ್ಯಕ್ತಿಗಳ ಬದುಕಿನಲ್ಲೂ ಓದುಗರ ಆಸಕ್ತಿಯನ್ನು ಕೆರಳಿಸುವ ಘಟನೆಗಳು ನಡೆದಿರುತ್ತವೆ. ಲೇಖಕರಿಗೆ ಅವನ್ನು ನೋಡುವ "ಕಣ್ಣು" ಇರಬೇಕು, ಬರೆಯುವ 'ಕೈ' ಇರಬೇಕು ಅಷ್ಟೆ. ಇದನ್ನೇ ಪ್ರತಿಭೆ, ಶಕ್ತಿ ಎಂದು ಪ್ರಾಚೀನರು ಕರೆದರು. ಡಿ.ವಿ.ಜಿ. ಅವರ ಜ್ಞಾಪಕ ಚಿತ್ರಮಾಲೆಯಲ್ಲಿ ಚಿತ್ರಿತವಾಗಿರುವ ಎಲ್ಲರೂ ಪ್ರಪಂಚ ಪ್ರಸಿದ್ಧರೇನಲ್ಲ. ಆದರೂ ಡಿ.ವಿ.ಜಿ. ಅವರ ಲೇಖನಿ ಅವರನ್ನೆಲ್ಲ 'ಅಮರ'ರನ್ನಾಗಿ ಮಾಡಿದೆ. ಹಾಗೆ ಈಗ ಗಜಾನನ ಈಶ್ವರ ಹೆಗಡೆಯವರು ತಾವು ಕಂಡ ಅನೇಕರ ವ್ಯಕ್ತಿ ಚಿತ್ರಗಳನ್ನು ಒಂದು ಪುಸ್ತಕದಲ್ಲಿ ನೀಡಿದ್ದಾರೆ. ಹದಿನೆಂಟು ವ್ಯಕ್ತಿಚಿತ್ರಗಳು ಇಲ್ಲಿವೆ. ಪುಸ್ತಕದ ಶೀರ್ಷಿಕೆ **ದಾರಿಯ ತಿರುವಿನ ದೀಪಗಳ ಚಿತ್ತಾರ**. ಈ ಶೀರ್ಷಿಕೆಯ ಔಚಿತ್ಯವನ್ನು ಅವರ ಮಾತುಗಳಲ್ಲೇ ಕೇಳೋಣ–

"ಈ ಗದ್ಯ–ಪದ್ಯ ಸಂಕಲನಕ್ಕೆ ಹೆಸರು ತಂತ್ರದ ಯಾವುದಾದೀತು ಎನ್ನುವ ಪ್ರಶ್ನೆಗೆ ಹೊಳೆದದ್ದು ಒಂದು ಉತ್ತರ ಚಿತ್ತಾರ, ಇನ್ನೊಂದು ದಾರಿಯ ತಿರುವಿನ ದೀಪಗಳು, ದೀಪ ಬೆಳಗುತ್ತದೆ, ಬೆಳಕು ಕೊಡುತ್ತದೆ. ಆ ಬೆಳಕು ವರ್ಣರಂಜಿತ ಆಗುವುದು ಅದಕ್ಕೆ ನಿರ್ದಿಷ್ಟತೆ ದೊರೆತಾಗ ಇದನ್ನು ಭಾವಿಸಿದುದರಿಂದ ಈ ಸಂಕಲನದ ತಲೆಬರಹ "ದಾರಿಯ ತಿರುವಿನ ದೀಪಗಳ ಚಿತ್ತಾರ" ಬದುಕು ಒಂದರ್ಥದಲ್ಲಿ ನಡೆದ ದಾರಿಯೇ.

ಈ ಪುಸ್ತಕದ ಪದ್ಯ ವಿಭಾಗದಲ್ಲಿ ಗಜಾನನ ಹೆಗಡೆಯವರ ಇಪ್ಪತ್ತೆರಡು ಕವಿತೆಗಳೂ ಇವೆ. ಇವುಗಳ ಪರಿಚಯವನ್ನು ಆಮೇಲೆ ಮಾಡಿಕೊಳ್ಳೋಣ. ಲೇಖನ ವಿಭಾಗದಲ್ಲಿ ಮೊದಲನೆಯದು **ಕಾರುಣ್ಯ ಸ್ರೋತ** ಎಂಬುದು. ಶ್ರೀ ಶ್ರೀಧರ ಸ್ವಾಮಿಗಳನ್ನು ಕುರಿತದ್ದು. ಅವರ ಆಶೀರ್ವಾದದಿಂದ ಲೇಖಕರು ವಿದ್ಯಾವಂತರಾದದ್ದನ್ನೂ ಉದ್ಯೋಗವನ್ನು ಪಡೆದುಕೊಂಡದ್ದನ್ನೂ ಈ ಲೇಖನದಲ್ಲಿ ಹೃದಯಂಗಮವಾಗಿ ವಿವರಿಸಿದ್ದಾರೆ. ಸಂಭಾಷಣೆಗಳಲ್ಲಿ ಹವ್ಯಕರ ಕನ್ನಡದ ಸೊಗಡಿದೆ. **ಹೊಸ ಬೇರಿಳಿವ ಸಮಯ** ಎಂಬ ಲೇಖನದಲ್ಲಿ ಪ್ರೊ. ಜಿ.ಎಸ್. ಸಿದ್ದಲಿಂಗಯ್ಯನವರ ಹೃದಯ ವೈಶಾಲ್ಯದ ಪರಿಚಯವನ್ನು ಕೊಟ್ಟಿದ್ದಾರೆ. **ತೆರೆದ ಬಾಗಿಲು** ಎಂಬ ಲೇಖನದಲ್ಲಿ ದೇಜಗೌ ಅವರ ಔದಾರ್ಯ ಮತ್ತು ನೆರವಿನಿಂದ ಲೇಖಕರಿಗೆ ಹೇಗೆ ವಿದ್ಯೆಯ ಬಾಗಿಲು ತೆರೆದು ಕೊಂಡಿತು ಎಂಬುದನ್ನು ಹೃದ್ಯವಾಗಿ ವಿವರಿಸಲಾಗಿದೆ. ಊಟಕ್ಕಾಗಿ ವೀರಶೈವರ ಹಾಸ್ಟೆಲಿನಲ್ಲಿ ಸ್ಥಾನ ಕೊಡಿಸಿದ ಪಿ.ಆರ್. ತಿಪ್ಪೆಸ್ವಾಮಿ ಮತ್ತು ಪ್ರೊ. ಹೆಚ್. ತಿಪ್ಪೇರುದ್ರಸ್ವಾಮಿಯವರ ಸಹಾಯ ಹಸ್ತವನ್ನು ಲೇಖಕರು ಸ್ಮರಿಸಿದ್ದಾರೆ. ತಿಪ್ಪೇರುದ್ರ ಸ್ವಾಮಿಯವರು ಕಾವ್ಯಮೀಮಾಂಸೆಯ ಪಾಠವನ್ನು ಮಾಡುತ್ತಿದ್ದ ಸೊಗಸನ್ನೂ ಅವರು ಚಿತ್ರಿಸಿದ್ದಾರೆ. ಈ ಲೇಖನದ ಹಲವು ಅಂಶಗಳು ಮನಸ್ಸನ್ನು ಮುಟ್ಟುತ್ತವೆ. **ಜಲಾಂಬು** ಎಂಬ ಲೇಖನದಲ್ಲಿ ಸಿಪಿಕೆ ಅವರ ಜ್ಞಾನದ ವೈಶಾಲ್ಯವನ್ನೂ ಕುರಿತು ಹೇಳಿದ್ದಾರೆ. ಅವರೂ ತಿಳಿದಷ್ಟೂ ತೆರೆದುಕೊಳ್ಳುವ ಒಂದು ಬೃಹದ್ ಗ್ರಂಥ ಎಂದೂ ಹೇಳಿದ್ದಾರೆ. **ನನ್ನ ಬಾಳ ಬೆಳಗಿದ ಬೆಳಕು** ಎಂಬ ಲೇಖನವು ತರಳಬಾಳು ಬೃಹನ್ಮಠದ ಶ್ರೀ ಶಿವಾಚಾರ್ಯ ಮಹಾ ಸ್ವಾಮಿಗಳವರ ಉನ್ನತ ವ್ಯಕ್ತಿತ್ವವನ್ನು ಚಿತ್ರಿಸಿದೆ. ಪದ್ವಿನಿ ಅವರು ಲೇಖಕರ ಮಡದಿಯಾದ ಬಗೆಯೂ ಅವರಿಬ್ಬರ ಒಲವಿನ ಪರಿಯೂ ಈ ಲೇಖನದಲ್ಲಿ ಮೂಡಿಬಂದಿವೆ. **ಐದೂ ಬೆರಳುಗಳು ಫಲಪ್ರದವಾಗಿರುವ ಹಸ್ತ** ಎಂಬ ಲೇಖನದಲ್ಲಿ ಪ್ರೊ. ಎಸ್.ಬಿ. ರಂಗನಾಥ್ ಅವರ ವಿಶೇಷ ಗುಣಗಳನ್ನು ಹೇಳಿದ್ದಾರೆ. 'ಈ ಸಂಬಂಧವನ್ನು ಬೆಸೆಯುವ ಮತ್ತು ಜಾರುವ ಸಂದರ್ಭದಲ್ಲಿ ಎಚ್ಚರಿಸುವ ಸಹಜ ಗುಣ ಪ್ರೊಫೆಸರ್ ಎಸ್.ಬಿ. ರಂಗನಾಥ್ ಅವರದು' ಎಂಬ ವಾಕ್ಯ ಅಚ್ಚುಕಟ್ಟಾಗಿದೆ.

ಚೇರ್ಮನ್ ಮೂರ್ತಿ ಮಂಜುನಾಥ ಹೆಗಡೆ ಎಂಬ ಲೇಖನದಲ್ಲಿ ಬರುವ ಘಟನೆಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅಷ್ಟು ಒಳ್ಳೆಯ ಜನರನ್ನು ನಾನಂತೂ ಕಂಡಿಲ್ಲ. ಲೇಖಕರು ಜೀವನ–ಮರಣದ ತೂಗುಯ್ಯಾಲೆಯಲ್ಲಿದ್ದಾಗ ಅವರನ್ನು ಕಾಪಾಡಿದ ಕಂಕನಾಡಿಯ ವೈದ್ಯ ಡಾ. ದೇವಾಡಿಗರನ್ನು ನೆನೆಸಿಕೊಂಡಿದ್ದಾರೆ. ಇಂತಹವರು ಇರುವುದರಿಂದ ಭೂಲೋಕ ಪುಣ್ಯಭೂಮಿಯಾಗಿದೆ ಎನ್ನಬೇಕು. **ಸಾಹಿತ್ಯ ಪರಿಚಾರಕ** ಎಂಬ ಲೇಖನ ಇತ್ತೀಚೆಗೆ ನಮ್ಮನ್ನಗಲಿದ ಡಾ. ಕೆ. ಭೈರವಮೂರ್ತಿಯವರನ್ನು ಪರಿಚಯಿಸುತ್ತದೆ. ಅದರಲ್ಲಿ ಬರುವ ಊಟದ ಬಣ್ಣನೆ ಮತ್ತು ಒಂದು ಪದ್ಯ

ಕೈ ತೊಳೆವಲ್ಲಿಂಯೇ ತಂಬುಲ ತಟ್ಟೆಯು
ಬಣ್ಣ ಕಟ್ಟಿದಡಕೆಲೆ ಚಿಗುರು
ಯಾಲಕ್ಕಿ ಕೊಬ್ಬರಿ ಬೀಜಲವಂಗ
ಓಮದೊಡನೆ ರುಚಿ ಘಮಲಿತ್ತು.

ಅತ್ಯಂತ ಆಕರ್ಷಕವಾಗಿದೆ. **ತೆರೆದುಕೊಳ್ಳುವ ಮಾರ್ಗ** ಎಂಬ ಲೇಖನ ಸಂಗೀತದ ನಾದದ ಬಗೆಗೆ ರಚಿತವಾಗಿದೆ. ವಿದ್ವಾನ್ ಜಿ.ಆರ್. ಭಟ್ಟರು ಇದರ ಕೇಂದ್ರ ಬಿಂದು. **ಸಹೃದಯ ಬಂಗಾರದ ಹಾರ** ಎಂಬ ಲೇಖನದಲ್ಲಿ ಚಿದಂಬರ ಎಂಬ ಸ್ನೇಹಿತನ ಹೊನ್ನಿನ ಹೃದಯದ ಪರಿಚಯವಿದೆ. **'ಶರಣ ಸಂಕುಲ'** ಎಂಬ ನಾಟಕಕ್ಕಾಗಿ ಲೇಖಕರು ಪದ್ಯಗಳನ್ನು ರಚಿಸಿದ ಪ್ರಸಂಗ ಇಲ್ಲಿ ಬಿಂಬಿತವಾಗಿದೆ. "ಆತನ ಸಹವಾಸದ ಸುಖ ಅರಳಿದ ಹೂವಿನ ಗಂಧದಂತೆ ನಮ್ಮೊಂದಿಗೆ ಇದೆ ಎನ್ನುವುದು ಸವಿನೆನಪು' ಎಂಬ ವಾಕ್ಯದಿಂದ ಗಜಾನನ ಹೆಗಡೆಯವರು ಈ ಲೇಖನವನ್ನು ಮುಗಿಸಿದ್ದಾರೆ. **ಕಲಾರಾಧಕ** ಎಂಬ ಲೇಖನದಲ್ಲಿ ಲೇಖಕರ ತಮ್ಮ ಸುಬ್ರಾಯ ಹೆಗಡೆ ಯಕ್ಷಗಾನ ಅಕಾಡೆಮಿಯ ರಾಜ್ಯಪ್ರಶಸ್ತಿಯನ್ನು ಪಡೆದ ಕಲಾವಿದ ಎಂಬ ಮಾಹಿತಿ ಸಿಕ್ಕುತ್ತದೆ. ಅವರ ಕಲಾರಾಧನೆಯ ವಿವಿಧ ಮಜಲುಗಳನ್ನು ಈ ಲೇಖನದಲ್ಲಿ ಕಾಣಬಹುದು. **ಶ್ರದ್ಧೆ, ಸಿದ್ಧತೆ, ಬದ್ಧತೆಯ ಶ್ರೀಪಾದಣ್ಣ** ಎಂಬ ಲೇಖನ ಶ್ರೀಪಾದ ಹೆಗಡೆ ಮರೋಳೆ ಎಂಬ ಕಲಾವಿದರನ್ನು ಚೆನ್ನಾಗಿ ಪರಿಚಯಿಸುತ್ತದೆ. ಯಕ್ಷಗಾನದ ಕಲಾ ಸೌಂದರ್ಯ ಇಲ್ಲಿ ಮೈಗೂಡಿಸಿಕೊಂಡಿದೆ. **ಬಂಗಾರದ ತುಣುಕು** ಲೇಖಕರ ಭಾವನ ಚಿನ್ನದಂತಹ ಗುಣವನ್ನು ಬಣ್ಣಿಸಿದೆ. 'ಭಾವ ನಿರ್ಗಮಿಸಿದರೂ ಭಾವನೆ ಅಳಿಯುವುದಿಲ್ಲ' ಎಂಬ ವಾಕ್ಯ ಹೃದಯವನ್ನು ಮೀಟುತ್ತದೆ.

ಕೃಷ್ಣ ಶಿವರಾಮ ಹೆಗಡೆ, ಬಂಡೆ ಬೊಮ್ಮೇನಹಳ್ಳಿ ಪರಮೇಶ್ವರಪ್ಪ, ಕೆ. ಅಲಮೇಲಮ್ಮ ಮುಂತಾದವರ ವ್ಯಕ್ತಿತ್ವದ ವಿಶೇಷಗಳನ್ನೂ ಶ್ರೀ ಗಜಾನನ ಹೆಗಡೆ ಗುರುತಿಸಿದ್ದಾರೆ.

ಗುಣಾನಾಂ ವಾ ವಿಶಾಲಾನಾಂ ಸತ್ಕಾರ್ಯಾಣಾಂ ಚ ಯತ್ನತಃ
ಕರ್ತಾರಃ ಸುಲಭಾ ಲೋಕೇ ವಿಜ್ಞಾತಾರಸ್ತು ದುರ್ಲಭಾಃ॥

ಎಂಬ ಮಾತು ಸಂಸ್ಕೃತದಲ್ಲಿದೆ. ಗುಣಗಳನ್ನು ಹೊಂದಿರುವವರೂ ಸತ್ಕಾರ್ಯಗಳನ್ನು ಮಾಡುವ ಅನೇಕರು ಲೋಕದಲ್ಲಿದ್ದಾರೆ. ಆದರೆ ಅವರನ್ನು ಗುರುತಿಸುವವರು ದುರ್ಲಭ ಎಂದು ಈ ಮಾತಿನ ತಾತ್ಪರ್ಯ. ಆ ಗುಣವಂತರನ್ನು ಪ್ರೊ. ಗಜಾನನ ಹೆಗಡೆಯವರು ಗುರುತಿಸಿ ಬೆಳಕಿಗೆ ತಂದಿರುವುದಕ್ಕಾಗಿ ಅವರು ಪ್ರಶಂಸಾರ್ಹರು.

ಪದ್ಯ ವಿಭಾಗ

ಇದರಲ್ಲಿ ಇಪ್ಪತ್ತೆರಡು ಕವಿತೆಗಳಿವೆ. ಶ್ರೀ ಕೃಷ್ಣನನ್ನು ಬಣ್ಣಿಸುವ **ಪರಿಮಳಮ್ಮನ ಗೊಂಬೆ ಪಟ್ಟ** ಆಕರ್ಷಕವಾಗಿದೆ. ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಬಗೆಗೆ ಬರೆದಿರುವ **ಸಂಭವಿಸಿದ ಗುರುಮೂರ್ತಿ** ಎಂಬ ಕವಿತೆ ಭಾವಪೂರ್ಣವಾಗಿದೆ.

ಇವರಲ್ಲ ಜಗದ್ಗುರು
ಇವರಲ್ಲ ಪದ್ಮವಿಭೂಷಣ
ಇವರಲ್ಲವೇ ಅಲ್ಲಿ ನಿರ್ಜೀವ ರತ್ನ
ಇವರು ಇವರೇ ದೇವರಂತೆ
ಉಪಾಧಿಗಳೆಲ್ಲ ಕಿರಿದು ಕಿರಿದಾಗಿ
ಭವನಿಮಜ್ಜನಗೊಂಡ
ಉರಿಯಳಿದ ಬೆಳಕು

ಎಂಬ ಸಾಲುಗಳು ಗಮನಾರ್ಹವಾಗಿವೆ. ಶ್ರೀ ಗುರುಸಿದ್ಧಲಿಂಗಯ್ಯ ಎಂಬ ಕವಿತೆಯಲ್ಲಿ 'ಅಪರಿಗ್ರಹ' ಎಂಬ ತತ್ತ್ವವನ್ನು ಸಿದ್ಧಲಿಂಗಯ್ಯನವರು ಹೇಗೆ ಪಾಲಿಸುತ್ತಿದ್ದರು ಎಂಬುದು ಅಭಿವ್ಯಕ್ತವಾಗಿದೆ. ತಾಯಿ ಥೆರೇಸಾ 'ಕೈಕಾಲಿಲ್ಲದ ಬುದ್ಧಿಮಾಂದ್ಯದ ಸಾಯುವ ಕಂದರು ನಿಮ್ಮವರು' ಎಂಬ ವಾಕ್ಯ ಮರ್ಮಸ್ಪರ್ಶಿಯಾಗಿದ್ದು ಥೆರೇಸಾ ವ್ಯಕ್ತಿತ್ವವನ್ನು ಪ್ರತಿಬಿಂಬಿಸಿದೆ. ಭಾವಭಿತ್ತಿಯಲ್ಲಿ ಪ್ರೊ. ಕೆ. ಭೈರವಮೂರ್ತಿ ಅವರ ಅನುಕರಣೀಯ ಗುಣಗಳಿವೆ. 'ಹೆಸರು ಭೈರವ, ಮನಸು ಕೈರವ' ಎಂದು ಈ ಕವಿತೆಯ ಆರಂಭ.

ಸಂಸ್ಕೃತ–ಕನ್ನಡ–ಇಂಗ್ಲೀಷ್‌ಗಳಲ್ಲಿ ಅಪ್ರತಿಮ ವಿದ್ವಾಂಸರಾಗಿದ್ದ ಡಾ. ಕೆ. ಕೃಷ್ಣಮೂರ್ತಿಗಳಿಗೆ ಮತ್ತು ಅವರ ಸುಪುತ್ರಿ ಡಾ. ಕೆ. ಲೀಲಾ ಅವರಿಗೆ ಲೇಖಕರು ಪದ್ಯಪುಷ್ಪಗಳನ್ನು ಅರ್ಪಿಸಿದ್ದಾರೆ.

ಸಾಗರ ಕಡಲ ಕಡೆದದ್ದು ಕಂಡವರುಂಟೆ
ಒಂದಕ್ಕೊಂದು ಒತ್ತಾಗಿ ನಿಲ್ಲಬಹುದು
ಹಿಂದೂ ಮಹಾಸಾಗರಕ್ಕೆ ಅರಬೀ ಕಡಲಾದಂತೆ
ವಿದ್ಯೆಯ ಸಾಗರ ಎಂಬಂತೆ ತಮ್ಮ ಬದುಕಿನುದ್ದ
ಅಕ್ಷರಲೋಕದಲ್ಲಿ ಬಿತ್ತರಗೊಂಡವರು ತಂದೆ
ಡಾ. ಕೃಷ್ಣಮೂರ್ತಿ ವಿದ್ವತ್ ಲೋಕದ ಚಕ್ಷು
ಸಂಸ್ಕೃತಕ್ಕೆಂತೊ ಅಂತೆ ಕನ್ನಡ ಸರಸ್ವತಿಯ ಕಂಠಾಭರಣ
ವಾಙ್ಮಯ ಸರಸ್ವತಿಯ ರಥದ ದ್ವಿಚಕ್ರ
ಸಾಹಿತ್ಯಶಾಸ್ತ್ರ
ತಡೆಯಿಲ್ಲದೇರಿ ವಿಜೃಂಭಿಸಿದ ಅಪ್ರತಿಮ ವಿದ್ವಾಂಸ
ಒಲಿದ ಶಾರದೆ ತನ್ನ ಕರುಣೆಯ ಕಣ್ಣ
ಬೆಳಕಾರದಿರಲೆಂದು ಕರುಣಿಸಿದ
ಅಪತ್ಯದೀಪ ಲೀಲಾಪ್ರಕಾಶ.

ಕವಿಗದ್ದರ್ ಎಂಬ ಕವಿತೆಯಲ್ಲಿ ಕ್ರಾಂತಿಯ ಕಹಳೆಯಿದೆ.

ಬಡವರ ಕಿಸೆಯಲಿ ತೂರಲು ಬೆರಳು
ಕವಿ ಗದ್ದರ್ ಗುಡುಗಿದರು
ಬಡವರ ಚಾಪೆಗೆ ಚಾಚಲು ಬೆರಳು
ಕವಿ ಗದ್ದರ್ ಗುಡುಗಿದರು– ಇತ್ಯಾದಿ

ಗಜಾನನ ಈಶ್ವರ ಹೆಗಡೆ ಹಿರಿಯ ವಿದ್ವಾಂಸರು. ಅವರ ಚಿಂತನೆಗಳ ಮತ್ತು ಕಲ್ಪನೆಗಳ ಸುಂದರ ಸಾಕ್ಷಾತ್ಕಾರಕ್ಕೆ ಈ ಪುಸ್ತಕ ಸಹಕಾರಿಯಾಗಿದೆ. ಈ ಲೇಖಕರ ರಸರಾಮಾಯಣವನ್ನು ಓದಿದ್ದವರಿಗೆ ಇದು ಒಳ್ಳೆಯ ಕೊಡುಗೆ. ಇದರಲ್ಲಿ ಗದ್ಯಪದ್ಯಗಳೆರಡೂ ಹೃದ್ಯವಾಗಿವೆ.

ಮೂರನೇ ಪುಟದಿಂದ

ಬಿಜೆಪಿ ಸರ್ಕಾರ ಅತ್ಯಂತ ಭ್ರಷ್ಟ

ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ ಎಂದು ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ಬಿಡಿಸಿದರು. ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳಿಗೆ ಒಂದೊಂದು ದರ ನಿಗದಿ ಮಾಡಲಾಗಿದ್ದು, ಮಂತ್ರಿ ಸ್ಥಾನ ಹಾಗೂ ಮುಖ್ಯಮಂತ್ರಿ ಸ್ಥಾನಕ್ಕೂ ದರ ನಿಗದಿ ಮಾಡಿದ್ದಾರೆ. ಬಿಜೆಪಿ ನಾಯಕರೇ ಈ ಬಗ್ಗೆ ಹೇಳಿದ್ದಾರೆ ಎಂದರು. ಯುವಕರಿಗೆ ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುತ್ತೇವೆ ಎಂದು ಹೇಳಿದ ಸರ್ಕಾರ ಈಗ 60 ಲಕ್ಷಕ್ಕೆ ಬಂದು ನಿಂತಿದೆ. ಇನ್ನು ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಮಾಡಿದ್ದು, 10–15 ಅಂಕ ಪಡೆದವರಿಗೆ ಓಎಂಆರ್ ಪತ್ರಿಕೆ ತಿದ್ದಿ 100 ಅಂಕ ನೀಡಲಾಗುತ್ತಿದೆ. ಡಿಜಿ, ಎಡಿಜಿಪಿ, ಸಚಿವರು ಸೇರಿದಂತೆ ಪ್ರಭಾವಿಗಳೇ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಒಬ್ಬೊಬ್ಬ ಅಭ್ಯರ್ಥಿಯಿಂದ 80–90 ಲಕ್ಷ ಹಣ ವಸೂಲಿ ಮಾಡಲಾಗಿದೆ. ರಾಜ್ಯದಲ್ಲಿ ಹಿಂದೆಂದೂ ಇಷ್ಟು ದೊಡ್ಡ ಹಗರಣವನ್ನು ನೋಡಿಲ್ಲ. ಪಾರದರ್ಶಕ ತನಿಖೆ ನಡೆದರೆ ಹಗರಣ ಇನ್ನಷ್ಟು ಆಳದ ಅರಿವಾಗುತ್ತದೆ ಎಂದ ಅವರು, ಎಡಿಜಿಪಿಯೊಬ್ಬರ ಬಂಧನ ಇಡೀ ರಾಜ್ಯದ ಜನ ತಲೆ ತಗ್ಗಿಸುವಂತೆ ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೃತ ಗುತ್ತಿಗೆದಾರರ ಪತ್ನಿ ರಾಜ್ಯಪಾಲರಿಗೆ ಪತ್ರ ಬರೆದು ನ್ಯಾಯಕ್ಕಾಗಿ ಮನವಿ ಮಾಡಿದ್ದಾರೆ. ಸಚಿವರಾದ ನಿರಾಣಿ, ಕಾರಜೋಳ, ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರೇ ಸಂತೋಷ್ ಪಾಟೀಲ್ ಕಾಮಗಾರಿ ಪೂರ್ಣಗೊಳಿಸಿದ್ದಾರೆ ಎಂದು ಒಪ್ಪಿಕೊಂಡಿದ್ದು, ಈವರೆಗೂ ಹಣ ನೀಡಿಲ್ಲ. ಮಂತ್ರಿಗಳ ಅನುಮತಿ ಇಲ್ಲದೆ 4–5 ಕೋಟಿ ಕಾಮಗಾರಿ ಮಾಡಲು ಸಾಧ್ಯವೇ? ರಾಜ್ಯದಲ್ಲಿ ಇಂತಹ ಹತ್ತಾರು ಪ್ರಕರಣಗಳಿವೆ ಎಂದರು.

ಕೋವಿಡ್‌ನಲ್ಲೂ ಜನರ ಜೀವದೊಂದಿಗೆ ಚೆಲ್ಲಾಟ: ಕಳೆದ ವರ್ಷ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ವೈದ್ಯಕೀಯ ಆಮ್ಲಜನಕ ಸಿಲಿಂಡರ್‌ಗಳ ಕೊರತೆಯಿಂದ 36 ಕೋವಿಡ್ ರೋಗಿಗಳ ಸಾವನ್ನು ಬಿಜೆಪಿ ಸರ್ಕಾರ ಮುಚ್ಚಿ ಹಾಕಿದೆ. ರಾಜ್ಯ ಸರ್ಕಾರ ಕೋವಿಡ್ ಸಾಂಕ್ರಾಮಿಕ ರೋಗದಿಂದ ಸಾವನ್ನಪ್ಪಿದ ವ್ಯಕ್ತಿಗಳ ಮರಣ ಪ್ರಮಾಣಪತ್ರವನ್ನು ನೀಡಲು ಹಿಂದೇಟು ಹಾಕುತ್ತಿದೆ. ಅವರ ಕುಟುಂಬಗಳಿಗೆ ಇದುವರೆಗೂ ಸೂಕ್ತ ಪರಿಹಾರ ನೀಡದೆ ಜನಸಾಮಾನ್ಯರ ಶಾಪಕ್ಕೆ ಗುರಿಯಾಗಿದೆ ಎಂದು ಹೇಳಿದರು.

ಕೋವಿಡ್ ಔಷಧ ಮತ್ತು ಉಪಕರಣಗಳ ಖರೀದಿಯಲ್ಲಿ ಸರ್ಕಾರದ ಭ್ರಷ್ಟಾಚಾರವನ್ನು ಬಲವಾಗಿ ಖಂಡಿಸಿದ ಅವರು, ಇಷ್ಟು ಹೆಚ್ಚಿನ ಸಂಖ್ಯೆಯ ಸಾವುಗಳಿಗೆ ಕಾರಣವಾದ ಕೋವಿಡ್ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು.

ಕೋವಿಡ್ ಸಮಯದಲ್ಲಿ ಪಕ್ಷ ಹತ್ತು ಹಲವಾರು ಕಾರ್ಯಕ್ರಮದ ಮೂಲಕ ಹೋರಾಟ ಮಾಡಿದೆ. ಸಾಂಪ್ರದಾಯಿಕ ವೃತ್ತಿ ಉಳಿಸಿಕೊಂಡು ಬಂದವರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದಾಗ ಸರ್ಕಾರ 5 ಸಾವಿರದಂತೆ ಒಂದು ತಿಂಗಳ ಪರಿಹಾರ ಘೋಷಿಸಿತು. ಆದರೆ ಅದನ್ನು ಸರಿಯಾಗಿ ವಿತರಣೆ ಮಾಡಲಿಲ್ಲ. ನೆರೆ ರಾಜ್ಯಗಳಲ್ಲಿ ಆಸ್ತಿ ತೆರಿಗೆ ವಿನಾಯ್ತಿ, ವಾಣಿಜ್ಯ ತೆರಿಗೆ ವಿನಾಯ್ತಿ ನೀಡಲಾಗಿತ್ತು. ಆದರೆ ರಾಜ್ಯದಲ್ಲಿ ಯಾವುದೇ ನೆರವು ನೀಡಲಿಲ್ಲ. ಕೇಂದ್ರ ಸರ್ಕಾರ 20 ಲಕ್ಷ ಕೋಟಿ ರು. ಪ್ಯಾಕೇಜ್ ಘೋಷಿಸಿದ್ದು, ಅದರಿಂದ ರಾಜ್ಯಕ್ಕೆ ಏನು ಪ್ರಯೋಜನವಾಯಿತು ಎಂದು ಲೆಕ್ಕ ಕೇಳಿದರೆ ನೀಡುತ್ತಿಲ್ಲ.

ಕೋವಿಡ್ ಸಂಕಷ್ಟದ ಸಮಯದಲ್ಲಿ ಕಾಂಗ್ರೆಸ್ ಜನರ ಆಹಾರ ಮತ್ತು ಆರೋಗ್ಯಕ್ಕಾಗಿ ಹಗಲು ರಾತ್ರಿ ಶ್ರಮಿಸಿದೆ. 'ಆರೋಗ್ಯ ಹಸ್ತ' ಕಾರ್ಯಕ್ರಮದ ಮೂಲಕ ಕಾಂಗ್ರೆಸ್ ಮನೆ ಮನೆಗೆ ತಲುಪಿದೆ. ಸಾವಿರಕ್ಕೂ ಹೆಚ್ಚು ಆಂಬುಲೆನ್ಸ್‌ಗಳನ್ನು ನೀಡಿ ಜನರ ಸಂಕಷ್ಟದಲ್ಲಿ ಭಾಗಿಯಾಗಿದೆ. ರಾಜ್ಯ ಬಿಜೆಪಿ ಸರ್ಕಾರದಲ್ಲಿ ಕೇಂದ್ರ ಸಚಿವರು ಮೃತಪಟ್ಟಾಗಲೂ ಅವರ ಊರಿನಲ್ಲಿ ಅಂತ್ಯಕ್ರಿಯೆ ಮಾಡಲಾಗಲಿಲ್ಲ. ಬಳ್ಳಾರಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಶವಗಳನ್ನು ಗುಂಡಿಗೆ ಎಸೆಯಲಾಗುತ್ತಿತ್ತು. ಆ ವೇಳೆ ಮೃತಪಟ್ಟವರ ಶವಗಳಿಗೆ ಗೌರವದಿಂದ ಮುಕ್ತಿ ನೀಡುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ ಎಂದರು. 'ಸಂವಾದ'ದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ನಗರ ಉಪಾಧ್ಯಕ್ಷ ಅನುರಾಗ್ ಬಸವರಾಜ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಶತಸಿದ್ಧ

ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆ: ಮುಂದಿನ ಚುನಾವಣೆ ಸಾಮೂಹಿಕ ನಾಯಕತ್ವದಲ್ಲೇ ನಡೆಯಲಿದೆ. ಪಕ್ಷದಲ್ಲಿ ಹಲವು ನಾಯಕರಿದ್ದಾರೆ. ಎಲ್ಲರಿಗೂ ನಾಯಕತ್ವದ ಅರ್ಹತೆ ಇದೆ. ಸದ್ಯದ ಮಟ್ಟಿಗೆ ಅಧ್ಯಕ್ಷ ಸ್ಥಾನವನ್ನು ನನಗೆ, ವಿರೋಧ ಪಕ್ಷದ ಸ್ಥಾನವನ್ನು ಸಿದ್ದರಾಮಯ್ಯ ಅವರಿಗೆ ನೀಡಲಾಗಿದೆ. ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನವನ್ನು ಹರಿಪ್ರಸಾದ್ ಅವರಿಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಸ್ಥಾನವನ್ನು ಖರ್ಗೆ ಅವರಿಗೆ ನೀಡಲಾಗಿದೆ. ಕಾಂಗ್ರೆಸ್ ಪಕ್ಷ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಲಿದೆ. ಯಾವುದೇ ವೈಯಕ್ತಿಕ ಮುಂದಾಳತ್ವದಲ್ಲಿ ಚುನಾವಣೆಗೆ ಹೋಗುವುದಿಲ್ಲ. ಇದು ನನಗೆ ಇರುವ ನಿರ್ದೇಶನ ಎಂದು ತಿಳಿಸಿದರು.

ಕರ್ನಾಟಕದ ಶ್ರೀಮಂತ ಪರಂಪರೆಯನ್ನು ಸ್ಮರಿಸಿದ ಶಿವಕುಮಾರ್, ಕುವೆಂಪು, ಬಸವಣ್ಣ, ಕನಕದಾಸ, ಶಿಶುನಾಳ ಷರೀಫರಂತಹ ಮಹಾನ್ ವ್ಯಕ್ತಿಗಳ ಆಶಯದಂತೆ ಕರ್ನಾಟಕವನ್ನು ಶಾಂತಿ, ಸಮೃದ್ಧಿಯ ತೋಟವಾಗಿ ಕಾಣುವ ಆಸೆ ನಮ್ಮದು ಎಂದರು. ಶಿವಕುಮಾರ್ ಅವರು ಪದೇ ಪದೆ ದೇವರು ವರ ನೀಡುವುದಿಲ್ಲ, ಅವಕಾಶ ನೀಡುತ್ತಾನೆ ಎಂದು ಹೇಳುತ್ತಿರುವುದು ಯಾಕೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಭಗವಂತನನ್ನು ನಂಬುತ್ತೇವೆ. ಯಾರಿಗೂ ವರ ಸಿಗುವುದಿಲ್ಲ, ಶಾಪವೂ ಸಿಗುವುದಿಲ್ಲ. ಕೇವಲ ಅವಕಾಶ ಸಿಗುತ್ತದೆ. ಈ ರಾಜ್ಯಕ್ಕೆ ವರವಾಗಿ ಯಾವುದೇ ಸರ್ಕಾರ ಸಿಗುವುದಿಲ್ಲ. ಚುನಾವಣೆ ಮೂಲಕ ಒಂದು ಉತ್ತಮ ಸರ್ಕಾರ ರಚಿಸಲು ನಿಮಗೆ ಅವಕಾಶ ಸಿಕ್ಕಿದೆ. ಈ ರಾಜ್ಯಕ್ಕೆ ಹಾಗೂ ನಿಮ್ಮ ಮನೆಗೆ ಬೆಳಕು ನೀಡುವ ಕಾಂಗ್ರೆಸ್ ಸರ್ಕಾರವನ್ನು ತರಲು ಅವಕಾಶವಿದೆ. ಈ ಅವಕಾಶವನ್ನು ಕಳೆದುಕೊಳ್ಳಬೇಡಿ ಎಂದು ರಾಜ್ಯದ ಜನರಲ್ಲಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ಚುನಾವಣೆಯಲ್ಲಿ ಟಿಕೆಟ್ ಪಡೆಯಬೇಕಾದರೆ ಸಿದ್ದರಾಮಯ್ಯ ಅಥವಾ ಶಿವಕುಮಾರ್ ಅವರಿಗೆ ನಿಷ್ಠರಾಗಿರಬೇಕೇ ಎಂದು ಕೇಳಿದಾಗ, ನನಗೆ ಯಾರೂ ನಿಷ್ಠರಾಗುವುದು ಬೇಡ, ಕಾಂಗ್ರೆಸ್‌ಗೆ ನಿಷ್ಠರಾಗಿದ್ದರೆ ಸಾಕು ಎಂದರು.

ಮೈಸೂರು ಪತ್ರಿಕೋದ್ಯಮದ ಬಗ್ಗೆ ಶ್ಲಾಘನೆ: ಮೈಸೂರಿನ ಪತ್ರಕರ್ತರ ಬಗ್ಗೆ ಪ್ರಸ್ತಾಪಿಸಿದ ಅವರು, ಮೈಸೂರು ಅತ್ಯಂತ ಗೌರವಯುತ ಹಾಗೂ ರೋಮಾಂಚಕ ಪತ್ರಿಕೋದ್ಯಮ ಹೊಂದಿದೆ. ಮೈಸೂರಿನ ಅನೇಕ ಪತ್ರಕರ್ತರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ. ಸ್ಥಳೀಯ ಮಾಧ್ಯಮಗಳೂ ಬಲಿಷ್ಠವಾಗಿದ್ದು, ಮೈಸೂರು ಪತ್ರಿಕೋದ್ಯಮದ ಶ್ರೀಮಂತಿಕೆ ಭವಿಷ್ಯದಲ್ಲಿಯೂ ಮುಂದುವರಿಯಬೇಕು ಎಂದರು.

ಕಾಂಗ್ರೆಸ್ ಬಣ

ವಿಚಾರ ಪ್ರಚಾರ ಆಗಬೇಕು. ಸಿದ್ದರಾಮಯ್ಯ ಅವರು 75 ವರ್ಷಗಳಲ್ಲಿ 40 ವರ್ಷ ರಾಜಕಾರಣ ಮಾಡಿದ್ದು, 75ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ಆಡಳಿತದಲ್ಲಿ ರಾಜ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅದನ್ನು ಮೆಲುಕು ಹಾಕಬಾರದೇ? ಅವರ ಆಚಾರ ವಿಚಾರಗಳು ಪ್ರಚಾರ ಆಗಬೇಕು. ಅದಕ್ಕಾಗಿ ಅವರ ಅಭಿಮಾನಿಗಳೆಲ್ಲ ಹುಟ್ಟುಹಬ್ಬ ಆಚರಿಸಲು ಮನವಿ ಮಾಡಿದ್ದಾರೆ. ಅದಕ್ಕೆ ಬೇಡ ಎಂದು ಹೇಳಲು ಸಾಧ್ಯವೇ. ಇದು ವ್ಯಕ್ತಿ ಪೂಜೆ ಎಂದು ನೀವು ಭಾವಿಸಿದ್ದೀರಿ. ಇದು ವ್ಯಕ್ತಿ ಪೂಜೆ ಅಲ್ಲ. ಪಕ್ಷದ ಪೂಜೆ. ನಾನು ಹಾಗೂ ರಾಹುಲ್ ಗಾಂಧಿ ಅವರು ಆ ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸುತ್ತೇವೆ. ಒಟ್ಟಾರೆ ನನಗೆ ಕಾಂಗ್ರೆಸ್ ಮತ್ತು ಹೈಕಮಾಂಡ್ ಮುಖ್ಯ. ಪಕ್ಷ ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿಯನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಹೇಳಿದರು.

ಕಾಂಗ್ರೆಸ್‌ನಲ್ಲಿ ಯಾವುದೇ ಜಾತಿ, ಧರ್ಮ ಇಲ್ಲ: ಒಂದು ಜಾತಿ, ಧರ್ಮಕ್ಕೆ ಮಾತ್ರ ನಾನು ನಾಯಕನಲ್ಲ. ಒಂದು ಸಮುದಾಯವಲ್ಲ. ರಾಜ್ಯದ ಎಲ್ಲಾ ಸಮುದಾಯಗಳು ಪಕ್ಷಾತೀತ, ಜಾತ್ಯತೀತವಾಗಿ ಎಲ್ಲಾ ಸಮುದಾಯಗಳು ಬೇಕು. ಕಾಂಗ್ರೆಸ್‌ನಲ್ಲಿ ಯಾವುದೇ ಜಾತಿ, ಧರ್ಮ ಇಲ್ಲ. ಒಗ್ಗಟ್ಟಿನಿಂದ ಹೋಗಬೇಕು. ಕರ್ನಾಟಕ ಶಾಂತಿಯ ತೋಟವಾಗಿರಬೇಕು. ಹಾಗಾಗಿ ಎಲ್ಲಾ ಜಾತಿ, ಧರ್ಮದವರು ಕಾಂಗ್ರೆಸ್ ಪರ ನಿಲ್ಲಬೇಕು ಎಂದು ಮನವಿ ಮಾಡಿದರು.

ಖರ್ಗೆ ಅವರು ಹುಟ್ಟುಹಬ್ಬ ಆಚರಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದು, ಸಿದ್ದರಾಮಯ್ಯ ಅವರು ಯಾಕೆ ಆಚರಿಸಿಕೊಳ್ಳುತ್ತಿದ್ದಾರೆ ಎಂದು ಕೇಳಿದಾಗ, ಅದು ಅವರ ಇಚ್ಛೆ. ನಾನು ಕೂಡ ನನ್ನ ಹುಟ್ಟುಹಬ್ಬ ಆಚರಣೆ ಬೇಡ ಎಂದು ಹೇಳಿ ಕೇದಾರನಾಥಕ್ಕೆ ಹೋಗಿ ಬಂದೆ. ನನ್ನ ಅಭಿಮಾನಿಗಳು ಮಾಧ್ಯಮ ಗಳಲ್ಲಿ ಜಾಹೀರಾತು ನೀಡುತ್ತೇನೆ ಎಂದು ಹೇಳಿದಾಗ ಯಾವುದೂ ಬೇಡ ಎಂದು ಹೇಳಿದೆ. ಅದು ನನ್ನ ವೈಯಕ್ತಿಕ ಆಯ್ಕೆ. ಆದರೂ ಕನಕಪುರ, ರಾಮನಗರದಲ್ಲಿ ಸಾವಿರಾರು ಜನ ರಕ್ತದಾನ, ಆರೋಗ್ಯ ತಪಾಸಣಾ ಶಿಬಿರ ನಡೆಸಿದರು ಎಂದು ತಿಳಿಸಿದರು.

ಬೊಮ್ಮಾಯಿ ಬಾಗಿನ

2,282.43 ಅಡಿ ತಲುಪಿದ್ದು, ಇಂದು 29,768 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಅದೇ ರೀತಿ ಅಣೆಕಟ್ಟೆಯಿಂದ 30,594 ಕ್ಯೂಸೆಕ್ ನೀರನ್ನು ಕಪಿಲಾ ನದಿಗೆ ಬಿಡಲಾಗುತ್ತಿದೆ. ಒಳ ಹರಿವಿನ ಪ್ರಮಾಣ ಹೆಚ್ಚಾಗಿರುವುದರಿಂದ ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಗಳು ಭರ್ತಿಯಾಗಿದ್ದು, ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿಲ್ಲಾ ಉಸ್ತುವಾರಿ ಸಚಿವರು, ಜಲಸಂಪನ್ಮೂಲ ಸಚಿವ, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರ ಸಮ್ಮುಖದಲ್ಲಿ ಬಾಗಿನ ಅರ್ಪಿಸುವರು. ಇದಕ್ಕೂ ಮೊದಲು ಬುಧವಾರ ಬೆಳಗ್ಗೆ 9.45 ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು ವರ್ಧಂತಿಯಂದು ತಾಯಿಗೆ ಮುಖ್ಯಮಂತ್ರಿಗಳು ವಿಶೇಷ ಪೂಜೆ ಸಲ್ಲಿಸುವರು ಎಂದು ಸಿಎಂ ಕಚೇರಿ ಪ್ರಕಟಣೆ ತಿಳಿಸಿದೆ. ಬಾಗಿನ ಸಮರ್ಪಣೆ ಕಾರ್ಯಕ್ರಮಕ್ಕೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು, ಹೆಚ್.ಡಿ. ಕೋಟೆ ತಾಲೂಕಿನ ಕಬಿನಿ ಮತ್ತು ಶ್ರೀರಂಗಪಟ್ಟಣ ತಾಲೂಕು ಕೃಷ್ಣರಾಜಸಾಗರ ಅಣೆಕಟ್ಟೆಯಲ್ಲಿ ಸಿದ್ಧತೆ ಮಾಡಿಕೊಂಡಿದ್ದಾರೆ.

ಬಿಡುಗಡೆ

ನಡೆಸಲು ದೆಹಲಿಯ ತಜ್ಞರಿಗೆ ವಹಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಮಳೆ ಮತ್ತು ನೆರೆಯಿಂದ 141 ಕಿಲೋ ಮೀಟರ್ ರಾಜ್ಯ ಹೆದ್ದಾರಿ, 624 ಕಿಲೋ ಮೀಟರ್ ಮುಖ್ಯರಸ್ತೆಗಳು ಹಾಳಾಗಿವೆ. ಇವುಗಳನ್ನು ಸರಿಪಡಿಸಲು ನಮಗೆ 740 ಕೋಟಿ ರೂ. ಅಗತ್ಯವಿದೆ.

ತುರ್ತಾಗಿ ದುರಸ್ತಿಗೊಳಿಸಬೇಕಾದ ರಸ್ತೆಗಾಗಿ ಈ ಹಣವನ್ನು ಮೊದಲ ಕಂತಿನಲ್ಲಿ ಬಿಡುಗಡೆ ಮಾಡಿದ್ದು, ಬಿಡುಗಡೆಗೊಂಡಿರುವ ಹಣವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಬಳಕೆ ಮಾಡಿ, ರಸ್ತೆಗಳನ್ನು ನಿಗದಿತ ಸಮಯದಲ್ಲಿ ದುರಸ್ತಿಗೊಳಿಸುವಂತೆ ಆದೇಶಿಸಲಾಗಿದೆ ಎಂದರು. 2019 ರಿಂದ ರಾಜ್ಯದಲ್ಲಿ ಸತತವಾಗಿ ಬಾರಿ ಪ್ರಮಾಣದಲ್ಲಿ ಮಳೆ ಬೀಳುತ್ತಿರುವುದರಿಂದ ರಸ್ತೆಗಳು ದೊಡ್ಡ ಪ್ರಮಾಣದಲ್ಲಿ ಹಾಳಾಗುತ್ತಿವೆ. ಕಳೆದ ವರ್ಷ 610 ಕೋಟಿ ರೂ. ವೆಚ್ಚ ಮಾಡಿ, 617 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

2ನೇ ವರ್ಷದ ಸವಿನೆನಪು



ವಿಜಯ್‌ಕುಮಾರ್ (ಆರ್.ಐ)
Revenue inspector
ಕ್ಯಾತಮಾರನಹಳ್ಳಿ, ಮೈಸೂರು

ಮಡಿಕೇರಿ ದಸರಾಗೆ 5 ಕೋಟಿ ರೂ. ಅನುದಾನ ಕೊಡಿ

ಸಿಎಂಗೆ ಶಾಸಕ ಅಪ್ಪಚ್ಚುರಂಜನ್, ಸುಜಾ ಕುಶಾಲಪ್ಪ ಮನವಿ

ಬೆಂಗಳೂರು, ಜು.19– ಪ್ರತಿ ವರ್ಷದಂತೆ ಈ ವರ್ಷವೂ ಮಡಿಕೇರಿ ದಸರಾ ಆಚರಿಸಲು 5 ಕೋಟಿ ರೂ. ಅನುದಾನ ನೀಡುವಂತೆ ಮಡಿಕೇರಿ ಶಾಸಕ ಎಂ.ಪಿ.



ಅಪ್ಪಚ್ಚುರಂಜನ್ ಮತ್ತು ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರುಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸಂಜೆ ನಡೆದ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿ, ಮಡಿಕೇರಿ ದಸರಾ ಉತ್ಸವವನ್ನೂ ಕಳೆದ 25 ವರ್ಷಗಳಿಂದ ಆಚರಿಸಿಕೊಂಡು ಬರುತ್ತಿದ್ದು, ಈ ವರ್ಷವೂ ವೈಭವಯುತವಾಗಿ ದಸರಾ ಆಚರಿಸಲು 5 ಕೋಟಿ ರೂ. ಅನುದಾನ ನೀಡುವಂತೆ ಕೋರಿದರು.

ಸರ್ಕಾರ ಪ್ರತಿವರ್ಷ ಮಡಿಕೇರಿ ದಸರಾ ಉತ್ಸವಕ್ಕೆ ಒಂದು ಕೋಟಿ ರೂ. ಅನುದಾನ ನೀಡುತ್ತಾ ಬಂದಿದ್ದು, ಅದರಲ್ಲಿ ಉತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿತ್ತು. ಈ ವರ್ಷ ಹೆಚ್ಚಿನ ಪ್ರಮಾಣದಲ್ಲಿ ಮಳೆ ಸುರಿದ ಪರಿಣಾಮ ಮಡಿಕೇರಿ ರಸ್ತೆಗಳು ಹಾಳಾಗಿದೆ. ಈ ರಸ್ತೆಗಳನ್ನೂ ದುರಸ್ತಿಗೊಳಿಸಿ ಅದ್ಧೂರಿಯಾಗಿ ಮಡಿಕೇರಿ ಉತ್ಸವ ಆಚರಿಸಲು ಐದು ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಅವರು ಕಾರಣಗಳನ್ನು ವಿವರಿಸಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್‌ಸಿಂಹ, ಶಾಸಕ ಎಸ್.ಎ. ರಾಮದಾಸ್ ಇನ್ನಿತರರಿದ್ದರು.

ಜಿಲ್ಲಾಡಳಿತ ಭವನದ ತಡೆಗೋಡೆ ಕಾಮಗಾರಿ ಕಳಪೆ

ಸಾರ್ವಜನಿಕ ವಲಯದಲ್ಲಿ ವ್ಯಾಪಕ ಚರ್ಚೆ, ಆಕ್ರೋಶ

- ತಡೆಗೋಡೆ ಮತ್ತಷ್ಟು ಕುಸಿಯುವ ಹಂತಕ್ಕೆ
- ಮರಳು ಮೂಟೆಗಳ ಮೂಲಕ ಹಾನಿ ತಡೆಗೆ ಯತ್ನ
- ಶಾಸಕರು, ಅಧಿಕಾರಿಗಳು ಸ್ಥಳಕ್ಕೆ ಭೇಟಿ
- ಅಧಿಕಾರಿಗಳ ವಿರುದ್ಧ ಅಪ್ಪಚ್ಚುರಂಜನ್ ಆಕ್ರೋಶ

ಮಡಿಕೇರಿ, ಜು.19– ನಗರದಲ್ಲಿರುವ ಜಿಲ್ಲಾಡಳಿತ ಭವನದ ತಡೆಗೋಡೆ ಮತ್ತಷ್ಟು ಕುಸಿಯುವ ಹಂತದಲ್ಲಿದ್ದು, ದುರಸ್ಥಿ ಕಾರ್ಯ ಭರದಿಂದ ಸಾಗಿದೆ. ತಡೆಗೋಡೆಯ ಸುರಕ್ಷತೆ ಕುರಿತು ಜಿಲ್ಲೆಯಾದ್ಯಂತ ತೀವ್ರ ಚರ್ಚೆಯಾಗುತ್ತಿದ್ದು, 7 ಕೋಟಿ ರೂ.ವೆಚ್ಚದ ಈ ಅವೈಜ್ಞಾನಿಕ ಕಾಮಗಾರಿ ಸಂಪೂರ್ಣ ಕಳಪೆ ಎಂದು ಸಾರ್ವಜನಿಕರ ವಲಯದಿಂದ ಆರೋಪ ಕೇಳಿ ಬರುತ್ತಿದೆ. ಕೆಲ ದಿನಗಳ ಹಿಂದೆ ಹೊರ ಚಾಚಲ್ಪಟ್ಟಿದ್ದ ಕಾಂಕ್ರಿಟ್ ಸ್ಲ್ಯಾಬ್‌ಗಳು ಒಡೆದು ಹೋಗಿದ್ದು, ಮತ್ತಷ್ಟು ಸ್ಲ್ಯಾಬ್‌ಗಳು ಬಿರುಕಿನಿಂದ ಹಾನಿಗೀಡಾಗಿವೆ.

ತಡೆಗೋಡೆಗೆ ಮತ್ತಷ್ಟು ಹಾನಿಯಾಗುವುದನ್ನು ತಡೆಯಲು ಮರಳು ಮೂಟೆಗಳ ಮೊರೆ ಹೋಗಿದ್ದು, ಒಡೆದ ಕಾಂಕ್ರೀಟ್ ಸ್ಲ್ಯಾಬ್‌ಗಳಿಗೆ ತಡೆ ಒಡ್ಡುವ ಕಾಮಗಾರಿ ನಡೆಸಲಾಗುತ್ತಿದೆ. ಭಾರೀ ಗಾತ್ರದ ಕಬ್ಬಿಣದ ರಾಡ್‌ಗಳನ್ನು ನೆಲದ ಆಳಕ್ಕೆ ಹೂಳಲಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಅಂದಾಜು 30 ಸಾವಿರ ಮರಳು ಮೂಟೆಗಳನ್ನು ಅಳವಡಿಸಿ ತಾತ್ಕಾಲಿಕ ದುರಸ್ಥಿ ಕಾರ್ಯ ನಡೆಸಲಾಗುತ್ತಿದೆ.

ಕಾಮಗಾರಿ ನಡೆಸಲಾಗುತ್ತಿರುವ ಸ್ಥಳಕ್ಕೆ ಶಾಸಕ ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ದುರಸ್ತಿ ಕಾರ್ಯ ವೀಕ್ಷಿಸಿದರು. ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕ ದ್ವಯರು ತಡೆಗೋಡೆ ಕಾಮಗಾರಿ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇಂತಹ ತಂತ್ರಜ್ಞಾನ ಕೊಡಗಿನ ಭೌಗೋಳಿಕ ಪರಿಸರಕ್ಕೆ ಹೊಂದಾಣಿಕೆಯಾಗಲ್ಲ.



ಕಾಮಗಾರಿಗಳ ಬಗ್ಗೆ ಕನಿಷ್ಟ ಜ್ಞಾನ ಬೇಡವೇ ಎಂದು ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ತಡೆಗೋಡೆ ವೀಕ್ಷಣೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಅಪ್ಪಚ್ಚು ರಂಜನ್, ಮೊದಲಿನಿಂದಲೂ ಈ ಯೋಜನೆ ಸೂಕ್ತವಲ್ಲ ಎಂಬ ಅಭಿಪ್ರಾಯ ತಿಳಿಸಿದ್ದೆ. ದೆಹಲಿಯ ತಂತ್ರಜ್ಞರು ಇದಕ್ಕೆ ಯೋಜನೆ ರೂಪಿಸಿದ್ದು, ನೂತನ ತಂತ್ರಜ್ಞಾನದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಆದ್ದರಿಂದ ಯಾವುದೇ ಅಪಾಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದರು. ಪ್ರತೀ ಬಾರಿ ಈ ರಸ್ತೆಯಲ್ಲಿ ಸಂಚರಿಸುವಾಗ ಈ ತಡೆಗೋಡೆ ಕೊಡಗಿನ ಮಳೆಗೆ ನಿಲ್ಲುವುದಿಲ್ಲ ಎಂಬ ಮಾತನ್ನು ಹೇಳಿದ್ದೆ, ಈಗ ಅದು ನಿಜವಾಗಿದೆ ಎಂದರು. ಮೇಲಿನಿಂದ ನೀರು ಹಾಗೂ ಮಣ್ಣಿನ ಒತ್ತಡ ಹೆಚ್ಚಾಗಿದ್ದು, ಕಾಂಕ್ರಿಟ್ ಸ್ಲ್ಯಾಬ್‌ಗಳು ಹೊರಬರುತ್ತಿವೆ. ಕೊಡಗಿನ ಮಣ್ಣಿಗೆ ಇಂತಹ ಯೋಜನೆಗಳು ಸಫಲವಾಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಕಾಮಗಾರಿ ವಿಫಲವಾಗಲು ಕಾರಣವೇನು ಎನ್ನುವ ಬಗ್ಗೆ ತನಿಖೆಯಾಗಲಿದೆ. ಗುತ್ತಿಗೆದಾರನ ತಪ್ಪಿದ್ದಲ್ಲಿ ಗುತ್ತಿಗೆದಾರನನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಒಂದು ವೇಳೆ ಇಂಜಿನಿಯರ್ ತಪ್ಪಿದ್ದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು ಎಂದು ಅಪ್ಪಚ್ಚು ರಂಜನ್ ಹೇಳಿದರು.

ಶಾಸಕ ಕೆ.ಜಿ ಬೋಪಯ್ಯ ಮಾತನಾಡಿ, ಅಧಿಕಾರಿಗಳು ನೀರಿನ ಒತ್ತಡದ ಬಗ್ಗೆ ಸಾಮಾನ್ಯ ಜ್ಞಾನವಿಲ್ಲದೆ ಕೆಲಸ ಮಾಡಿದ್ದಾರೆ. ಇಷ್ಟು ದೊಡ್ಡ ಮೊತ್ತದ ಹಣ ನೀರುಪಾಲಾಗಲು ಕಾರಣ ಯಾರೆಂಬ ಬಗ್ಗೆ ತನಿಖೆ ಆಗಬೇಕಿದೆ. ಈ ಕುರಿತು ಈಗಾಗಲೇ ಸಂಬಂಧಪಟ್ಟವರ ಗಮನಕ್ಕೆ ತರಲಾಗಿದ್ದು, ಸೂಕ್ತ ತನಿಖೆ ನಡೆಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಡಿಸಿ ಡಾ.ಬಿ.ಸಿ. ಸತೀಶ, ಲೋಕೋಪಯೋಗಿ ಇಂಜಿನಿಯರ್‌ಗಳು, ಗುತ್ತಿದಾರರು ಹಾಗೂ ಬಿಜೆಪಿ ಮುಖಂಡರು ಹಾಜರಿದ್ದರು.

ಫಿಲೋಮಿನಾ ನಿಧನ

ನಾಪೋಕ್ಲು, ಜು.19– ಸ್ಥಳೀಯ ಇಂದಿರಾ



ನಗರದ ನಿವಾಸಿ ದಿ. ಜೋಸೆಫ್ ಅವರ ಪತ್ನಿ ಫಿಲೋಮಿನಾ (77) ಅವರು ಮಂಗಳವಾರ ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಮಂಗಳವಾರ ಸಂಜೆ ಇಲ್ಲಿನ ಕ್ರೈಸ್ತ ಸಮಾಜದ ಸಿಮೆಟ್ರಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಾಲ್ದಾರೆಯಲ್ಲಿ ಹುಲಿ, ಚಿರತೆ ಭೀತಿ: ಶಾಲೆ ಸಮೀಪದಲ್ಲೇ ಹೆಜ್ಜೆ ಗುರುತು ಪತ್ತೆ

ಸಿದ್ದಾಪುರ, ಜು.19– ಕಾಡಾನೆ ಹಾವಳಿಯಿಂದ ಭಯಭೀತರಾಗಿದ್ದ ಜನರಿಗೆ ಇದೀಗ ಹುಲಿ ಚಿರತೆ ಕಾಟವು ಎದುರಾಗಿದ್ದು, ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಮನೆಯಿಂದ ಹೊರ ಬರಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿರುವ ಘಟನೆ ಮಾಲ್ದಾರೆಯಲ್ಲಿ ಸಂಭವಿಸಿದೆ.

ಕಳೆದ ಕೆಲ ತಿಂಗಳಿನಿಂದ ಮಾಲ್ದಾರೆ, ಮೈಲಾಪುರ, ಬಾಡಗ ಬಾಣಾಂಗಾಲ ಸೇರಿದಂತೆ ಹಲವೆಡೆ ಹುಲಿಯೊಂದು ಕಾಫಿ ತೋಟಗಳಲ್ಲಿ ಬೀಡುಬಿಟ್ಟಿದ್ದು, ಹತ್ತಕ್ಕೂ ಹೆಚ್ಚು ಜಾನುವಾರುಗಳನ್ನು ಬಲಿ ತೆಗೆದುಕೊಳ್ಳುವ ಮೂಲಕ ಆತಂಕ ಸೃಷ್ಟಿ ಮಾಡಿತ್ತು. ಇದೀಗ ಮಾಲ್ದಾರೆ ಶಾಲೆ ಮುಂಭಾಗದ ಮೈದಾನದಲ್ಲಿ ಹುಲಿ ಹೆಜ್ಜೆ ಗುರುತು ಕಂಡು ಬಂದಿದ್ದು ಕೆಲ ಕಾರ್ಮಿಕರು ಹುಲಿಯೊಂದಿಗೆ ಮರಿ ಇರುವ ಬಗ್ಗೆಯೂ ಮಾಹಿತಿ ನೀಡಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಒಂದು ತಿಂಗಳ ಹಿಂದೆ ಈ ಭಾಗದಲ್ಲಿ ಹುಲಿ ಸೆರೆ ಹಿಡಿಯಲು ಮೂರು ಬೋನುಗಳನ್ನು ಅಳವಡಿಸಿ ಕಾರ್ಯಾಚರಣೆ ಮುಂದುವರಿದಿದ್ದರೂ ಹುಲಿಯ ಸುಳಿವು ಪತ್ತೆಯಾಗಲಿಲ್ಲ. ಹಿಂದೆ ರಸ್ತೆ ಬದಿಗಳಲ್ಲೂ ಹುಲಿ ಗೋಚರಿಸಿದ್ದು, ಕೆಲವರು ಮೊಬೈಲ್ ಮೂಲಕ ಸೆರೆ



ಹಿಡಿದಿದ್ದಾರೆ. ಮಾಲ್ದಾರೆ, ಪಾಲಿಬೆಟ್ಟ, ಅಮ್ಮತ್ತಿ, ಕರಡಿಗೋಡು, ಸಿದ್ದಾಪುರ ಭಾಗಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಮಿತಿಮೀರಿದ್ದು ಬೆಳೆಗಾರರು, ವಿದ್ಯಾರ್ಥಿಗಳು, ಕಾರ್ಮಿಕರು, ಸಂಕಷ್ಟದ ಜೀವನ ನಡೆಸುವಂತಾಗಿದೆ ಶಾಶ್ವತವಾಗಿ ಕಾಡುಪ್ರಾಣಿಗಳ ಹಾವಳಿ ತಡೆಗಟ್ಟಲು ಜನಪ್ರತಿನಿಧಿಗಳ ಹಾಗೂ ಅರಣ್ಯ ಇಲಾಖೆ ಮುಂದಾಗಬೇಕೆಂದು ಕೊಡಗು ರೈತ ಸಂಘದ ಅಮ್ಮತ್ತಿ ಹೋಬಳಿ ಅಧ್ಯಕ್ಷ ಪ್ರವೀಣ್ ಬೋಪಯ್ಯ ಒತ್ತಾಯಿಸಿದ್ದಾರೆ.

ಪೌರಾಯುಕ್ತರಾಗಿ ವಿಜಯ ಅಧಿಕಾರ ಸ್ವೀಕಾರ



ಮಡಿಕೇರಿ, ಜು.19– ನಗರಸಭೆ ಪೌರಾಯುಕ್ತರಾಗಿ ವಿಜಯ ಅವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿಂದೆ ಚಾಮರಾಜನಗರ, ನಂಜನಗೂಡು, ಮಂಡ್ಯ ಮತ್ತು ಕೊಳ್ಳೆಗಾಲದಲ್ಲಿ ಪೌರಾಯುಕ್ತರಾಗಿ ಹಾಗೂ ಯಳಂದೂರು ಪಪಂ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸುಮಾರು 23 ವರ್ಷಗಳ ಕಾಲ ಪೌರಾಡಳಿತ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ.

ಸಂಗಮದಲ್ಲಿ ಕೊಚ್ಚಿ ಹೋಗಿದ್ದ ಯುವಕನ ಮೃತದೇಹ ಪತ್ತೆ

ಶ್ರೀರಂಗಪಟ್ಟಣ, ಜು.19– ಪಟ್ಟಣದ ಗಂಜಾಂ ಕಾವೇರಿ ನದಿಯ ಸಂಗಮದಲ್ಲಿ ಜು.12ರಂದು ಕಾಲುಜಾರಿ ಬಿದ್ದು,



ಕೊಚ್ಚಿಹೋಗಿದ್ದ ಬೆಂಗಳೂರಿನ ಯಲಹಂಕ ನಿವಾಸಿ ಅಶೋಕ (26) ಮೃತದೇಹ ಮಂಗಳವಾರ ತಾಲೂಕಿನ ದೊಡ್ಡಪಾಳ್ಯ ಸಮೀಪದ ಖಾಸಗಿ ವಿದ್ಯುತ್ ಉತ್ಪಾದನಾ ಕಾರ್ಯಾಗಾರದ ತಡೆಗೋಡೆ ಬಳಿ ಪತ್ತೆಯಾಗಿದೆ. ಅಶೋಕ್ ಪೂಜೆಗೆಂದು ನದಿಗಿಳಿದಿದ್ದ ವೇಳೆ ಕಾಲು ಜಾರಿ ಬಿದ್ದು ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದರು. ಇವರಿಗಾಗಿ ಕಳೆದ 6 ದಿನಗಳಿಂದ ಅಗ್ನಿಶಾಮಕ ಹಾಗೂ ಎನ್‌ಡಿಆರ್ ಎಫ್ ಸಿಬ್ಬಂದಿ ಹುಡುಕಾಟ ನಡೆಸಿ, ಇಂದು ಮೃತ ದೇಹವನ್ನು ಹೊರತೆಗೆದಿದ್ದಾರೆ.

ಕೆಆರ್‌ಎಸ್‌ಗೆ ಜು.20ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಾಗಿನ ಅರ್ಪಿಸುವ ಹಿನ್ನೆಲೆಯಲ್ಲಿ ಜಲಾಶಯದಿಂದ ಹೊರ ಹರಿವಿನ ಪ್ರಮಾಣ ಕಡಿಮೆ ಮಾಡಲಾಗಿದೆ. ಇದರಿಂದ ಯುವಕ ಮೃತದೇಹ ಪತ್ತೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮತ್ತೊಬ್ಬ ಯುವಕನ ಸುಳಿವಿಲ್ಲ: ಕೆಆರ್‌ಎಸ್ ಅಣೆಕಟ್ಟೆ ಬಳಿ ಮೈಸೂರಿನ ಸೃಜನ್ ಎಂಬ ಯುವಕ ಸಹ ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದು, ಆತನ ಸುಳಿವು ಇನ್ನೂ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ನಾಳೆ ಕೆ.ಆರ್.ಪೇಟೆಯಲ್ಲಿ 1,500 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಮುಖ್ಯಮಂತ್ರಿ ಶಂಕುಸ್ಥಾಪನೆ



ಮಂಡ್ಯ, ಜು.19– ಜಿಲ್ಲೆಯ ಕೆಆರ್.ಪೇಟೆಯಲ್ಲಿ ಸುಮಾರು 1500 ಕೋಟಿ ವೆಚ್ಚದ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ಜು. 21ರಂದು ಕೆ.ಆರ್.ಪೇಟೆಗೆ ಆಗಮಿಸಲಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಕ್ರೀಡೆ ಹಾಗೂ ರೇಷ್ಮೆ ಸಚಿವ ಕೆ.ಸಿ.ನಾರಾಯಣಗೌಡ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಸಚಿವರಾದ ಗೋವಿಂದ ಕಾರಜೋಳ, ಆರ್.ಅಶೋಕ್, ಡಾ.ಅಶ್ವಥ್ ನಾರಾಯಣ್, ಶ್ರೀರಾಮುಲು, ಡಾ.ಸುಧಾಕರ್, ಎಂಟಿಬಿ ನಾಗರಾಜ್, ಸುನೀಲ್‌ಕುಮಾರ್, ಗೋಪಾಲಯ್ಯ ಸೇರಿದಂತೆ ಇನ್ನೂ ಹಲವು ಗಣ್ಯರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಕೆ.ಆರ್.ಪೇಟೆಯ ಪುರಸಭೆ ಆವರಣದಲ್ಲಿ ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ಕೆ.ಆರ್.ಪೇಟೆಯ ಇತಿಹಾಸದಲ್ಲಿ ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಸುಮಾರು 17 ಎಕರೆ ಜಾಗದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಗೆ ಶಂಕು ಸ್ಥಾಪನೆ. ಅಮೃತ್ ಯೋಜನೆಯಡಿ 100 ಮಹಿಳಾ ಸ್ವ–ಸಹಾಯ ಸಂಘಟಗಳಿಗೆ ತಲಾ 1 ಲಕ್ಷ ರೂ. ಸಹಾಯಧನ ವಿತರಣೆ. 316 ಕಂದಾಯ ಗ್ರಾಮಗಳಲ್ಲಿ 182 ಗ್ರಾಮಗಳು ಪೋಡಿಮುಕ್ತ ಗ್ರಾಮಗಳಾಗಿ ಘೋಷಣೆ, ಉಳಿದ 134 ಗ್ರಾಮಗಳು 6 ತಿಂಗಳಲ್ಲಿ ಪೂರ್ಣ. 3000 ವಸತಿ ನಿವೇಶನ ರಹಿತರಿಗೆ ಮನೆ, 2000 ಜನರಿಗೆ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ. 15,000 ಜನರಿಗೆ ಉಚಿತ ನೇತ್ರ ತಪಾಸಣೆ, 3,000 ಜನರಿಗೆ ಶಸ್ತ್ರಚಿಕಿತ್ಸೆ, 5000 ಜನರಿಗೆ ಉಚಿತ ಕನ್ನಡಕ ವಿತರಣೆ. ಒಕ್ಕಲಿಗ, ಲಿಂಗಾಯಿತ, ಕುರುಬ, ವಿಶ್ವಕರ್ಮ, ತಿಗಳ, ಈಡಿಗ, ಕುರುಹಿನಶೆಟ್ಟಿ, ಬಣಜಿಗ ಶೆಟ್ಟಿ, ಅರಸು, ತೊಗಟುವೀರ, ಕ್ಷತ್ರಿಯ, ನಯನಜಕ್ಷತ್ರಿಯ, ಮಡಿವಾಳ, ಕುಂಬಾರ, ದೇವಾಂಗ, ವೈಷ್ಣವ, ನಾಮಧಾರಿ ಮತ್ತು ಗಾಣಿಗ ಸಮುದಾಯದವರಿಗೆ ಸಮುದಾಯ ಭವನ ನಿರ್ಮಿಸಲು ಕೆ.ಆರ್.ಪೇಟೆ ನಗರದಲ್ಲಿ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ವಿವರಿಸಿದರು.

ಈ ಬೃಹತ್ ಕಾರ್ಯಕ್ರಮಕ್ಕೆ 50 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆ ಇದೆ. ಕಾರ್ಯಕ್ರಮಕ್ಕೆ ಬರುವ ಪ್ರತಿಯೊಬ್ಬರಿಗೂ ತಿಂಡಿ, ಊಟದ ವ್ಯವಸ್ಥೆ ಮಾಡಲಾಗಿದೆ. ಜನರನ್ನು ಕರೆದುಕೊಂಡು ಬರಲು ಬಸ್, ಆಟೋ ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಪ್ರಸಿದ್ಧ ಗಾಯಕಿ ಡಾ.ಶಮಿತಾ ಮಲ್ನಾಡ್ ಅವರ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಡಿಸಿ ವಿ.ಆರ್. ಶೈಲಜಾ, ಎಸ್‌ಪಿ ಎನ್.ಯತೀಶ್, ಕಾರ್ಯಪಾಲಕ ಅಭಿಯಂತರ ಶಿವಕುಮಾರ್, ತಮ್ಮಣ್ಣ, ನಾಗರಾಜು, ವಾರ್ತಾಧಿಕಾರಿ ಹೆಚ್.ಎಸ್.ನಿರ್ಮಲಾ ಇದ್ದರು.

ಮೇಳಾಪುರ ಗ್ರಾಪಂ ಅಧ್ಯಕ್ಷರಾಗಿ ಬೆಟ್ಟೇಗೌಡ ಆಯ್ಕೆ

ಶ್ರೀರಂಗಪಟ್ಟಣ, ಜು.19– ತಾಲೂಕಿನ ಮೇಳಾಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಬೆಟ್ಟೇಗೌಡ ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಪುರುಷೋತ್ತಮ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಸದಸ್ಯ ಬೆಟ್ಟೇಗೌಡ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾ ಧಿಕಾರಿ ಬಿಂದು ಘೋಷಿಸಿದರು. ಈ ವೇಳೆ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಬೆಟ್ಟೇಗೌಡ ಅವರನ್ನು ಬಿಜೆಪಿ ಮುಖಂಡರಾದ ಸಚ್ಚಿದಾನಂದ, ಟಿ.ಶ್ರೀಧರ್ ಸೇರಿದಂತೆ ಇತರರು ಅಭಿನಂದಿಸಿದರು. ಈ ವೇಳೆ ಪಿಡಿಓ ಕೆಂಪಲಿಂಗೇ ಗೌಡ, ಉಪಾಧ್ಯಕ್ಷೆ ಮಮತಾ, ಸದಸ್ಯರಾದ ಮಮತಾ, ವೆಂಕಟೇಶ್, ಧನರಾಜ್, ಪ್ರೇಮಾ ಇದ್ದರು.



ವೈಭವದ ಕೃಷ್ಣರಾಜಮುಡಿ ಉತ್ಸವ

ಮೇಲುಕೋಟೆ, ಜು.19– ವಿಶ್ವ ಪ್ರಸಿದ್ಧ ಮೇಲುಕೋಟೆಯ ಆಷಾಢ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ರಾತ್ರಿ ಶ್ರೀಚೆಲುವನಾರಾಯಣ



ಸ್ವಾಮಿಯ ಐತಿಹಾಸಿಕ ಕೃಷ್ಣರಾಜಮುಡಿ ಉತ್ಸವ ವೈಭವದಿಂದ ನೆರವೇರಿತು.

ಜಿಲ್ಲಾ ಖಜಾನೆಯಿಂದ ಪೊಲೀಸ್ ಭದ್ರತೆಯೊಂದಿಗೆ ತಂದ ಶ್ರೀಕೃಷ್ಣರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ದೇಶಿಕರ ಸನ್ನಿಧಿಯಲ್ಲಿ ಅಧಿಕಾರಿಗಳು ಮತ್ತು ಸ್ಥಾನೀಕರು ಅರ್ಚಕ ಪರಿಚಾರಕರ ಸಮ್ಮುಖದಲ್ಲಿ ಪರಿಶೀಲನೆ ಮಾಡಲಾಯಿತು. ಶ್ರೀದೇವಿ ಭೂದೇವಿಯರೊಂದಿಗೆ ಗರುಡಾ ರೂಢನಾದ ಚೆಲುವನಾರಾಯಣನಿಗೆ ವಜ್ರಖಚಿತ ಕೃಷ್ಣರಾಜಮುಡಿ ಕಿರೀಟ ತೊಡಿಸಲಾಯಿತು. ನಂತರ ಚೆಲುವನಾರಾಯಣ ಸ್ವಾಮಿಗೆ ಮಹಾಮಂಗಳಾರತಿ ನೆರವೇರಿಸಿ ಶ್ರೀಕೃಷ್ಣರಾಜಮುಡಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ದಿವ್ಯ ಪ್ರಬಂಧ ಹಾಗೂ ಮಂಗಳವಾದ್ಯದೊಂದಿಗೆ ರಾಜಬೀದಿಯಲ್ಲಿ ಉತ್ಸವ ವಿಜೃಂಭಣೆಯಿಂದ ನೆರವೇರಿತು. ಪಾಂಡವಪುರ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ತಹಸೀಲ್ದಾರ್ ನಯನ, ದೇವಾಲಯದ ಅಧಿಕಾರಿ ಮಂಗಳಮ್ಮ ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು.

ಭಕ್ತರ ಮನಸೆಳೆದ ಆಭರಣ: ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ಮನೆದೇವರಾದ ಶ್ರೀಚೆಲುವ ನಾರಾಯಣ ಸ್ವಾಮಿಗೆ ನೀಡಿದಂತಹ ಕೆಂಪು, ಬಿಳಿ ವಜ್ರದ ಪಚ್ಚೆಮಣಿಯ ಸಿಂಹಲಾಂಛನವುಳ್ಳ ಕೃಷ್ಣರಾಜಮುಡಿ ಮತ್ತು ಗಂಡುಬೇರುಂಡ ಪದಕ ಉತ್ಸವದಲ್ಲಿ ನೋಡುಗಾರಿಗೆ ಭಕ್ತಿ ಭಾವ ಮೂಡಿಸಿತು. ಕೃಷ್ಣರಾಜಮುಡಿ ಕಿರೀಟ ಜು. 24 ರವರೆಗೆ ಪ್ರತಿ ದಿನ ಸಂಜೆ ವಿವಿಧ ಉತ್ಸವದಲ್ಲಿ ಚೆಲುವರಾಯ ಸ್ವಾಮಿಗೆ ತೊಡಿಸಿ ಅಲಂಕರಿಸಲಾಗುತ್ತದೆ.

ಬೈಕ್‌ನಿಂದ ಬಿದ್ದು ಸವಾರ ಸಾವು

ನಾಗಮಂಗಲ, ಜು.19– ಚಲಿಸುತ್ತಿದ್ದ ಬೈಕ್‌ನಿಂದ ಆಯತಪ್ಪಿ ಬಿದ್ದು ಸವಾರನೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ಹುಮ್ನಾಬಾದ್– ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿರುವ ಅಂಚೆ ಚಿಟ್ಟನಹಳ್ಳಿ ಗ್ರಾಮದ ಬಳಿ ಸೋಮವಾರ ರಾತ್ರಿ ನಡೆದಿದೆ.

ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಹೋಬಳಿಯ ಮಂಚೇನಹಳ್ಳಿ ಗ್ರಾಮದ ಶಿವರಾಜು ಮೃತಪಟ್ಟ ಸವಾರ. ಈತ ಬೆಂಗಳೂರಿನಿಂದ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಆಯತಪ್ಪಿ ಬಿದಿದ್ದಾನೆ. ಪರಿಣಾಮ ತೀವ್ರಗಾಯಗೊಂಡು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಂಗಳು ಬಿರಿಯಾನಿ ಸೇವಿಸಿ 3 ಮಕ್ಕಳು ಸೇರಿ 24 ಮಂದಿ ಅಸ್ವಸ್ಥ

ಕೊಳ್ಳೇಗಾಲ, ಜು.19– ತಂಗಳು ಚಿಕನ್ ಬಿರಿಯಾನಿ ಸೇವಿಸಿ 3 ಮಕ್ಕಳು ಸೇರಿದಂತೆ 24 ಮಂದಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿರುವ ಘಟನೆ ತಾಲೂಕಿನ ಹಿತ್ತಲ



ದೊಡ್ಡಿ ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದೆ.

ಗ್ರಾಮದ ಯಶ್ವಂತ್(9), ಲಾವಣ್ಯ(7), ಮೇಘನಾ(13), ಪ್ರಿಯಾಂಕಾ(18), ಕಮಲ(25), ಕುಣಗಳ್ಳಿ ಗ್ರಾಮದ ಪುಟ್ಟಲಕ್ಷಮ್ಮ(50), ಭಾಗ್ಯಮ್ಮ(35), ಪುಟ್ಟತಾಯಮ್ಮ(35), ಸಿದ್ದಮ್ಮ(70), ದೇವಿ(28), ಮಹದೇವಮ್ಮ(60) ಸೇರಿದಂತೆ 25 ಮಂದಿ ಅಸ್ವಸ್ಥಗೊಂಡು ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗ್ರಾಮದ ಸುರೇಶ್ ಅವರ ಪುತ್ರನ ಹುಟ್ಟುಹಬ್ಬದ ಅಂಗವಾಗಿ ಸೋಮವಾರ ರಾತ್ರಿ ಚಿಕನ್ ಬಿರಿಯಾನಿ ತಯಾರಿಸಲಾಗಿತ್ತು. ಉಳಿದ ಬಿರಿಯಾನಿಯನ್ನು ಬೆಳಗ್ಗೆ ಸೇವಿಸಿದ್ದ 3 ಮಕ್ಕಳು, 21 ಮಂದಿ ಕೂಲಿ ಕಾರ್ಮಿಕರು ಸೇರಿ 24 ಮಂದಿ ಅಸ್ವಸ್ಥಗೊಂಡಿದ್ದಾರೆ.

ಬಿರಿಯಾನಿ ಸೇವಿಸಿದ್ದ ಕೂಲಿ ಕಾರ್ಮಿಕರು ಹಾಗೂ ಅವರ ಮಕ್ಕಳಲ್ಲಿ ಮಂಗಳವಾರ ಮಧ್ಯಾಹ್ನ ವಾಂತಿ–ಭೇದಿ ಕಾಣಿಸಿಕೊಂಡಿದೆ. ಸಂಜೆ ವೇಳೆಗೆ ಅಸ್ವಸ್ಥರಾದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ವಿಚಾರ ತಿಳಿದ ತಕ್ಷಣ ಆಸ್ಪತ್ರೆಗೆ ತೆರಳಿ ಅಸ್ವಸ್ಥರ ಆರೋಗ್ಯ ವಿಚಾರಿಸಿದ ಶಾಸಕ ಎನ್.ಮಹೇಶ್, ವೈದ್ಯರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದರು.

ಆಹಾರದಲ್ಲಿನ ವ್ಯತ್ಯಾಸದಿಂದ ಈ ರೀತಿಯಾಗಿದ್ದು, ಇಬ್ಬರು ತೀವ್ರ ಅಸ್ವಸ್ಥರಾಗಿದ್ದು, ಅವರಿಗೆ ಅಗತ್ಯ ರೀತಿಯ ಚಿಕಿತ್ಸೆ ನೀಡಲಾಗುತ್ತಿದೆ. ಬುಧವಾರ ವೇಳೆಗೆ ಎಲ್ಲರೂ ಗುಣಮುಖರಾಗಲಿದ್ದಾರೆ. ಯಾವುದೇ ತೊಂದರೆ ಇಲ್ಲ ಎಂದು ಶಾಸಕ ಮಹೇಶ್ ತಿಳಿಸಿದ್ದಾರೆ.

ಮಾದಪ್ಪನಬೆಟ್ಟದಲ್ಲಿ ಕುಸಿದು ಬಿದ್ದು ಅರ್ಚಕ ಸಾವು

ಹನೂರು, ಜು.19–ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಶ್ರೀಮಲೆ ಮಹದೇಶ್ವರ ಬೆಟ್ಟದ ಮಾದಪ್ಪನ ದೇಗುಲದ ಅರ್ಚಕರೊಬ್ಬರು ಪೂಜೆ ಮಾಡುತ್ತಿರುವಾಗ ಕುಸಿದು ಬಿದ್ದು, ಸಾವನ್ನಪ್ಪಿರುವ ಘಟನೆ ನಡೆದಿದೆ.



ತಾಲೂಕಿನ ಮಾರ್ಟಳ್ಳಿ ಸಮೀಪದ ಕಡಂಬೂರು ಗ್ರಾಮದ ನಿವಾಸಿ ನಾಗಣ್ಣ(45) ಮೃತಪಟ್ಟ ಅರ್ಚಕ. ಇವರಿಗೆ ಒಂದೂವರೆ ವರ್ಷದ ಬಳಿಕ ಪೂಜೆ ಸರದಿ ಬಂದಿತ್ತು. ಅದರಂತೆ ಮಂಗಳವಾರ ಬೆಳಗಿನ ಪೂಜೆಗೆಂದು 4 ಗಂಟೆಗೆ ದೇಗುಲಕ್ಕೆ ತೆರಳಿದ್ದಾರೆ. ಗರ್ಭಗುಡಿಯಲ್ಲಿ ಮಾದಪ್ಪನಿಗೆ ಪೂಜೆ ನೆರವೇರಿಸಿ, ಬಳಿಕ ದೇವಾಲಯದ ಹೊರಗಡೆ ಉತ್ಸವ ಪೂಜೆ ಮಾಡುವಾಗ ಹಠಾತನೇ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಮಲೆಮಹದೇಶ್ವರಬೆಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಆದರೆ ಅಲ್ಲಿ ವೈದ್ಯರಿಲ್ಲದ ಕಾರಣ ಆಂಬುಲೆನ್ಸ್ ಮೂಲಕ ಹನೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಇದ್ದಾರೆ.

ನನ್ನ ಅವಧಿಯಲ್ಲೇ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು

ಭಾರತ್ ಜೋಡೋ ಯಾತ್ರೆಯ ಮಾಹಿತಿ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶಪಥ

ಗುಂಡ್ಲುಪೇಟೆ, ಜು.19–ನನ್ನ ಅವಧಿಯಲ್ಲೇ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು. ಇದು ನನ್ನ ಗುರಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶಪಥ ಮಾಡಿದರು.

ಅ.2ರಿಂದ ರಾಹುಲ್ ಗಾಂಧಿ ಅವರ ನೇತೃತ್ವದ ಭಾರತ್ ಜೋಡೋ ಯಾತ್ರೆ ಹಿನ್ನೆಲೆಯಲ್ಲಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ನಮ್ಮಲ್ಲಿ ಯಾವ ಬಣವೂ ಇಲ್ಲ. ಕಾಂಗ್ರೆಸ್ ನನ್ನನ್ನು ರಾಜ್ಯದ ಅಧ್ಯಕ್ಷನನ್ನಾಗಿ ಮಾಡಿದೆ. ಜನರು ನನ್ನನ್ನು ಇಲ್ಲಿಯ ತನಕ ತಂದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂಬುದು ನನ್ನ ಉದ್ದೇಶ. ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧಾರ ಮಾಡಲಿದೆ ಎಂದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವ ಭ್ರಮೆಯಲಿದ್ದಾರೆ ಎಂಬ ಈಶ್ವರಪ್ಪ ಹೇಳಿಕೆಗೆ ಉತ್ತರಿಸಿದ ಶಿವಕುಮಾರ್, ಇಬ್ಬರಲ್ಲಿ ಒಬ್ಬರು ಸಿಎಂ ಆಗುತ್ತಾರೆ ಎಂಬ ಖುಷಿಯಲ್ಲಿ ಈಶ್ವರಪ್ಪ ಇದ್ದಾರಲ್ಲ. ಅಷ್ಟೇ ಸಾಕು ಎಂದು ಟಾಂಗ್ ನೀಡಿದರು.

ಒಕ್ಕಲಿಗ ಸಮುದಾಯ ಜೆಡಿಎಸ್ ನೊಟ್ಟಿಗೇ ಇದೆ. ಕಾಂಗ್ರೆಸ್‌ಗೆ ಅಧಿಕಾರ ಸಿಗುವುದಿಲ್ಲ ಎಂಬ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ಪ್ರತಿಕ್ರಿಯಿಸಿದ ಡಿಕೆಶಿ, 40 ಸ್ಥಾನಗಳನ್ನು ಗೆದ್ದವರಿಗೇ ಅಷ್ಟು ಆಸೆ ಇರುವಾಗ, 80 ಸ್ಥಾನಗಳಲ್ಲಿ ಗೆದ್ದವರಿಗೆ ಇನ್ನೆಷ್ಟು ಆಸೆ ಇರಬೇಕು? ಅವರಿಗೆ ಒಳ್ಳೆಯದಾಗಲಿ ಎಂದಷ್ಟೇ ಉತ್ತರಿಸಿದರು.



ನನ್ನನ್ನು ರಾಜ್ಯದ ಮುಂದಿನ ಮುಖ್ಯಮಂತ್ರಿ ಮಾಡುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಅದರ ಬಗ್ಗೆ ನಾನು ತಲೆ ಕೆಡಿಸಿಕೊಂಡಿಲ್ಲ. ನಾನು ಹೋದ ಕಡೆಗಳಲ್ಲಿ ಜನರು ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಕೂಗುತ್ತಾರೆ. ಅವರಿಗೆ ನಾನು ಕೂಗಿ ಎಂದೂ ಹೇಳಿಲ್ಲ. ಕೂಗಬೇಡಿ ಎಂದೂ ಹೇಳಿಲ್ಲ. ಅದು ಅವರ ಅಭಿಮಾನ ಎಂದು ತಾವೂ ಸಿಎಂ ರೇಸ್‌ನಲ್ಲಿರುವುದಾಗಿ ಡಿ.ಕೆ.ಶಿವಕುಮಾರ್ ಪರೋಕ್ಷವಾಗಿ ಸಂದೇಶ ರವಾನಿಸಿದರು.

ರಾಜ್ಯದಲ್ಲಿ ಹಿಂದೆಂದೂ ಕೇಳರಿಯದ ರೀತಿಯಲ್ಲಿ ಕರ್ನಾಟಕ ಭ್ರಷ್ಟಾಚಾರದ ರಾಜಧಾನಿಯಾಗಿದೆ. ಎಲ್ಲಾ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಶೇ.40 ಕಮಿಷನ್ ಮಾತ್ರವಲ್ಲದೆ ನೀರಾವರಿ ಇಲಾಖೆಯಲ್ಲೂ ಭ್ರಷ್ಟಾಚಾರ ನಡೆಯುತ್ತಿದ್ದು, ರಾಜ್ಯದ ಗೌರವವನ್ನು ಉಳಿಸುವ ಕಾರ್ಯ ಆಗಬೇಕಿದೆ. ಜನರಿಗೆ ಈ ವಿಚಾರ ಮುಟ್ಟಿಸುತ್ತೇವೆ ಎಂದು ಬಿಜೆಪಿ ಸರ್ಕಾರದ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಅ. 2ರಿಂದ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ಭಾರತ್ ಜೋಡೋ ಎಂಬ ವಿನೂತನ ಐತಿಹಾಸಿಕ ಯಾತ್ರೆ ಆರಂಭಿಸಲಿದ್ದೇವೆ. ಭಾರತ ಒಗ್ಗೂಡಿಸುವುದು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಕೋಮುವಾದ ನಡೆಸುತ್ತಿರುವವರ ವಿರುದ್ಧ ಕಾಂಗ್ರೆಸ್ ಸಾರಿರುವ ಸಮರ ಇದು ಎಂದರು.

ದೇಶದ ಎಲ್ಲಾ ರಾಜ್ಯಗಳಿಂದ ಸಾವಿರಾರು ಜನರು ಭಾರತ್ ಜೋಡೋ ಯಾತ್ರೆಯಲ್ಲಿ ಹೆಜ್ಜೆ ಹಾಕಲಿದ್ದಾರೆ. ಇದಕ್ಕೆ ಸಮಿತಿಗಳನ್ನು ರಚನೆ ಮಾಡಲಿದ್ದೇವೆ. ಮೈಸೂರಲ್ಲಿ ದೊಡ್ಡ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಈ ಯಾತ್ರೆ ಯಶಸ್ಸಿಗೆ ಪಕ್ಷದ ಕಾರ್ಯಕರ್ತರು ಸಹಕರಿಸಬೇಕು ಎಂದು ಮನವಿ ಮಾಡಿದರು.

75 ವರ್ಷಗಳ ಹಿಂದೆ ಇದೇ ರೀತಿ ಹೋರಾಟ ನಡೆಸಿದ ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿತ್ತು. ಇದನ್ನೆಲ್ಲ ಸ್ಮರಿಸಿ, ಈ ವರ್ಷ ಕನ್ಯಾ ಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಯಾತ್ರೆ ನಡೆಯಲಿದೆ. ರಾಜ್ಯದ ವಿವಿಧ 22 ಜಿಲ್ಲೆಗಳಲ್ಲಿ ರಾಹುಲ್‌ಗಾಂಧಿ ಪಾದಯಾತ್ರೆ ನಡೆಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್, ಹೆಚ್‌ಡಿಕೋಟೆ ಶಾಸಕ ಅನಿಲ್‌ಚಿಕ್ಕಮಾದು, ಕಾಂಗ್ರೆಸ್ ಮುಖಂಡರಾದ ಹೆಚ್.ಎಂ. ಗಣೇಶಪ್ರಸಾದ್, ಹೆಚ್.ಎಸ್.ನಂಜುಂಡಪ್ರಸಾದ್, ಕೆ.ಎಸ್. ಮಹೇಶ್, ನವೀನ್, ಅಣ್ಣಯ್ಯಸ್ವಾಮಿ, ಮೃತ್ಯುಂಜಯ, ಎಸ್‌ಆರ್‌ಎಸ್ ರಾಜು, ಬಾಲರಾಜು, ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ಎಂ.ಮುನಿರಾಜು, ರಾಜಶೇಖರ್ ಸೇರಿದಂತೆ ಕಾರ್ಯಕರ್ತರು ಮತ್ತು ವಿವಿಧ ಘಟಕಗಳ ಪದಾಧಿಕಾರಿಗಳಿದ್ದರು.

ಗುಂಡ್ಲುಪೇಟೆಯಿಂದ ಭಾರತ್ ಜೋಡೋ ಯಾತ್ರೆ ಆರಂಭ ಸಾಧ್ಯತೆ

ಕಾಸರಗೋಡಿನ ಮೂಲಕ ಮಂಗಳೂರು, ಕೇರಳ ವೈನಾಡು ಮೂಲಕ ಗುಂಡ್ಲುಪೇಟೆ, ಹೊಸೂರು ಬೆಂಗಳೂರು ಈ ಮೂರು ಮಾರ್ಗಗಳ ಮೂಲಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆ ರಾಜ್ಯ ಪ್ರವೇಶ ಮಾಡುವ ಉದ್ದೇಶ ಹೊಂದಿದೆ. ಇದರಲ್ಲಿ ಬಹುತೇಕ ಕೇರಳದಿಂದ ಗುಂಡ್ಲುಪೇಟೆ ಮೂಲಕ ರಾಜ್ಯ ಪ್ರವೇಶ ಮಾಡುವ ಬಗ್ಗೆ ಚರ್ಚೆ ನಡೆಯುತ್ತಿದೆ. ಇದು ಇನ್ನೂ ಅಂತಿಮವಾಗಿಲ್ಲ. ಪಟ್ಟಣದಿಂದ ನಿತ್ಯ ಸರಾಸರಿ 20 ಕಿ.ಮೀ ಪಾದಯಾತ್ರೆ ನಡೆಲಿದ್ದು, ರಾಜ್ಯದಲ್ಲಿ 510 ಕಿ.ಮೀ ಪಾದಯಾತ್ರೆ ಮಾಡಲಿದ್ದೇವೆ ಎಂದರು.

ಅರಣ್ಯ ನಿಯಮದಡಿ ಸರ್ಕಾರ ಅನುಮತಿ ಕೊಟ್ಟರೆ ಕೇರಳದ ವಯನಾಡಿನಿಂದ ಪಾದಯಾತ್ರೆ ನಡೆಸಲಾಗುವುದು. ಇಲ್ಲದಿದ್ದರೆ ಗುಂಡ್ಲುಪೇಟೆಯಿಂದ ಪಾದಯಾತ್ರೆ ಆರಂಭಿಸಲಾಗುವುದು. ಇದರಲ್ಲಿ ರಾಜ್ಯದ ಪ್ರಮುಖ ನಾಯಕರು ಭಾಗವಹಿಸುವರು.

ಗುಂಡ್ಲುಪೇಟೆ ಮೂಲಕ ನಂಜನಗೂಡು, ಮೈಸೂರು, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ, ಮದ್ದೂರು, ಮಂಡ್ಯ, ತುರುವೆಕೆರೆ ಮೂಲಕ ಹೆದ್ದಾರಿ ಮಾರ್ಗವಾಗಿ ಭಾರತ್ ಜೋಡೋ ಯಾತ್ರೆ ಬೆಂಗಳೂರು ತಲುಪಲಿದೆ. ಜು. 21ರಿಂದ 23 ದಿನ ರಾಜ್ಯದಲ್ಲಿ ಇದಕ್ಕಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನನ್ನ ಹೆಗಲಿಗೆ ಈ ಜವಾಬ್ದಾರಿ ವಹಿಸಿದ್ದು, ಈ ಕಾರಣದಿಂದ ಎಲ್ಲೆಲ್ಲಿ ವಾಸ್ತವ್ಯ ಹೂಡಬೇಕು ಎಂದು ವೀಕ್ಷಣೆಗೆ ಬಂದಿದ್ದೇನೆ ಎಂದು ಡಿ.ಕೆ.ಶಿವಕುಮಾರ್ ಯಾತ್ರೆ ಬಗ್ಗೆ ವಿವರಿಸಿದರು.

ಎಂ.ಸಿ.ಚನ್ನಬಸಪ್ಪ ನಿಧನ



ಚಾಮರಾಜನಗರ, ಜು.19– ಗುಂಡ್ಲುಪೇಟೆ ತಾಲೂಕಿನ ಕಣ್ಣೇಗಾಲ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕ ಎಂ.ಸಿ.ಚನ್ನಬಸಪ್ಪ (ಕಿಟ್ಟಪ್ಪ–90) ಮಂಗಳವಾರ ನಿಧನರಾದರು. ಮೃತರು, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ ಸೇರಿದಂತೆ ನಾಲ್ವರು ಪುತ್ರರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಬುಧವಾರ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿಜಿಟಲ್ ಗ್ರಂಥಾಲಯಗಳಿಗೆ ಜನರಿಂದ ಉತ್ತಮ ಪ್ರತಿಕ್ರಿಯೆ

ಮೈಸೂರಲ್ಲಿ 48 ಸಾವಿರ ಮಂದಿ ಸದಸ್ಯತ್ವ

ಮೈಸೂರು,ಜು.19(ಜಿಎ)– ಮೈಸೂರು ಜಿಲ್ಲೆಯಲ್ಲಿರುವ ನಗರ ಕೇಂದ್ರ ಗ್ರಂಥಾಲಯ, ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಜೊತೆಗೆ ಸಂಚಾರಿ ಮತ್ತು ಡಿಜಿಟಲ್ ಗ್ರಂಥಾಲಯಗಳಿಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ವಿದ್ಯಾರ್ಥಿಗಳಿಂದಲೂ ಭಾರೀ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಮೈಸೂರು ನಗರ ಮತ್ತು ಜಿಲ್ಲಾ ಕೇಂದ್ರ, ಡಿಜಿಟಲ್ ಲೈಬ್ರರಿ ಮತ್ತು ಸಂಚಾರಿ ಗ್ರಂಥಾಲಯಗಳಲ್ಲಿ 1.80 ಲಕ್ಷ ಮಂದಿ ಸದಸ್ಯತ್ವವನ್ನು ಹೊಂದಿದ್ದು, ಅದರಲ್ಲೂ ಡಿಜಿಟಲ್ ಲೈಬ್ರರಿಯಲ್ಲಿ 48 ಸಾವಿರ ಮಂದಿ ಸದಸ್ಯತ್ವ ಪಡೆದಿದ್ದಾರೆ. ಗ್ರಂಥಾಲಯ ಎಂದರೆ ಅನೇಕರ ಮನದಲ್ಲಿ ಉದಾಸಿನದ ಮನೋಭಾವವಿದೆ. ಅಲ್ಲಿ ಕಥೆ, ಕಾದಂಬರಿಯ ಪುಸ್ತಕಗಳು ಮಾತ್ರ ಇರುತ್ತವೆ ಎಂದು ತಿಳಿದುಕೊಳ್ಳುತ್ತಾರೆ. ನಾಗರಿಕ ಸೇವೆಗಳು ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿ ಎಂದು ಆರಂಭವಾದ ಡಿಜಿಟಲ್ ಲೈಬ್ರರಿಯಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದ್ದು, ಕೆಲ ವಿದ್ಯಾರ್ಥಿಗಳು ಕೇಂದ್ರೀಯ ಗ್ರಂಥಾಲಯದಲ್ಲಿರುವ ಕಂಪ್ಯೂಟರ್ ಮೂಲಕ ತಮ್ಮ ಪರೀಕ್ಷೆಗಳಿಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಡಿಜಿಟಲ್ ಲೈಬ್ರರಿ: ಮೈಸೂರು ನಗರ ಕೇಂದ್ರ ಗ್ರಂಥಾಲಯ ಮತ್ತು ಜೆ.ಪಿ.ನಗರದಲ್ಲಿ ಡಿಜಿಟಲ್ ಲೈಬ್ರರಿ ಯೋಜನೆ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿರುವ ಎರಡು ಕಂಪ್ಯೂಟರ್‌ಗಳಿಗೆ ಇಂಟರ್ ನೆಟ್ ಸೌಲಭ್ಯವನ್ನು ಒದಗಿಸಿದ್ದು, ಕಂಪ್ಯೂಟರ್‌ನ ಹಾರ್ಡ್ ಡಿಸ್ಕ್‌ನಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಅನೇಕ ವಿಷಯಗಳನ್ನು ಸಂಗ್ರಹಿಸಲಾಗಿದೆ. www. karnatakadigital publiclibrary.org ವೆಬ್‌ಸೈಟ್‌ನಲ್ಲಿ ನಿಮ್ಮ ಡಿಜಿಟಲ್ ಲೈಬ್ರರಿ ನೋಂದಣಿಯನ್ನು ಮಾಡಿಕೊಂಡರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾಗಿರುವ ಮಾಹಿತಿಗಳು ಒಳಗೊಂಡ ಪುಸ್ತಕ ಹಾಗೂ ಇತರೆ ಪುಸ್ತಕಗಳನ್ನು ಒಳಗೊಂಡಂತೆ 1063044 ಪುಸ್ತಕಗಳು ಮತ್ತು ವಿಡಿಯೋಗಳನ್ನು ಪಡೆಯಬಹುದಾಗಿದೆ. ಕಂಪ್ಯೂಟರ್ ಸೌಲಭ್ಯವಿಲ್ಲದಿದ್ದರೆ, 'ಇ–ಸಾರ್ವಜನಿಕ ಗ್ರಂಥಾಲಯ' ಆ್ಯಪ್ ಮೂಲಕವೂ ಪುಸ್ತಕಗಳು ಓದಲು ಮತ್ತು ಮಾಹಿತಿಗಳನ್ನು ಪಡೆಯಬಹುದಾಗಿದ್ದು, ವಿದ್ಯಾರ್ಥಿಗಳು ಭಾರೀ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಸಂಚಾರಿ ಗ್ರಂಥಾಲಯಕ್ಕೆ ಡಿಮ್ಯಾಂಡ್: ನಗರ ವ್ಯಾಪ್ತಿಯಲ್ಲಿ 33, ಜಿಲ್ಲಾ ಕೇಂದ್ರದಲ್ಲಿ 25 ಗ್ರಂಥಾಲಯಗಳಿದ್ದು, ಇವುಗಳ ಜೊತೆ 225 ಗ್ರಂಥಾಲಯಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ನಿರ್ವಹಿಸುತ್ತಿದೆ. ನಗರದ ಯಾವ ವಾರ್ಡ್‌ಗಳಲ್ಲಿ ಗ್ರಂಥಾಲಯಗಳು ಇಲ್ಲವೋ ಆ ವಾರ್ಡ್‌ಗಳ ಪಾಲಿಕೆ ಸದಸ್ಯರ ಬಳಿ ಮಾಹಿತಿ ಪಡೆದುಕೊಂಡು ವಾರ್ಡ್‌ನ ಒಂದು ಸ್ಥಳ ನಿಗದಿಪಡಿಸಿ ಆ ಸ್ಥಳಕ್ಕೆ ಕುವೆಂಪು ಸಂಚಾರಿ ಗ್ರಂಥಾಲಯ ಸಂಚಾರ ನಡೆಸುತ್ತಿದ್ದು, ಸಾರ್ವಜನಿಕರಿಂದ ಭಾರೀ ಡಿಮ್ಯಾಂಡ್ ಇದೆ. ಮುಡಾ ವ್ಯಾಪ್ತಿಯ ಹೊಸ ಬಡಾವಣೆಗಳ ನಿವಾಸಿಗಳು ನಮಗೂ ಸಂಚಾರಿ ಗ್ರಂಥಾಲಯ ಬೇಕು ಎಂದು ಬೇಡಿಕೆಯನ್ನು ಇಡುತ್ತಿದ್ದಾರೆ.





ಮೈಸೂರು ನಗರ ಕೇಂದ್ರ ಗ್ರಂಥಾಲಯದಲ್ಲಿ ಡಿಜಿಟಲ್ ಲೈಬ್ರರಿ ಮೂಲಕ ಮಾಹಿತಿ ಪಡೆದುಕೊಳ್ಳುತ್ತಿರುವ ವಿದ್ಯಾರ್ಥಿಗಳು. ಬಲಚಿತ್ರದಲ್ಲಿ ನಾಗರಿಕ ಸೇವೆಗಳು ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು.

> "ಹಣ ನೀಡಿ ಪುಸ್ತಕ ಪಡೆದು ಓದುವುದಕ್ಕಿಂತ ಗ್ರಂಥಾಲಯದಲ್ಲಿಯೇ ನಮ್ಮ ವಿದ್ಯಾಭ್ಯಾಸಕ್ಕೆ ಬೇಕಿರುವ ಎಲ್ಲಾ ಪುಸ್ತಕಗಳು ಲಭ್ಯವಿದೆ. ಅದರಲ್ಲೂ ಡಿಜಿಟಲ್ ಲೈಬ್ರರಿ ಅತ್ಯಂತ ಉಪಯುಕ್ತವಾಗಿದೆ.
> –ರಮೇಶ್, ವಿದ್ಯಾರ್ಥಿ

100 ಕಂಪ್ಯೂಟರ್ ಅಳವಡಿಸಲು ಚಿಂತನೆ



ಮೈಸೂರು: ಜಿಲ್ಲೆಯಲ್ಲಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಪುಸ್ತಕ ಓದುವವರ ಸಂಖ್ಯೆ ಹೆಚ್ಚಿದ್ದು, ಗೃಹಿಣಿಯರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕಗಳನ್ನು ಓದುತ್ತಾರೆ. ಸದಸ್ಯತ್ವ ಹೊಂದಿರುವ ಅನೇಕ ಗೃಹಿಣಿಯರು ಇಲ್ಲಿ ಕುಳಿತು ಓದುವುದಕ್ಕಿಂತ ಮನೆಗೆ ತೆಗೆದುಕೊಂಡು ಹೋಗುತ್ತಾರೆ ಎಂದು ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕ ಬಿ.ಮಂಜುನಾಥ್ 'ಮೈಸೂರು ಮಿತ್ರ' ನಿಗೆ ತಿಳಿಸಿದರು.

ನಗರದ ಪೀಪಲ್ಸ್ ಪಾರ್ಕ್‌ನಲ್ಲಿರುವ ಕೇಂದ್ರ ಗ್ರಂಥಾಲಯವೂ ಸುಸಜ್ಜಿತವಾಗಿದ್ದು, 43 ಸಾವಿರಕ್ಕೂ ಅಧಿಕ ಪುಸ್ತಕಗಳನ್ನು ಒಳಗೊಂಡಿದೆ. ಮಕ್ಕಳಿಗಾಗಿ ಪ್ರತ್ಯೇಕ ಕೊಠಡಿಯನ್ನು ನಿರ್ಮಿಸಲಾಗಿದ್ದು, ಅಲ್ಲಿ ಮಕ್ಕಳನ್ನು ಆಕರ್ಷಿಸಲು ಗೋಡೆಗಳಿಗೆ ವಿಶೇಷ ಚಿತ್ತಾರ ಬಿಡಿಸುವುದರ ಜೊತೆಗೆ ಆಟಿಕೆಗಳನ್ನು ಇಡಲಾಗಿದೆ. ಸಂಚಾರಿ ಗ್ರಂಥಾಲಯಕ್ಕೂ ಉತ್ತಮ ಪ್ರತಿಕ್ರಿಯೆ ಇದ್ದು, ಆಟೋ ಮಿಷನ್ ಮೂಲಕ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. 650ಕ್ಕೂ ಹೆಚ್ಚು ಮಂದಿ ಅದರಲ್ಲಿ ಸದಸ್ಯತ್ವ ಪಡೆದುಕೊಂಡಿದ್ದಾರೆ. ಈ ಹಿಂದೆ ಪಾಲಿಕೆ ಅನುದಾನದಲ್ಲಿ ಮತ್ತೊಂದು ಸಂಚಾರಿ ಗ್ರಂಥಾಲಯ ಆರಂಭಿಸುವ ಉದ್ದೇಶವಿತ್ತು. ಆದರೆ, ಯಾರು ಅದಕ್ಕೆ ಆಸಕ್ತಿ ತೋರದೆ ಅದು ಅರ್ಧಕ್ಕೆ ನಿಂತು ಹೋಯಿತು ಎಂದು ತಿಳಿಸಿದರು.

ನಗರದಲ್ಲಿ ಎರಡು ಡಿಜಿಟಲ್ ಲೈಬ್ರರಿಗಳಿದ್ದು, ಅಲ್ಲಿ 2 ಕಂಪ್ಯೂಟರ್ ಅಳವಡಿಸಿದ್ದು, ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ 100 ಕಂಪ್ಯೂಟರ್ ಅಳವಡಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಮಂಗಳವಾರ	124.80 ಅಡಿ
ಒಳಹರಿವು	57765 ಕ್ಯೂಸೆಕ್
ಹೊರಹರಿವು	57557 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಮಂಗಳವಾರ	2283.17 ಅಡಿ
ಒಳ ಹರಿವು	17780 ಕ್ಯೂಸೆಕ್
ಹೊರ ಹರಿವು	------ ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಮಂಗಳವಾರ	2854.72 ಅಡಿ
ಒಳ ಹರಿವು	11460 ಕ್ಯೂಸೆಕ್
ಹೊರ ಹರಿವು	10166 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಮಂಗಳವಾರ	2920.17 ಅಡಿ
ಒಳ ಹರಿವು	19582 ಕ್ಯೂಸೆಕ್
ಹೊರ ಹರಿವು	18750 ಕ್ಯೂಸೆಕ್



ಧಾರವಾಡ ಜಿಲ್ಲಾ ಪ್ರದೇಶ ಕುರುಬರ ಸಂಘದಲ್ಲಿ ನಡೆದ ಸಿದ್ದರಾಮಯ್ಯನವರ 75ನೇ ಅಮೃತ ಮಹೋತ್ಸವ ಪೂರ್ವಭಾವಿ ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಕಾರ್ಯದರ್ಶಿ ವೆಂಕಟೇಶ್ ಮೂರ್ತಿ, ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಅವರನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರು ಆತ್ಮೀಯವಾಗಿ ಸನ್ಮಾನಿಸಿದರು.

ಕನ್ನಡ ಕಲಾ ಪ್ರತಿಭೋತ್ಸವಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.19(ಎಸ್‌ಪಿಎನ್)– 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.90ರಷ್ಟು ಅಂಕಗಳಿಸಿದ ವಿದ್ಯಾರ್ಥಿಗಳಿಗೆ 'ಕನ್ನಡ ಕಲಾ ಪ್ರತಿಭೋತ್ಸವ' ಕಾರ್ಯಕ್ರಮದಲ್ಲಿ ಅಭಿನಂದಿಸಲು ಜ್ಞಾನ ಮಂದಾರ ಅಕಾಡೆಮಿ ವತಿಯಿಂದ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ 'ಕರ್ನಾಟಕ ಚೇತನ' ರಾಜ್ಯ ಪ್ರಶಸ್ತಿ ಹಾಗೂ ಭರತ್ಯನಾಟ್ಯ, ಸಂಗೀತ, ಯಕ್ಷಗಾನ, ಕ್ರೀಡೆ, ಚಿತ್ರಕಲೆ, ಕ್ರೀಡಾಕ್ಷೇತ್ರದಲ್ಲಿ ಸಾಧನೆಗೈದ ಮಕ್ಕಳಿಗೆ 'ಅರಳು ಮಲ್ಲಿಗೆ' ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಅಕಾಡೆಮಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಸಕ್ತರು 'ನಿರ್ದೇಶಕರು, ಜ್ಞಾನಮಂದಾರ ಅಕಾಡೆಮಿ, ನಂ.39, ಗಾಣಿಗರ ಹಳ್ಳಿ ಚಿಕ್ಕ ಬಾಣಾವರ ಅಂಚೆ, ಯಶವಂತಪುರ ತಾಲೂಕು, ಬೆಂಗಳೂರು–30 ಇಲ್ಲಿಗೆ ಅಗತ್ಯ ದಾಖಲಾತಿಗಳೊಂದಿಗೆ ಅಭ್ಯರ್ಥಿಗಳು ಅರ್ಜಿ ಕಳುಹಿಸಿಕೊಡುವಂತೆ ಮನವಿ ಮಾಡಿದ್ದಾರೆ.

ಅದ್ಧೂರಿ ದಸರಾ: ಸರ್ಕಾರದ ನಿರ್ಧಾರ ಸ್ವಾಗತಿಸಿದ ಸಂಘ–ಸಂಸ್ಥೆಗಳ ಒಕ್ಕೂಟ

ಮೈಸೂರು, ಜು.19(ಎಸ್‌ಪಿಎನ್)– 2022ರ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸುವ ಸರ್ಕಾರದ ನಿರ್ಧಾರವನ್ನು ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟ ಸ್ವಾಗತಿಸಿದೆ.



ಬೆಂಗಳೂರಿನ ವಿಧಾನ ಸೌಧದಲ್ಲಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಬಾರಿ ಮೈಸೂರು ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಿರುವುದನ್ನು ಒಕ್ಕೂಟ ಸ್ವಾಗತಿಸಿದೆ.

ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಂಡಿರುವುದು ಸಂತೋಷದಾಯಕ ಎಂದು ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊರೊನಾದಿಂದಾಗಿ ಕಳೆದ 2 ವರ್ಷಗಳಿಂದ ದಸರಾ ಆಚರಣೆ ಅರಮನೆ ಆವರಣಕ್ಕೆ ಸೀಮಿತವಾಗಿತ್ತು. ಈ ಬಾರಿ ಅದ್ದೂರಿಯಾಗಿ ದಸರಾ ನಡೆಸಲು ಮುಂದಾಗಿರುವುದಕ್ಕೆ ಮೈಸೂರು ಎಲ್ಲಾ ವರ್ಗದ ಜನರು ಸಹಕಾರ ನೀಡಲಿದ್ದು, ಇದಕ್ಕಾಗಿ ಸಕಲ–ಸಿದ್ಧತೆಗಳನ್ನು ಚುರುಕಾಗಿ ನಡೆಯಲಿ ಎಂದು ಮನವಿ ಮಾಡಿದ್ದಾರೆ. ಜೊತೆಗೆ ದಸರಾ ಕಾರ್ಯಕ್ರಮದ ಸಾಂಸ್ಕೃತಿಕ ಕಾರ್ಯಕ್ರಮಗಳ ಪಟ್ಟಿ, ಗೋಲ್ಡ್ ಕಾರ್ಡ್ ಬಿಡುಗಡೆ ಹಾಗೂ ಪ್ರವಾಸಿಗರ ವಾಹನಗಳಿಗೆ ತೆರಿಗೆ ಇಳಿಕೆ ಬಗ್ಗೆ ಆದಷ್ಟು ಬೇಗನೆ ತೀರ್ಮಾನ ತೆಗೆದುಕೊಳ್ಳುವಂತೆ ಒತ್ತಾಯಿಸಿದ್ದಾರೆ.

ಭರತ್ ಮಂಜೇಗೌಡರಿಗೆ ತಾಯಿ ಚಾಮುಂಡೇಶ್ವರಿ ಒಳ್ಳೆಯದು ಮಾಡಲಿ

ಮಾಜಿ ಸಿಎಂ ಹೆಚ್‌.ಡಿ.ಕುಮಾರಸ್ವಾಮಿ ಆಶೀರ್ವಾದ



ಭರತ್ ಮಂಜೇಗೌಡರಿಗೆ ಮಾಜಿ ಸಿಎಂ ಹೆಚ್‌.ಡಿ.ಕುಮಾರಸ್ವಾಮಿ ಕೇಕ್ ತಿನ್ನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿ, ಆಶೀರ್ವದಿಸಿದರು.

ಮೈಸೂರು,ಜು.19–ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಪುತ್ರ ಭರತ್ ಮಂಜೇಗೌಡನಿಗೆ ಉತ್ತಮ ಭವಿಷ್ಯವಿದ್ದು, ಚಾಮುಂಡೇಶ್ವರಿ ಅವರಿಗೆ ಒಳ್ಳೆಯದು ಮಾಡಲಿ ಎಂದು ಮಾಜಿ ಸಿಎಂ ಹೆಚ್‌.ಡಿ.ಕುಮಾರಸ್ವಾಮಿ ಶುಭ ಹಾರೈಸಿ, ಆಶೀರ್ವದಿಸಿದರು.

ಹೆಚ್‌.ಡಿ.ಕೋಟೆಗೆ ಹೋಗುವ ಮಾರ್ಗ ಮಧ್ಯ ಭೋಗಾದಿ ಗ್ರಾಮದ ಗಣಪತಿ ದೇವಸ್ಥಾನದ ಬಳಿ ಭರತ್ ಮಂಜೇಗೌಡರ ಹುಟ್ಟುಹಬ್ಬದ ಅಂಗವಾಗಿ ಕೇಕ್ ಕತ್ತರಿಸಿ, ಆತ್ಮೀಯವಾಗಿ ಅಭಿನಂದಿಸಿ ಮಾತನಾಡಿದ ಅವರು, ಕಾರ್ಯಕರ್ತರು, ಮುಖಂಡರು ಎಲ್ಲರೂ ಒಗ್ಗಟ್ಟಿನಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ಮುಂದಿನ ದಿನಗಳಲ್ಲಿ ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದರು.

ಜೆಡಿಎಸ್ ಮುಖಂಡ ಅಪೆಕ್ಸ್ ಶ್ರೀನಿವಾಸ್ ಮಾತನಾಡಿ, ಭರತ್ ಮಂಜೇಗೌಡರು ವಕೀಲರಾಗಿದ್ದು, ತಂದೆಯಂತೆ ಜನರ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದು, ಮುಂದಿನ ದಿನಗಳಲ್ಲಿ ಉತ್ತಮ ನಾಯಕನಾಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿವೆ ಅವರಿಗೆ ಚಾಮುಂಡೇಶ್ವರಿ ಆಯುಷ್ಯ, ಆರೋಗ್ಯ ಕರುಣಿಸಲಿ ಎಂದು ಹಾರೈಸಿದರು. ಈ ವೇಳೆ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಘವೇಂದ್ರ, ತಾಂಡವಪುರ ಶಿವಣ್ಣ ಶ್ರೀರಾಂಪುರ ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ್, ಮಹಾದೇವ್, ದಿನೇಶ್‌ಗೌಡ, ರಮ್ಮನಹಳ್ಳಿ ನಾಗರಾಜು, ಗ್ಯಾರೇಜ್ ರವಿ, ಕಾಟೂರು ದೇವರಾಜ್, ಜೇಸುದಾಸ್, ಪ್ರಸನ್ನ, ಶಿವು, ಧರ್ಮ ಹಾಗೂ ನೂರಾರು ಕಾರ್ಯಕರ್ತರು ಭಾರೀ ಹಾರ ಹಾಕಿ, ಪಟಾಕಿ ಸಿಡಿಸಿ, ಸಂಭ್ರಮಿಸಿದರು.



ಮೈಸೂರು ಜಿಲ್ಲಾಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ 2ನೇ ಸ್ಥಾನ ಪಡೆದ ಪೈಲ್ವಾನ್ ಬಸವಯ್ಯನವರ ಮರಿ ಮೊಮ್ಮಗ, ರಾಜಕುಮಾರ್‌ರ ಪುತ್ರ ಅರ್ಜುನ್‌ಗೌಡರನ್ನು ಪಾಲಿಕೆ ಸದಸ್ಯ ಕೊಪ್ಪಲ್ ಶಿವಕುಮಾರ್, ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಪಾಲಿಕೆ ಮಾಜಿ ಸದಸ್ಯ ಚಿನ್ನಪ್ಪ, ಸಂಬಣ್ಣ, ಚನ್ನಪ್ಪ, ರಾಜಣ್ಣ, ಪುಟ್ಟರಾಜು, ಮಾದೇವ್, ಕೃಷ್ಣ, ಶ್ರೀನಿವಾಸ್, ನಾರಾಯಣ್ ಇನ್ನಿತರರು ಸನ್ಮಾನಿಸಿದರು.

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು



ಮೈಸೂರು ತಾಲೂಕಿನ ಸಿದ್ದಲಿಂಗಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 2022ನೇ ಸಾಲಿಗೆ ನಡೆದ ಚುನಾವಣೆಯಲ್ಲಿ 11 ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ. ಸಾಲಗಾರರ ಕ್ಷೇತ್ರದಿಂದ ಪಿ.ಎಚ್.ರಾಮೇಗೌಡ–ಕಾಮನಕೆರೆಹುಂಡಿ, ಹೆಚ್.ಗೋಪಾಲ್–ಕಾಮನಕೆರೆಹುಂಡಿ, ಪುರಂದರ–ಕಳಸ್ತವಾಡಿ, ಸಿ.ನಾರಾಯಪ್ಪ– ಕಾಮನಕೆರೆಹುಂಡಿ, ಕೆ.ಜೆ.ಮಾದೇಶ್–ಕಾಮನಕೆರೆಹುಂಡಿ, ಮರಿಸ್ವಾಮಿ–ಹಳೆ ಕೆಸರೆ, ಸೋಮಣ್ಣ–ಸಿದ್ದಲಿಂಗಪುರ, ಮಾದೇಗೌಡ–ಸಿದ್ದಲಿಂಗಪುರ, ಎಂ.ಎಂ.ಸುನೀತಾ–ಸಿದ್ದಲಿಂಗಪುರ, ಗಾಯತ್ರಿ–ಕಳಸ್ತವಾಡಿ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಸಿ.ಕೃಷ್ಣ–ಕಾಮನಕೆರೆಹುಂಡಿ ಅವರುಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳನ್ನು ಸಹಕಾರ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಗ್ರಾಮಸ್ಥರು ಆತ್ಮೀಯವಾಗಿ ಅಭಿನಂದಿಸಿದರು.

ವಿಧಾನಸಭಾ ಚುನಾವಣೆಗೆ ಮುನ್ನವೇ ಕಾಂಗ್ರೆಸ್‌ನಲ್ಲಿ 'ಮುಖ್ಯಮಂತ್ರಿ' ಪೈಪೋಟಿ

- ಸಿದ್ದರಾಮೋತ್ಸವದ ಮೂಲಕ ಸಿದ್ದರಾಮಯ್ಯ
- ಜನಾಂಗದ ಮೂಲಕ ಡಿ.ಕೆ.ಶಿವಕುಮಾರ್

} ಜಿದ್ದಾಜಿದ್ದಿ, ಪರಸ್ಪರ ಟಾಂಗ್

ಬೆಂಗಳೂರು, ಜು.19(ಕೆಎಂಶಿ)–ಸಿದ್ದರಾಮೋತ್ಸವಕ್ಕೂ ಮುನ್ನ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಾದಿಗೆ ಪೈಪೋಟಿ ಆರಂಭವಾಗಿದೆ.



ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಯಾಗುವ ಅವಕಾಶವಿದೆ. ನಮ್ಮ ಸಮಾಜ ನನ್ನ ಕೈಬಿಡಬಾರದೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೊಸ ವರಸೆ ಆರಂಭಿಸಿದ್ದಾರೆ.

ಇದರ ಬೆನ್ನಲ್ಲೇ ಮುಖ್ಯಮಂತ್ರಿಗಾದಿಯ ಆಕಾಂಕ್ಷಿ ಸಿದ್ದರಾಮಯ್ಯ, ಶಿವಕುಮಾರ್ ತಮ್ಮ ಸಮಾಜದ ಮತಗಳನ್ನು ಕಾಂಗ್ರೆಸ್‌ಗೆ ಪಡೆಯಲು ನೀಡುತ್ತಿರುವ ಹೇಳಿಕೆಯಲ್ಲಿ ತಪ್ಪಿಲ್ಲ. ಆದರೆ ಮುಖ್ಯಮಂತ್ರಿ ಯಾರಾಗಬೇಕೆಂಬ ನಿರ್ಧಾರವನ್ನು ಪಕ್ಷದ ಶಾಸಕರು ಹಾಗೂ ದೆಹಲಿ ವರಿಷ್ಠರು ತೀರ್ಮಾನ ಕೈಗೊಳ್ಳುತ್ತಾರೆ ಎಂದು ಶಿವಕುಮಾರ್‌ಗೆ ಟಾಂಗ್ ಕೊಟ್ಟಿದ್ದಾರೆ. ನಾಯಕತ್ವಕ್ಕಾಗಿ ಪ್ರದೇಶ ಕಾಂಗ್ರೆಸ್‌ನಲ್ಲಿದ್ದ ಆಂತರಿಕ ಪೈಪೋಟಿ ಇದೀಗ ಬೀದಿಗೆ ಬಂದಿದೆ. ಉಭಯ ನಾಯಕರು ಒಂದಲ್ಲ ಒಂದು ವೇದಿಕೆ ಯಲ್ಲಿ ನಾನೇ ಮುಖ್ಯಮಂತ್ರಿ ಎಂದು ಸ್ವಯಂಘೋಷಣೆ ಮಾಡಿಕೊಳ್ಳುತ್ತಿದ್ದಾರೆ.

ವಿಧಾನಸಭಾ ಚುನಾವಣೆಯ ನಂತರ ವಿಧಾನಸೌಧದಲ್ಲಿ ಕಂಬಳಿ ಆಡಳಿತ ನಡೆಸುತ್ತದೆ ಎಂದು ಪರೋಕ್ಷವಾಗಿ ನಾನೇ ಮುಂದಿನ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿಕೆ ನೀಡಿದ ಬೆನ್ನಲ್ಲೇ ಶಿವಕುಮಾರ್ ತಮ್ಮ ಒಕ್ಕಲಿಗ ಸಮಾಜದ ವೇದಿಕೆಗಳಲ್ಲಿ ತಮ್ಮ ಅಭಿಲಾಷೆಯನ್ನು ಹೊರಗೆಡುವುತಿದ್ದಾರೆ. ಪಕ್ಷದ ಈ ನಾಯಕರ ಹೇಳಿಕೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಇತರ ನಾಯಕರಿಗೆ ನುಂಗಲಾರದ ತುತ್ತಾದರೆ, ಆಡಳಿತಾರೂಢ ಬಿಜೆಪಿ ಇದರಿಂದ ರಾಜಕೀಯ ಲಾಭ ಪಡೆದುಕೊಳ್ಳಲು ಮುಂದಾಗಿದೆ. ಆಗಸ್ಟ್ 3ರಂದು ದಾವಣಗೆರೆಯಲ್ಲಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬವನ್ನು ಅವರ ಬೆಂಬಲಿಗರು ವೈಭವೀಕರಿಸಿ, ವ್ಯಕ್ತಿ ಪೂಜೆ ಮಾಡಲು ಹೊರಟಿದ್ದೇ ಶಿವಕುಮಾರ್ ಅವರನ್ನು ಕೆರಳಿಸಿದೆ ಎಂದು ಹೇಳಲಾಗಿದೆ. ಸಮಾವೇಶಕ್ಕೆ ಸಂಬಂಧಿಸಿದಂತೆ ವರಿಷ್ಠರನ್ನು ಸಂಪರ್ಕಿಸಿ, ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರುವ ಶಿವಕುಮಾರ್ ಮುಖ್ಯಮಂತ್ರಿ ಗಾದಿಗೆ ಸಂಬಂಧಿಸಿದಂತೆ ಸ್ಪಷ್ಟ ಸಂದೇಶ ನೀಡಿದ್ದಾರೆ ಎಂದು ಆಪ್ತರು ಹೇಳುತ್ತಿದ್ದಾರೆ.

ಶಿವಕುಮಾರ್ ಹೇಳಿಕೆ ಸಿದ್ದರಾಮಯ್ಯ ಬೆಂಬಲಿಗರನ್ನು ಕೆರಳಿಸಿದೆ. ನಾಯಕರೊಬ್ಬರ ಹುಟ್ಟು ಹಬ್ಬ ಆಚರಿಸಿದರೆ ಇವರಿಗೇನು ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಮತ್ತೊಂದೆಡೆ ಸಿದ್ದರಾಮಯ್ಯ ಮತ್ತೆ ಯಾಕೆ ಮುಖ್ಯಮಂತ್ರಿಯಾಗಬಾರದು ಎಂದು ಪ್ರಶ್ನೆ ಮಾಡಿರುವುದಲ್ಲದೆ, ಇಂದಿರಾಗಾಂಧಿ ಹಾಗೂ ನರೇಂದ್ರ ಮೋದಿ ಎರಡು ಮೂರನೇ ಬಾರಿ ಪ್ರಧಾನಿಯಾಗಿಲ್ಲವೆ.

ನರೇಂದ್ರ ಮೋದಿ ಅವರು ಸತತವಾಗಿ 14 ವರ್ಷ ಮುಖ್ಯಮಂತ್ರಿಯಾಗಿದ್ದರಲ್ಲ. ಯಾರಿಗೆ ಪಕ್ಷದ ಶಾಸಕರು ಮತ್ತು ಸಂಸದರ ಬೆಂಬಲ ಇರುತ್ತೋ ಅಂತಹವರು ನಾಯಕರಾಗಿ ಅಧಿಕಾರ ಹಿಡಿಯುವುದರಲ್ಲಿ ತಪ್ಪೇನಿದೆ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ಅಧಿಕಾರಕ್ಕೆ ಬರುವ ಮುನ್ನವೇ ಮುಖ್ಯಮಂತ್ರಿ ಗಾದಿಗಾಗಿ ಕಾಂಗ್ರೆಸ್‌ನಲ್ಲಿ ಪೈಪೋಟಿ ಆರಂಭಗೊಂಡಿದೆ.

ಇಂದು ಶಾಸಕ ನಾಗೇಂದ್ರರಿಂದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಜೊತೆಗೆ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನೆ

ಮೈಸೂರು,ಜು.19(ಪಿಎಂ)–ಮೈಸೂರಿನ ಮೀನಾ ಬಜಾರ್‌ನಿಂದ ಪುಲಕೇಶಿ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಹಾಗೂ ಅಶೋಕ ರಸ್ತೆ ವೆಸ್ಲನ 23ನೇ ಕ್ರಾಸ್‌ನ ಷಾಹಿ ಮಸೀದಿ ಸಮೀಪ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನೆಯನ್ನು ಜು.20ರಂದು ಶಾಸಕ ಎಲ್.ನಾಗೇಂದ್ರ ನೆರ ವೇರಿಸಲಿದ್ದಾರೆ.



ಬೆಳಗ್ಗೆ 10.30ಕ್ಕೆ ಅಶೋಕ ರಸ್ತೆಯ ಸೆಂಟ್ ಫಿಲೋಮಿನಾ ಚರ್ಚ್ ವೃತ್ತದ ಸಮೀಪದ ಕಾಂತರಾಜ ಪಾರ್ಕ್ ಬಳಿಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆ. ಮೈಸೂರು ಪಾಲಿಕೆ ವತಿಯಿಂದ ಈ ಕಾಮಗಾರಿ ಕೈಗೆತ್ತಿಕೊಂಡಿದ್ದು, ಶಾಸಕರ ವಿವೇಚನಾ ಮಹಾತ್ಮ ಗಾಂಧಿ ನಗರವಿಕಾಸ ಯೋಜನೆಯ ವಿಶೇಷ ಪ್ಯಾಕೇಜ್ ಅನುದಾನದ 1 ಕೋಟಿ ರೂ. ವೆಚ್ಚದಲ್ಲಿ ಈ ಕಾಮಗಾರಿ ನಡೆಯಲಿದೆ. ಬೆಳಗ್ಗೆ 10.45ಕ್ಕೆ ಅಶೋಕ ರಸ್ತೆಯ ವೆಸ್ಲನ 23ನೇ ಕ್ರಾಸ್‌ನಲ್ಲಿ ಷಾಹಿ ಮಸೀದಿ ಸಮೀಪ ಮೈಸೂರು ನಗರ ಪಾಲಿಕೆ ಸಾಮಾನ್ಯ ಅನುದಾನ 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಶಾಸಕರು ಚಾಲನೆ ನೀಡಲಿದ್ದಾರೆ. ಈ ವೇಳೆ ಪಾಲಿಕೆ ಸದಸ್ಯರು ಆದ ಮಾಜಿ ಮೇಯರ್ ತಸ್ಲೀಂ ಸೇರಿದಂತೆ ಮತ್ತಿತರರು ಹಾಜರಿರಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಅರ್ಜಿ ಅವಧಿ ವಿಸ್ತರಣೆ

ಮೈಸೂರು, ಜು.19– ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ 2022ನೇ ಸಾಲಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಜು.25ವರೆಗೆ ವಿಸ್ತರಿಸಿದೆ. http://www.school edu cation.kar.nic.in ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

PUBLIC NOTICE

NOTICE IS HERE BY GIVEN to the public that my client Mr. Sandeep. H.R S/o Sri. C.Ramegowda, aged about 35 years, Residing at No.132/1, 3rd Main, 9th Cross, T.K.Layout, Saraswathipuram, Mysore-570017, is intending to purchase schedule property from Smt.A.N.Chaya D/o Sri.A.N.Niranjana Raje Urs, aged about 52 years, Residing at No. 104, 1st Main, Vijayanagara, 1st Stage, Mahadeshwara Layout, Mysore-570017. If anybody has any claim over the schedule property, they shall lodge their claim along with relevant documents within Ten days from the date of this notice to the under signed, failing which it will be considered that there will be no claim and our client will proceed to complete the transaction. Any objection received subsequent to the above date will not be entertained.

SCHEDULE

All that piece and parcel of residential Model House bearing No.22 CH1, Situated at 10th Main, Saraswathipuram, Mysuru - 570 009 and Bounded on:

East by : Road,
West by : Property bearing No.160,
North by : Property bearing No.132,
South by : Property bearing House No.2,

Measuring East to West : 68.00 Feet and North to South : 45.00 Feet., along with 1125 Sq.Ft ground Floor RCC Red Oxide Flooring building together with water, electricity and sanitary connections thereon.

Date: 19-07-2022

BINDU.M B.A.L., L.L.B.,
ADVOCATE
No. 2967/2, 14th Main, 2nd Cross
Saraswathipurm, MYSURU-570 009

ಕಛೇರಿ : 08229-222226
Fax : 08229-222226
Helpline : 08229-223377
E-mail : tmc_gundlupet@yahoo.com
Website : www.gundlupettown.gov.in

ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ.

ಚಾಮರಾಜನಗರ ಜಿಲ್ಲೆ–571111

ಸಂಖ್ಯೆ:ಪುಗು/ಕಇ/ಪಿಆರ್/02/15ನೇಹಕಾ(2021–22)/2022–23 ದಿನಾಂಕ: 18.07.2022

ಟೆಂಡರ್ ಪ್ರಕಟಣೆ (2ನೇ ಕರೆ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆಡಬ್ಲ್ಯೂ–1 (ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಷರತ್ತುಗಳಿಗೆ ಒಳಪಟ್ಟಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ; 26.07.2022 ಸಂಜೆ 4.00 ವರೆಗೆ, ಟೆಂಡರ್‌ನ್ನು ತೆರೆಯುವ ದಿನಾಂಕ: 28.07.2022.

1. ಗುಂಡ್ಲುಪೇಟೆ ಪುರಸಭೆಗೆ ಕಬಿನಿ ನೀರು ಸರಬರಾಜು ಮಾಡುವ ದೇಬೂರು ಪಂಪು ಸ್ಥಾವರದಲ್ಲಿ ಟ್ರಾನ್ಸ್‌ಫಾರ್ಮರ್ ಎತ್ತರಿಸಿ, ಹೊಸದಾಗಿ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು. ಹಾಗೂ ಸಿಂಧುವಳ್ಳಿ ಪಂಪು ಸ್ಥಾವರದಲ್ಲಿ ಹೊಸದಾಗಿ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾಮಗಾರಿ. ರೂ. 36.67 ಲಕ್ಷ, ಇಂಡೆಂಟ್: 129762.

ಮೇಲಿನ ಕಾಮಗಾರಿಗಳಿಗೆ ಕಾಲಾವಧಿ(ಮಳೆಗಾಲ ಸೇರಿ):– 04 ತಿಂಗಳು. ಮೇಲಿನ ಎಲ್ಲಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ದರ್ಜೆ:– 3ನೇ ದರ್ಜೆ ಮೇಲ್ಪಟ್ಟು. ಕಾಮಗಾರಿಗಳ ವಿವರಗಳನ್ನು www.eproc.karnataka.gov.in ಮತ್ತು ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ತಿಳಿದುಕೊಳ್ಳಬಹುದು.

ಸಹಿ/– ಪಿ.ಗಿರೀಶ್
ಅಧ್ಯಕ್ಷರು,
ಪುರಸಭೆ, ಗುಂಡ್ಲುಪೇಟೆ

ಸಹಿ/– ಆರ್.ಹೇಮಂತರಾಜು
ಮುಖ್ಯಾಧಿಕಾರಿ
ಪುರಸಭೆ, ಗುಂಡ್ಲುಪೇಟೆ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571401

MANDYA INSTITUTE OF MEDICAL SCIENCES
MANDYA -571401
(Autonomous Medical Institution, Government of Karnataka)
Phone & Fax : 08232-231001, Director : 08232-222086
CAO : 08232-231197, FA : 08232-401198
E-Mail Address:mimsmandya@gmail.com
NO.MIMS/EST(1)/Director/Interview/12/2022-23
ದಿನಾಂಕ:18.07.2022

ಅಧಿಸೂಚನೆ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಇಲ್ಲಿ ಖಾಲಿಯಿರುವ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಸರ್ಕಾರದ ಆದೇಶ ಸಂ:ಎಂಇಡಿ 287 ಎಂಪಿಎಸ್ 2022 ದಿನಾಂಕ: 12.07.2022ರ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಅರ್ಹತೆ ಮತ್ತು ಅರ್ಹತಾ ಮಾನದಂಡಗಳನ್ನು ಎನ್.ಎಂ.ಸಿ/ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.

ಸೂಚನೆ: ನಿಗದಿತ ಅರ್ಜಿ ನಮೂನೆಯನ್ನು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ https://mims.karnataka.gov.in ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಇವರ ಹೆಸರಿನಲ್ಲಿ ರೂ.5000/–ಗಳ ಡಿಮ್ಯಾಂಡ್ ಡ್ರಾಫ್ಟ್‌ನ್ನು (ಹಿಂದಿರುಗಿಸಲಾಗದಿರುವ) ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ನೋಂದಾಯಿತ ಅಂಚೆ ಮುಖಾಂತರ ಅಥವಾ ಖುದ್ದಾಗಿ ಮುಖ್ಯ ಆಡಳಿತಾಧಿಕಾರಿಗಳು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜಿಲ್ಲಾ ಆಸ್ಪತ್ರೆ ಆವರಣ, ಮಂಡ್ಯ–571401 ವಿಳಾಸಕ್ಕೆ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್‌ನ್ನು ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02.08.2022 ಸಂಜೆ 5.00 ಗಂಟೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.

ವಾಸಾಸಂಇ/ಸನಿ–ಮಂಡ್ಯ/ಎಂಸಿಡಿಎ/213/2022–23

ಮೈಸೂರು ಮಿತ್ರ ಬುಧವಾರ 20 ಜುಲೈ 2022

ಮೂರನೇ ಪುಟದಿಂದ

ಮಡಿಕೇರಿ ಸಮೀಪ ಭಾರೀ ಜಲಸ್ಫೋಟ



ರಾಮಕೊಲ್ಲಿಯಲ್ಲಿ 30ಕ್ಕೂ ಹೆಚ್ಚು ಕುಟುಂಬಗಳಿದ್ದು, ಅದೃಷ್ಟವಶಾತ್ ಪ್ರಾಣ ಹಾನಿ, ಮನೆ ಹಾನಿಯಾಗಿಲ್ಲ. 2018ರಲ್ಲಿ ವಿಕೋಪ ಸಂಭವಿಸಿದ ಸ್ಥಳದಲ್ಲೇ ಮತ್ತೆ ಜಲಸ್ಫೋಟ, ಭೂಕುಸಿತವಾಗಿದೆ. ಇದರಿಂದ ಜಲಸ್ಫೋಟಕ್ಕೆ ನಿಖರವಾದ ಕಾರಣ ತಿಳಿಯುವ ನಿಟ್ಟಿನಲ್ಲಿ ಅಧ್ಯಯನವಾಗಬೇಕಿದೆ. **–ಕೆ.ಜಿ ಬೋಪಯ್ಯ, ಶಾಸಕರು**



ರಾಮಕೊಲ್ಲಿ ಸೇರಿದಂತೆ 2ನೇ ಮೊಣ್ಣಂಗೇರಿ ವ್ಯಾಪ್ತಿಯಲ್ಲಿ ಒಟ್ಟು 132 ಮನೆಗಳಿವೆ. ಸದ್ಯ ಅಪಾಯದಲ್ಲಿರುವ ಕುಟುಂಬಗಳನ್ನು ಸ್ಥಳಾಂತರಿಸಲಾಗುವುದು. ಗ್ರಾಮಸ್ಥರು ಒಪ್ಪಿದರೆ ಕಾಟಕೇರಿ ಬಳಿ ಜಾಗ ಗುರುತಿಸಲಾಗಿದ್ದು, ಅಲ್ಲಿಗೆ ಎಲ್ಲಾ 132 ಕುಟುಂಬಗಳನ್ನೂ ಶಾಶ್ವತವಾಗಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು. **–ಡಾ.ಬಿ.ಸಿ ಸತೀಶ, ಕೊಡಗು ಜಿಲ್ಲಾಧಿಕಾರಿ.**

ಎಚ್ಚೆತ್ತುಕೊಂಡಿದ್ದು, ಗ್ರಾಮ ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳಲು ಸಿದ್ಧತೆ ನಡೆಸಿದ್ದರು. ರಾಮನಕೊಲ್ಲಿ ಸೇತುವೆಯ ಮತ್ತೊಂದು ಬದಿಯಲ್ಲಿ 25 ಕುಟುಂಬಗಳು ನೆಲೆಸಿದ್ದು, ಈ ಪೈಕಿ ಸೇತುವೆ ಸಮೀಪ ವಿರುವ 2 ಕುಟುಂಬಗಳು ಮರದ ಸೇತುವೆ ಮೂಲಕ ಮಡಿಕೇರಿಗೆ ತೆರಳಿ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ. ಆದರೆ ಇನ್ನುಳಿದವರು ಬಂದು ನೋಡಿದಾಗ ಆ ಹೊತ್ತಿಗಾ ಗಲೇ ಮರದ ತಾತ್ಕಾಲಿಕ ಸೇತುವೆ ಧ್ವಂಸ ವಾಗಿರುವುದು ಕಂಡು ಬಂದಿದೆ. ಹೀಗಾಗಿ ಗ್ರಾಮ ತೊರೆಯಲು ಸಾಧ್ಯವಾಗದೇ, ನೂರಾರು ಗ್ರಾಮಸ್ಥರು ರಾತ್ರಿ ಪೂರ್ತಿ ಜೀವ ಕೈಯ್ಯಲ್ಲಿ ಹಿಡಿದು ದಿನ ಕಳೆದಿದ್ದಾರೆ. ಮಂಗಳವಾರ ಬೆಳಗ್ಗೆ ಹರಸಾಹಸ ಮಾಡಿದ ಗ್ರಾಮಸ್ಥರು 3 ವಿದ್ಯುತ್ ಕಂಬಗಳನ್ನು ಹೊತ್ತು ತಂದು ರಾಮನಕೊಲ್ಲಿ ಸೇತುವೆಗೆ ಅಳವಡಿಸಿ ಗ್ರಾಮಕ್ಕೆ ಮರು ಸಂಪರ್ಕ ಕಲ್ಪಿಸಿದ್ದಾರೆ. ಆ ಮೂಲಕ

ಸೇತುವೆಯ ಮತ್ತೊಂದು ಬದಿಯಲ್ಲಿ ಸಿಲುಕಿದ್ದ ಗ್ರಾಮಸ್ಥರನ್ನು ಹೊರ ತಂದಿದ್ದಾರೆ. ರಾಮನಕೊಲ್ಲಿ ತೊರೆಗೆ ಭಾರೀ ಪ್ರಮಾಣದಲ್ಲಿ ಮಣ್ಣು ಬಿದ್ದ ಪರಿಣಾಮ ತೊರೆಯ ನೀರಿನಲ್ಲಿ ಮಣ್ಣು ಕೆಸರಿನ ರಾಡಿಯಾಗಿ ಹರಿಯುತ್ತಿದ್ದು, ಆತಂಕ ಹುಟ್ಟಿಸುತ್ತಿದೆ. ಸೇತುವೆ ನಿರ್ಮಾಣ ಹಂತದಲ್ಲಿದ್ದು, ತಡೆಗೋಡೆಯ ಪಕ್ಕದಲ್ಲೇ ಈ ಹಿಂದೆ ಸುರಿದ ಮಳೆಗೆ ಮಣ್ಣು ಕೊಚ್ಚಿ ಹೋಗಿದೆ. ಇದೀಗ ಸೋಮವಾರ ರಾತ್ರಿ ಸಂಭವಿಸಿದ ಜಲ ಸ್ಫೋಟದಿಂದಾಗಿ ರಾಮನಕೊಲ್ಲಿ ತೊರೆ ಪಥ ಬದಲಿಸಿ ಮಣ್ಣು ಕೊಚ್ಚಿ ಹೋದ ಸ್ಥಳದಲ್ಲಿ ನೀರು ಹರಿಯುತ್ತಿದೆ. ಸೇತುವೆಗೆ ಭಾರಿ ಪ್ರಮಾಣದ ಮರದ ದಿಮ್ಮಿಗಳು ತೇಲಿ ಬಂದಿದ್ದು, ನೀರು ಸರಾಗವಾಗಿ ಹರಿಯಲು ಅಡ್ಡಿಯಾಗಿದೆ.

ಬಿರುಕಿನಿಂದ ಆತಂಕ: 2ನೇ ಮೊಣ್ಣಂಗೇರಿ ಗ್ರಾಮ ನಿಶಾನಿ ಬೆಟ್ಟದ ತಪ್ಪಲಿನಲ್ಲಿ ನೆಲೆ ನಿಂತಿದ್ದು, 2018ರಲ್ಲಿ ಸಂಭವಿಸಿದ ಜಲಸ್ಫೋಟದಿಂದ ಭಾರೀ ಪ್ರಾಕೃತಿಕ ವಿಕೋಪಕ್ಕೆ ಸಾಕ್ಷಿಯಾಗಿದೆ. ಅಂದು ನಿಶಾನಿ ಬೆಟ್ಟದಲ್ಲಿ ಭಾರೀ ಭೂ ಕುಸಿತ ಸಂಭವಿಸಿದ ಪರಿಣಾಮ ಇಡೀ ಗ್ರಾಮವೇ ಸಂತ್ರಸ್ತವಾಗಿದ್ದು, ಅದೇ ಪರಿಸ್ಥಿತಿ ಪ್ರತಿ ಮಳೆಗಾಲದಲ್ಲೂ ಕಂಡು ಬರುತ್ತದೆ. ಭೂ ಕುಸಿತದ ಕಾರಣ ನಿಶಾನಿ ಬೆಟ್ಟದಲ್ಲಿ ಭಾರೀ ಬಿರುಕು ಮೂಡಿದ್ದು, ಇದು ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದೆ. ಇದೀಗ ಜಲ ಸ್ಫೋಟ ಉಂಟಾದ ಸ್ಥಳದಲ್ಲೇ ಅಂತರಜಲ ಉಕ್ಕಿ ತೊರೆಯಾಗಿ ಹರಿಯುತ್ತಿದ್ದು, ಭೀತಿ ಹುಟ್ಟಿಸುತ್ತಿದೆ. ಅತೀವ ಮಳೆ ಸುರಿದು ಬಿರುಕು ಬಿಟ್ಟ ಬೆಟ್ಟ ಪ್ರದೇಶ ಕುಸಿದು ಬಿದ್ದಲ್ಲಿ ಭಾರೀ ಅನಾಹುತವೊಂದು ಸಂಭವಿಸಲಿದ್ದು, ಸುತ್ತಮುತ್ತಲಿನ ಹಲವು ಗ್ರಾಮಗಳಿಗೆ ಇದರ ಪರಿಣಾಮ ಬೀರಲಿದೆ.

ಘಟನಾ ಸ್ಥಳ ಪರಿಶೀಲನೆ: ಜಲಸ್ಫೋಟದಿಂದ ಸಿಲುಕಿರುವ 2ನೇ ಮೊಣ್ಣಂಗೇರಿ ಗ್ರಾಮಕ್ಕೆ ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ, ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಗ್ರಾಮ ಪಂಚಾಯಿತಿ ಪಿಡಿಓ ರವಿಕಿರಣ, ಕಂದಾಯ ಇಲಾಖೆ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದರು. ಸೇತುವೆ ಹಾನಿ, ಭೂ ಕುಸಿತವಾದ ಸ್ಥಳ, ಬಿರುಕು ಬಿಟ್ಟ ಪ್ರದೇಶಕ್ಕೂ ತೆರಳಿದ ಶಾಸಕರು ಮತ್ತು ಅಧಿಕಾರಿಗಳು ವಾಸ್ತವ ಸ್ಥಿತಿಗತಿಗಳನ್ನು ವೀಕ್ಷಿಸಿದರು. ಗ್ರಾಮದ ಜನಸಂಖ್ಯೆ, ಒಟ್ಟು ಇರುವ ಮನೆಗಳು, ಅಪಾಯಕಾರಿ ಪ್ರದೇಶಗಳ ಕುರಿತು ಅಧಿಕಾರಿಗಳಿಂದ ಶಾಸಕರು ಮಾಹಿತಿ ಪಡೆದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಕೆ.ಜಿ ಬೋಪಯ್ಯ, ಈ ಭಾಗದಲ್ಲಿ ಅಪಾಯದಲ್ಲಿರುವ 32 ಮನೆಗಳನ್ನು ಸ್ಥಳಾಂತರಿಸಲು ಸೂಚಿಸಲಾಗಿದ್ದು, ಕಾಟಕೇರಿಯ ಸರಕಾರಿ ಶಾಲೆಯಲ್ಲಿ ಕಾಳಜಿ ಕೇಂದ್ರ ಆರಂಭಿಸಲಾಗುವುದು ಎಂದರು. ಕಳೆದ ಬಾರಿ ಭೂ ಕುಸಿತವಾಗಿ ಇಲ್ಲಿದ್ದ ಸೇತುವೆ ಕೊಚ್ಚಿ ಹೋಗಿದೆ. ಈಗ ಅದೇ ಸ್ಥಳದಲ್ಲಿ ನೂತನ ಸೇತುವೆ ನಿರ್ಮಾಣ ಮಾಡಲಾಗುತ್ತಿದ್ದು, ಕಾಮಗಾರಿ ಪೂರ್ಣವಾಗದ ಹಿನ್ನೆಲೆ ಸಮಸ್ಯೆಯಾಗಿದೆ. ಸೇತುವೆಗೆ ಸಿಲುಕಿಕೊಂಡಿರುವ ಮರದ ದಿಮ್ಮಿಗಳನ್ನು ತೆರವುಗೊಳಿಸಲು ಗ್ರಾಮಸ್ಥರಿಗೆ ತಿಳಿಸಿದ್ದು, ಅದಕ್ಕೆ ಸಂಬಳವನ್ನು ಗ್ರಾಮ ಪಂಚಾಯಿತಿ ಯಿಂದ ನೀಡಲು ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು. ಅಲ್ಲದೇ ಪದೇ ಪದೇ ಇಲ್ಲಿ ಜಲಸ್ಫೋಟ ಸಂಭವಿಸುತ್ತಿರುವ ಹಿನ್ನೆಲೆ ಇದಕ್ಕೆ ವೈಜ್ಞಾನಿಕ ಕಾರಣಗಳನ್ನು ಕಂಡುಕೊಂಡು ಶಾಶ್ವತ ಪರಿಹಾರದ ಬಗ್ಗೆ ಚಿಂತಿಸಬೇಕಿದೆ ಎಂದರು. ಜಿಲ್ಲಾಧಿಕಾರಿ ಡಾ.ಬಿ.ಸಿ ಸತೀಶ ಮಾತನಾಡಿ, ರಾಮನಕೊಲ್ಲಿ ಸೇರಿದಂತೆ 2ನೇ ಮೊಣ್ಣಂಗೇರಿ ವ್ಯಾಪ್ತಿಯಲ್ಲಿ ಒಟ್ಟು 132 ಮನೆಗಳಿವೆ. ಸದ್ಯ ಅಪಾಯದಲ್ಲಿರುವ ಕುಟುಂಬಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು. ಜಲಸ್ಫೋಟ ಸಂಭವಿಸುತ್ತಿರುವ ಕುರಿತು ಅಧ್ಯಯನ ನಡೆಸಲು ತಜ್ಞರನ್ನು ಕರೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದರು.

ರೈತರ ಜಮೀನಿನ ಮಣ್ಣು, ನೀರು, ಬೆಳೆಗಳ ಪರೀಕ್ಷೆಗೆ ಸಜ್ಜಾಗಿವೆ 'ಕೃಷಿ ಸಂಜೀವಿನಿ' ವಾಹನಗಳು

ಮೋಹನ್ ಕಾಯಕ

ಮೈಸೂರು, ಜು.19– ರೈತರ ಹೊಲಕ್ಕೆ ಹೋಗಿ ನೀರು, ಮಣ್ಣು ಮತ್ತು ಬೆಳೆಗಳ ಪರೀಕ್ಷೆ ನಡೆಸುವ ಸಂಚಾರಿ ಪ್ರಯೋಗಾಲದ ಸೌಲಭ್ಯವುಳ್ಳ ಕೃಷಿ ಸಂಜೀವಿನಿ(ಲ್ಯಾಬ್ ಟು ಲ್ಯಾಡ್)' ವಾಹನಗಳನ್ನು ಹೆಚ್ಚಿಸಲಾಗಿದ್ದು, ಮೈಸೂರು ಜಿಲ್ಲೆಯ ಪ್ರತಿ ತಾಲೂಕಿಗೂ ಪ್ರತ್ಯೇಕ ವಾಹನಗಳನ್ನು ನೀಡಲಾಗಿದೆ.

ಜಿಲ್ಲೆಗೊಂದು ಕೃಷಿ ಸಂಜೀವಿನಿ ವಾಹನದಂತೆ ಮೈಸೂರು ಜಿಲ್ಲೆಗೆ ನೀಡಿದ ಒಂದು ವಾಹನದ ಜೊತೆಗೆ ಹೊಸದಾಗಿ 7 ಕೃಷಿ ಸಂಜೀವಿನಿ ವಾಹನಗಳು ಸೇರ್ಪಡೆಯಾಗಿದ್ದು, ವಾಹನಗಳಿಗೆ ನೀರು, ಮಣ್ಣು ಹಾಗೂ ಬೆಳೆಗಳ ಪರೀಕ್ಷೆ ನಡೆಸಲು ಬೇಕಾದ ಲ್ಯಾಬ್ ಅಳವಡಿಸುವ ಪ್ರಕ್ರಿಯೆ ನಡೆಯುತ್ತಿದೆ.

ಅತಿವೃಷ್ಟಿ–ಅನಾವೃಷ್ಟಿ, ಚಂಡಮಾರುತದಿಂದಾಗುವ ಬೆಳೆ ಹಾನಿ, ಬೆಳೆಗಳಿಗೆ ಕಾಡುವ ಕೀಟ ಮತ್ತು ರೋಗ ಬಾಧೆ ಹಾಗೂ ಮಣ್ಣಿನ ಫಲವತ್ತತೆ ಸೇರಿದಂತೆ ಇನ್ನಿತರೆ ಅಂಶಗಳ ಪರೀಕ್ಷೆ ಮಾಡುವುದರ ಜೊತೆಗೆ ಸುಧಾರಿತ ಕೃಷಿ ಉತ್ಪಾದನಾ ತಾಂತ್ರಿಕತೆ, ಗುಣಮಟ್ಟದ ಕೃಷಿ ಪರಿಕರಗಳ ಪೂರೈಕೆ ಮತ್ತು ಶಿಫಾರಸ್ಸು ಮಾಡಲಾದ ರಸಗೊಬ್ಬರಗಳ ಸಮರ್ಪಕ ಬಳಕೆ, ರೋಗ–ಕೀಟಗಳ ಹತೋಟಿ, ಮಣ್ಣಿನಲ್ಲಿ ಲಭ್ಯವಿರುವ ಪೋಷಕಾಂಶಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿ ಸೂಕ್ತ ಬೆಳೆ ಬೆಳೆಯಲು ಪ್ರೋತ್ಸಾಹಿಸುವುದರ ಜೊತೆಗೆ ಸಕಾಲದಲ್ಲಿ ಬೆಳೆಯ ಎಲ್ಲಾ ಹಂತಗಳಲ್ಲಿ ಸರ್ವೇಕ್ಷಣೆಯನ್ನು ಕೈಗೊಂಡು ಕಂಡುಬಂದಿರುವ ಕೀಟ, ರೋಗ ಕಳೆಗಳ ನಿರ್ವಹಣಾ ಮಾರ್ಗೋಪಾಯಗಳನ್ನು ರೈತರಿಗೆ ತಿಳಿಸುವುದಕ್ಕೆ ಕೃಷಿ ಸಂಜೀವಿನಿ ವಾಹನಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ

ಮೈಸೂರು ಜಿಲ್ಲೆಯ ಪ್ರತಿ ತಾಲೂಕಿಗೊಂದರಂತೆ ವ್ಯವಸ್ಥೆ



ತುರ್ತು ಸ್ಪಂದನೆ: ರೈತರು 155313 ಕೃಷಿ ಸಂಜೀವಿನಿ ಟೋಲ್ ಫ್ರೀ ಸಹಾಯವಾಣಿಗೆ ಕರೆ ಮಾಡಿದಲ್ಲಿ ಟೋಲ್ ಫ್ರೀ ಸಂಖ್ಯೆಯಿಂದ ಕರೆ ಮಾಡಿದ ರೈತರಿರುವ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಕರೆ ಹೋಗುತ್ತದೆ. ಅಲ್ಲಿಂದ ರೈತರು ತಮ್ಮ ಸಮಸ್ಯೆಯನ್ನು ತಿಳಿಸಿ ಪರಿಹಾರ ಪಡೆಯಬಹುದಾಗಿದ್ದು, 155313 ಆರೋಗ್ಯ ಇಲಾಖೆಯ ಆಂಬುಲೆನ್ಸ್‌ನಂತೆ ಸಹಾಯವಾಣಿಯಾಗಿ ಕೆಲಸ ಮಾಡುತ್ತದೆ.

15 ದಿನಕ್ಕೊಮ್ಮೆ ಸರಣಿ ಭೇಟಿ: ಕೃಷಿ ಸಂಜೀವಿನಿ ವಾಹನದಲ್ಲಿ ಡ್ರೈವರ್ ಹಾಗೂ ಒಬ್ಬರು ಟೆಕ್ನಿಷಿಯನ್ ಇರಲಿದ್ದು, ಇಲಾಖೆ ಸಿಬ್ಬಂದಿಗಳಲ್ಲಿ ಒಬ್ಬರು ರೈತರ ಜಮೀನಿಗೆ ಭೇಟಿ ನೀಡಬೇಕಾಗಿದೆ. ಆದರೆ ಕೃಷಿ ಇಲಾಖೆಯಲ್ಲಿನ ಸಿಬ್ಬಂದಿ ಕೊರತೆ ನೀಗಿಸಲು ಕೃಷಿ ತಂತ್ರಜ್ಞಾನ ಸಂಸ್ಥೆಯಲ್ಲಿ (ಕೃಷಿಯಲ್ಲಿ ಪದವಿ ಪಡೆದವರು) ಸದಸ್ಯರಾಗಿರುವವರ ಸಹಕಾರ ಪಡೆದುಕೊಳ್ಳಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಕೃಷಿ ತಂತ್ರಜ್ಞಾನ ಸಂಸ್ಥೆಯ 300 ಮಂದಿ ಸದಸ್ಯರಿದ್ದು, 12 ಮಂದಿ ಎಕ್ಸಿಕ್ಯೂಟಿವ್ ಸದಸ್ಯರು 15 ದಿನಗಳಿಗೊಮ್ಮೆ ವಿವಿಧ ತಾಲೂಕುಗಳಿಗೆ ಭೇಟಿ ನೀಡಿ ರೈತರು ಬೆಳೆದ ಬೆಳಗಳ ಪರೀಕ್ಷೆ ಹಾಗೂ ಸಲಹೆ ನೀಡಲಾಗುತ್ತಿದೆ ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಜಿ.ಹೆಚ್.ಯೋಗೇಶ್ ತಿಳಿಸಿದರು.

ಕೃಷಿ ಸಂಜೀವಿನಿ ಟೋಲ್ ಫ್ರೀ ಸಹಾಯವಾಣಿಗೆ ಕರೆ ಮಾಡಿ ಸಮಸ್ಯೆ ತಿಳಿಸಿದ ರೈತರ ವಿವರ ಪಡೆದು ಯಾವ ತಾಲೂಕಿಗೆ ತುರ್ತು ಭೇಟಿಯ ಅವಶ್ಯಕತೆ ಇದೆ ಎಂಬುದನ್ನು ನಿರ್ಧರಿಸಲಾಗುವುದು. ಬಳಿಕ ಮಾರ್ಗಸೂಚಿ ರೂಪಿಸಿ ಅದರಂತೆ ಆಯಾ ತಾಲೂಕಿನ ಗ್ರಾಮಗಳಿಗೆ ಭೇಟಿ ನೀಡಿ, ಸಮಸ್ಯೆಗಳಿಗೆ ಸ್ಪಂದಿಸಲಾಗುವುದು.

ರಾಜ್ಯದಾದ್ಯಂತ 164 ಕೃಷಿ ಸಂಜೀವಿನಿ ವಾಹನಗಳ ಸಂಚಾರ...

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಬೇಡಿಕೆಗೆ ಅನುಗುಣವಾಗಿ ಕೃಷಿ ಇಲಾಖೆ 164 ಕೃಷಿ ಸಂಜೀವಿನಿ ವಾಹನಗಳನ್ನು ನಿಂಯೋಜಿಸಿದೆ. ಮೈಸೂರು ಜಿಲ್ಲೆಯಲ್ಲಿ ಜಿಲ್ಲಾ ಹಂತದಲ್ಲಿ ಒಂದು ಹಾಗೂ ತಾಲೂಕಿಗೆ ಒಂದರಂತೆ 7 ವಾಹನ ಸೇರಿ ಒಟ್ಟು 8 ಕೃಷಿ ಸಂಜೀವಿನಿ ವಾಹನಗಳನ್ನು ನೀಡಲಾಗಿದೆ. ರೈತರ ಹೊಲಕ್ಕೆ ತೆರಳಿ ಸ್ಥಳದಲ್ಲಿಯೇ ಅವರ ಸಮಸ್ಯೆಗಳಿಗೆ ಸ್ಪಂದಿಸುವುದಲ್ಲದೆ ಸಲಹೆ–ಸೂಚನೆಗಳನ್ನು ನೀಡಲಾಗುವುದು ಎಂದು ಕೃಷಿ ಇಲಾಖೆ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

> ಜಿಲ್ಲೆಗೆ ಹೊಸದಾಗಿ 7 ಕೃಷಿ ಸಂಜೀವಿನಿ ವಾಹನಗಳು ನೀಡಲಾಗಿದ್ದು, ಎಲ್ಲಾ ವಾಹನಗಳಿಗೂ ಲ್ಯಾಬ್ ಅಳವಡಿಸಲಾಗುತ್ತಿದೆ. ಇದುವರೆಗೆ ಈ ವಾಹನಗಳನ್ನು ಬೆಳೆ ಹಾನಿ ಪ್ರದೇಶಗಳ ವೀಕ್ಷಣೆಗೆ ಬಳಸಿಕೊಳ್ಳಲಾಗಿತ್ತು. ಲ್ಯಾಬ್ ಅಳವಡಿಸಿದ ಬಳಿಕ ರೈತರ ಜಮೀನಿಗೆ ತೆರಳಿ ಮಣ್ಣು, ಬೆಳೆ ಪರೀಕ್ಷೆ ಮಾಡುವುದರ ಜೊತೆಗೆ ಅಗತ್ಯ ಸಲಹೆ ನೀಡಲಾಗುವುದು.
> **-ಡಾ.ಜಿ.ಎಸ್.ಚಂದ್ರಶೇಖರ್,** ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಕೃಷಿ ಜೊತೆಗೆ ತೋಟಗಾರಿಕೆ ಬೆಳೆಗಳ ಹಾನಿ ಪ್ರದೇಶಕ್ಕೂ ಭೇಟಿ ನೀಡುವುದರಿಂದ 'ಮೊಬೈಲ್ ಅಗ್ರಿ ಆರ್ಟಿ ಕ್ಲಿನಿಕ್' ಎಂಬ ಹೆಸರಿನಲ್ಲಿ ಕಾರ್ಯಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಶ್ರೀ ನೃತ್ಯ ನಿಕೇತನ ವಿದ್ಯಾರ್ಥಿಗಳಿಂದ

ಗುರು ಪೂರ್ಣಿಮೆಯಲ್ಲಿ ದಾಸರು, ಆಚಾರ್ಯರ ದರ್ಶನ

ಮೈಸೂರು, ಜು.19(ಜಿಎ)– ಗುರು ಪೂರ್ಣಿಮೆ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶ್ರೀ ನೃತ್ಯ ನಿಕೇತನ ವತಿಯಿಂದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಲಾಗಿದ್ದ ಭರತ ನಾಟ್ಯ ನೃತ್ಯ ಮತ್ತು ಗುರು ನಮನ ಕಾರ್ಯಕ್ರಮವನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಶ್ರೀ ನೃತ್ಯ ನಿಕೇತನ ಶಾಲೆಯ ಕಿರಿಯ ಮತ್ತು ಹಿರಿಯ ವಿದ್ಯಾರ್ಥಿಗಳು ಕನಕ ದಾಸ, ಪುರಂದರ ದಾಸ, ಮಧ್ವಾಚಾರ್ಯರು, ಸಂತ ಶಿಶುನಾಳ ಶರೀಫರು ಮತ್ತು ಶಂಕರಾಚಾರ್ಯರ ಕೀರ್ತನೆಗಳಿಗೆ ವಿಶೇಷ ನೃತ್ಯ ಮಾಡಿದರು.

ಈ ವೇಳೆ ಶಾಸಕ ಎಲ್. ನಾಗೇಂದ್ರ ಮಾತನಾಡಿ, ಗುರು ಪೂರ್ಣಿಮೆಗೆ ಉತ್ತಮ ನೃತ್ಯ ಕಾರ್ಯಕ್ರಮವನ್ನು ಆಯೋಜಿಸಿದ್ದು, ಒಂದೇ ವೇದಿಕೆಯಲ್ಲಿ ಎಲ್ಲಾ ದಾಸರು ಮತ್ತು ಆಚಾರ್ಯರನ್ನು ನೋಡಿ ಸಂತೋಷವಾಯಿತು. ಈ ರೀತಿ ಕಾರ್ಯಕ್ರಮಗಳ ಮೂಲಕ ನಮ್ಮ ದೇಶದ ಸಂಸ್ಕೃತಿ, ನಾಡಿನ ಪರಂಪರೆಯೂ ಪ್ರತಿಬಿಂಬಿಸುತ್ತಿದೆ. ಮಕ್ಕಳಿನಲ್ಲಿರುವ ಕಲೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯನ್ನು ಸೃಷ್ಟಿಸಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಚಾಮ ರಾಜನಗರದ ಶ್ರೀ ಶಾರದ ನೃತ್ಯ ಕಲಾ ಶಾಲೆಯ ಸಂಸ್ಥಾಪಕ ವಿದ್ವಾನ್ ಮಹೇಶ್ ಅವರನ್ನೂ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಚಿತ್ರ ನಟಿ ಅಮೃತಾ ಅಯ್ಯಂಗಾರ್, ಶ್ರೀ ನೃತ್ಯ ನಿಕೇತನ ನಿರ್ದೇಶಕಿ ಪ್ರಸನ್ನ ಲಕ್ಷ್ಮೀ ಕಳಾಧರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಗನ್‌ಹೌಸ್ ಸರ್ಕಲ್‌ನಲ್ಲಿ ರಾಜೇಂದ್ರ ಶ್ರೀಗಳ ಪ್ರತಿಮೆ ಸ್ಥಾಪಿಸುವ ಸ್ಥಳ ಮರುಪರಿಶೀಲಿಸಿ

ಸುತ್ತೂರು ಶ್ರೀಗಳಿಗೆ ಪ್ರಮೋದಾದೇವಿ ಒಡೆಯರ್ ಪತ್ರ

ಮೈಸೂರು, ಜು.19(ಆರ್‌ಕೆ)–ಶ್ರೀ ರಾಜೇಂದ್ರಸ್ವಾಮಿಗಳ ಪ್ರತಿಮೆ ಸ್ಥಾಪಿಸಲುದ್ದೇಶಿಸಿರುವ ಸ್ಥಳ ಮರು ಪರಿಶೀಲಿಸುವಂತೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳಿಗೆ ಮನವಿ ಮಾಡಿದ್ದಾರೆ.



ಈ ಕುರಿತು ಜುಲೈ 15ರಂದು ಪತ್ರ ಬರೆದಿರುವ ಅವರು, ಸುತ್ತೂರು ಮಠದಿಂದ ಪೂಜ್ಯ ರಾಜೇಂದ್ರ ಸ್ವಾಮಿಗಳ ಪ್ರತಿಮೆ ಸ್ಥಾಪಿಸಲುದ್ದೇಶಿಸಿರುವುದು ಸಂತೋಷ ತಂದಿದೆ. ಅರಮನೆ ವರಾಹ ದ್ವಾರದೆದುರು ಗನ್‌ಹೌಸ್ ಸರ್ಕಲ್‌ನಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಮೆ ಸ್ಥಾಪಿಸಬೇಕೆಂದು ಸಾರ್ವಜನಿಕರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಂಕಲ್ಪವಾಗಿದ್ದು, ಕೆ.ಆರ್.ಸರ್ಕಲ್‌ನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಅರಮನೆ ಬಲರಾಮ ದ್ವಾರದ ಎದುರು ಚಾಮರಾಜ ಒಡೆಯರ್ ಹಾಗೂ ಹಾರ್ಡಿಂಜ್ ಸರ್ಕಲ್‌ನಲ್ಲಿ ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆಗಳನ್ನು ಸ್ಥಾಪಿಸಿರುವುದರಿಂದ ಅರಮನೆ ಸುತ್ತಲೂ ಮಹಾರಾಜರ ಪ್ರತಿಮೆ ಸ್ಥಾಪಿಸುವುದು ಸೂಕ್ತ ಎಂಬುದು ಬಹುತೇಕರ ಒತ್ತಾಸೆಯಾಗಿದೆ. ಆ ಬಗ್ಗೆ ತಮಗೆ ಬಹಳಷ್ಟು ವಿನಂತಿ ಪತ್ರಗಳು ಬಂದಿವೆ ಎಂದು ತಿಳಿಸಿದ್ದಾರೆ. ಸಂದರ್ಭದ ಸೂಕ್ಷ್ಮತೆ ಹಾಗೂ ಸಾರ್ವಜನಿಕರ ಒತ್ತಾಸೆಗೆ ತಾವು ಸ್ಪಂದಿಸಿ ಪೂಜ್ಯ ಶ್ರೀ ಸ್ವಾಮೀಜಿ ಅವರ ಪ್ರತಿಮೆಯನ್ನು ಸ್ಥಾಪಿಸುವ ಸ್ಥಳವನ್ನು ಮರುಪರಿಶೀಲಿಸುವ ಔದಾರ್ಯವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ ಎಂದು ಪ್ರಮೋದಾದೇವಿ ಒಡೆಯರ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಅದ್ಧೂರಿ ದಸರಾ ಆಚರಣೆ

ಮೂರನೇ ಪುಟದಿಂದ

ತಿಳಿಸಲಾಗಿದೆ ಎಂದರು.

ಪಾರಂಪರಿಕ ಪದ್ಧತಿ ಪುನರಾರಂಭ: ಸಾಂಪ್ರದಾಯಿಕ ಗಜಪಯಣ ಸೇರಿದಂತೆ ಪಾರಂಪರಿಕ ಪದ್ಧತಿಗಳನ್ನು ಪುನ: ಪ್ರಾರಂಭಿಸಲಾಗುವುದು. ಇದರಿಂದ ಸ್ಥಳೀಯ ಹಾಗೂ ಗ್ರಾಮೀಣ ಭಾಗದಲ್ಲಿ ಮುಂಚಿತವಾಗಿಯೇ ದಸರಾ ಸಂಭ್ರಮ ಕಳೆಗಟ್ಟುತ್ತದೆ. ಹಾಗೆಯೇ ಕೊರೊನಾ ಪೂರ್ವದಲ್ಲಿದ್ದಂತೆ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡೆ ಆಯೋಜಿಸಲಾಗುತ್ತದೆ. ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡುವುದರ ಜೊತೆಗೆ ಜನಾಕರ್ಷಣೆ ನಿಟ್ಟಿನಲ್ಲಿ ನಿತ್ಯ ಒಬ್ಬರು ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಕಲಾವಿದರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಸಿಎಸ್‌ಆರ್ ಬಳಕೆಗೆ ಸೂಚನೆ: ಅರಮನೆ ಆವರಣದಲ್ಲಿ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನಿತರ ವೆಚ್ಚವನ್ನು ಅರಮನೆ ಮಂಡಳಿ ಭರಿಸಲಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 10 ಕೋಟಿ ರೂ. ಒದಗಿಸಲಾಗುತ್ತದೆ. ಸ್ಥಳೀಯ ಅಭಿವೃದ್ಧಿ ಮತ್ತು ಮೂಲಸೌಕರ್ಯ ಕಲ್ಪಿಸಲು ಈ ಬಾರಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ(ಸಿಎಸ್‌ಆರ್) ನಿಧಿಯನ್ನು ಬಳಕೆ ಮಾಡಿಕೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ. ಇನ್ನೂ ಅನುದಾನದ ಅಗತ್ಯವಿದ್ದರೆ ಅಂದಾಜು ಪಟ್ಟಿ ಸಲ್ಲಿಸಿದರೆ ಸರ್ಕಾರ ಅಗತ್ಯ ನೆರವು ನೀಡಲಿದೆ. ಈ ಬಾರಿ ಶ್ರೀರಂಗಪಟ್ಟಣ ಹಾಗೂ ಚಾಮರಾಜನಗರ ದಸರಾ ಉತ್ಸವಕ್ಕೂ ತಲಾ 1 ಕೋಟಿ ರೂ. ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ ಎಂದು ವಿವರಿಸಿದರು.

ಸಂಪ್ರದಾಯ ಅನುಸರಣೆ: ನವರಾತ್ರಿ ಉತ್ಸವ ಸೆಪ್ಟೆಂಬರ್ 26ರಿಂದ ಆರಂಭವಾಗಲಿದ್ದು, ಅಕ್ಟೋಬರ್ 5ರಂದು ವಿಜಯದಶಮಿ ನೆರವೇರಲಿದೆ. ಮುಂಚಿತವಾಗಿ ಆಗಸ್ಟ್ 7ರಂದು ವೀರನಹೊಸಹಳ್ಳಿಯಿಂದ ಗಜಪಯಣಕ್ಕೆ ಚಾಲನೆ ಸಿಗಲಿದೆ. ಗಜಪಯಣ ಆದಿಯಾಗಿ ಎಲ್ಲಾ ಸಾಂಪ್ರದಾಯಿಕ ಕೈಂಕರ್ಯಗಳೂ ಜರುಗಲಿವೆ ಎಂದು ತಿಳಿಸಿದರು. ದಸರಾ ಸಂದರ್ಭದಲ್ಲೇ ಮೈಸೂರು– ಬೆಂಗಳೂರು ದಶಪಥ ರಸ್ತೆ ಉದ್ಘಾಟನೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬೊಮ್ಮಾಯಿ, ಮಳೆಗಾಲವಾದ್ದರಿಂದ ರಸ್ತೆ ಕಾಮಗಾರಿ ಪೂರ್ಣವಾಗುವುದು ತಡವಾಗಬಹುದು. ಹೀಗಾಗಿ ದಸರಾ ನಂತರದ ಒಂದು ತಿಂಗಳ ಬಳಿಕ ದಶಪಥ ರಸ್ತೆ ಉದ್ಘಾಟನೆ ಆಗಬಹುದು ಎಂದರು. ಕೆಆರ್‌ಎಸ್‌ಗೆ ಬಾಗಿನ ಸಮರ್ಪಿಸುವ ಕೈಂಕರ್ಯಕ್ಕೆ ರಾಜಮನೆತನದವರನ್ನು ಆಹ್ವಾನಿಸಬೇಕೆಂಬ ಆಗ್ರಹಕ್ಕೆ ಪ್ರತಿಕ್ರಿಯಿಸಿ, ಇದುವರೆಗೆ ಅವರನ್ನು ಆಹ್ವಾನಿಸಿರಲಿಲ್ಲ, ಆದರೆ ಈಗ ಆಹ್ವಾನಿಸಿದರೆ ತಪ್ಪೇನಿಲ್ಲವಲ್ಲಾ? ಈ ಬಗ್ಗೆ ನಾನು ಮಾತನಾಡುತ್ತೇನೆ ಎಂದರು.

ಸಭೆಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಸುನಂದಾ ಪಾಲನೇತ್ರ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ತನ್ವೀರ್ ಸೇಠ್, ಎಲ್.ನಾಗೇಂದ್ರ, ಸಾ.ರಾ.ಮಹೇಶ್, ಹರ್ಷ ವರ್ಧನ್, ಕೆ.ಮಹದೇವ್, ಹೆಚ್.ಪಿ. ಮಂಜುನಾಥ್, ರವೀಂದ್ರ ಶ್ರೀಕಂಠಯ್ಯ, ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್, ಸಿ.ಎನ್.ಮಂಜೇಗೌಡ, ಡಾ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಅನೇಕ ಜನಪ್ರತಿನಿಧಿಗಳು, ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಅರಮನೆ ಮಂಡಳಿ ಉಪನಿರ್ದೇಶಕ ಟಿಎಸ್.ಸುಬ್ರಮಣ್ಯ ಮತ್ತಿತರರು ಭಾಗವಹಿಸಿದ್ದರು. ಮಂಡ್ಯ ಸಂಸದೆ ಸುಮಲತಾ ಅಂಬರೀಶ್, ಸೇರಿದಂತೆ ಕೆಲ ಜನಪ್ರತಿನಿಧಿಗಳು ಗೈರಾಗಿದ್ದರು.

ಆಗಸ್ಟ್ 7ಕ್ಕೆ ಗಜ ಪಯಣ

ನಂತರದಲ್ಲಿ ಆನೆಗಳಿಗೆ ಪೌಷ್ಠಿಕ ಆಹಾರ ನೀಡಿ ತಯಾರಿ ಮಾಡುವುದರ ಜೊತೆಗೆ ಹಂತ ಹಂತವಾಗಿ ತಾಲೀಮು ನಡೆಸಿ ಜಂಬೂ ಸವಾರಿಗೆ ಸಜ್ಜುಗೊಳಿಸಲಾಗುತ್ತದೆ. ಇದರ ನಡುವೆಯೇ ಮಾವುತರು ಹಾಗೂ ಕಾವಾಡಿಗಳು ಹಾಗೂ ಅವರ ಕುಟುಂಬದವರಿಗೆ ತಾತ್ಕಾಲಿಕ ನೆಲೆ, ಅವರ ಮಕ್ಕಳಿಗೆ ಟೆಂಟ್ ಶಾಲೆ ಇನ್ನಿತರ ವ್ಯವಸ್ಥೆಯೂ ಆಗಲಿದೆ. ದಸರಾ ಮಹೋತ್ಸವ ಸಂಪನ್ನಗೊಂಡ ನಂತರ ಅಕ್ಟೋಬರ್ 7ರಂದು ಬೆ.6.30ರಿಂದ 6.45 ಕನ್ಯಾಲಗ್ನದಲ್ಲಿ ಮೈಸೂರು ಅರಮನೆಯಿಂದ ವೀರನಹೊಸಹಳ್ಳಿಗೆ ಗಜಪಡೆ ಪ್ರಯಾಣ ಬೆಳೆಸಲಿದೆ.


ದಸರಾ ಉತ್ಸವಕ್ಕೆ ಚಾಲನೆ

ಕಾಳರಾತ್ರಿ, ಎಂಟನೇ ದಿನ(ಅ.3) ದುರ್ಗಾಷ್ಟಮಿ ಸಿದ್ಧಿಧಾತ್ರಿ, 9ನೇ ದಿನ(ಅ.4)ಕ್ಕೆ ಮಹಾಗೌರಿ ರೂಪದಲ್ಲಿ ಪೂಜಿಸಲಾಗುತ್ತದೆ. ಅಂದು ಮಹಾನವಮಿ ಆಯುಧಪೂಜೆ, ಗಜಾಶ್ವಾದಿ ಪೂಜೆ, ಹಯಗ್ರೀವ ಪೂಜೆ ನೆರವೇರಲಿದೆ. ಏಳನೇ ದಿನ ಮೂಲ ನಕ್ಷತ್ರದಲ್ಲಿ ಪ್ರಾರಂಭಿಸುವ ಸರಸ್ವತಿ ಪೂಜೆ ಶ್ರವಣ ನಕ್ಷತ್ರದ ದಿನ ಅಂದರೆ ಅ.5ರಂದು ವಿಸರ್ಜನೆಯಾಗಲಿದೆ.

ಅ.5ಕ್ಕೆ ವಿಜಯ ದಶಮಿ: ಅ.5ರಂದು ಮಧ್ಯಾಹ್ನ 2.36 ರಿಂದ 2.50 ಮಕರ ಲಗ್ನದಲ್ಲಿ ಮುಖ್ಯಮಂತ್ರಿಯವರು ನಂದೀ ಧ್ವಜ ಪೂಜೆ ನೆರವೇರಿಸಲಿದ್ದಾರೆ. ಸಂಜೆ 5.07ರಿಂದ 5.18ಕ್ಕೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಮುಖ್ಯಮಂತ್ರಿಗಳು ಹಾಗೂ ಗಣ್ಯಾತಿಗಣ್ಯರಿಂದ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿತ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ನೆರವೇರಿದ ನಂತರ ವೈಭವದ ಜಂಬೂ ಸವಾರಿ ಆರಂಭಗೊಳ್ಳಲಿದೆ. ಜಂಬೂ ಸವಾರಿ ಬನ್ನಿಮಂಟಪ ತಲುಪಿದ ನಂತರ ಅಲ್ಲಿನ ಮೈದಾನದಲ್ಲಿ ಅತ್ಯಾಕರ್ಷಕ ಪಂಜಿನ ಕವಾಯತು ನಡೆಯಲಿದ್ದು, ಅದರೊಂದಿಗೆ ಈ ಬಾರಿಯ ದಸರೆಗೆ ತೆರೆ ಬೀಳಲಿದೆ. ಚಾಮುಂಡಿ ಬೆಟ್ಟದಲ್ಲಿ ಅ.9ರಂದು ಶ್ರೀ ಚಾಮುಂಡೇಶ್ವರಿ ರಥೋತ್ಸವ ನೆರವೇರಲಿದೆ. ಎಂದಿನಂತೆ ಮೈಸೂರು ಅರಮನೆ ಪಂಚಾಂಗ, ಒಂಟಿಕೊಪ್ಪಲು ಪಂಚಾಂಗ ಹಾಗೂ ಮೇಲುಕೋಟೆ ಪಂಚಾಂಗವನ್ನು ಆಧರಿಸಿ ದಸರಾ ಮಹೋತ್ಸವದ ಸಾಂಪ್ರದಾಯಿಕ ಕಾರ್ಯಕ್ರಮಗಳಿಗೆ ಮುಹೂರ್ತ ನಿಗದಿಪಡಿಸಲಾಗಿದೆ.

ಟೂರಿಸಂ ಸರ್ಕಿಟ್ ರಚನೆ ಆದೇಶ

ಘೋಷಿಸಲಾಗಿದೆ. ಈ ಬಗ್ಗೆ ಇನ್ನೊಂದು ವಾರದಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗುವುದು. ಪ್ರವಾಸೋದ್ಯಮ ಇಲಾಖೆ ಹಾಗೂ ಖಾಸಗಿ ವಲಯದ ಸಹಯೋಗದೊಂದಿಗೆ ಜನಾಕರ್ಷಿಸುವ ರೀತಿಯಲ್ಲಿ ಪ್ರವಾಸ ನಿಗದಿಪಡಿಸಲಾಗುವುದು. ಮೈಸೂರು, ಬೇಲೂರು, ಹಳೇಬೀಡು ಸೇರಿದಂತೆ ಸುತ್ತಮುತ್ತಲಿನ ಪ್ರವಾಸಿ ಕೇಂದ್ರಗಳನ್ನೊಳಗೊಂಡ ಸರ್ಕಿಟ್ ರೂಪಿಸಿ, ಒಂದೇ ಟಿಕೆಟ್‌ನಲ್ಲಿ ಪ್ರವಾಸ, ವಸತಿ ಇನ್ನಿತರ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಈ ಸಂಬಂಧ ವೆಬ್‌ಸೈಟ್ ಕೂಡ ಅಭಿವೃದ್ಧಿಪಡಿಸಲಾಗುತ್ತಿದ್ದು, ಈ ಟೂರಿಸಂ ಸರ್ಕಿಟ್ ಮೈಸೂರು ದಸರಾಗೆ ಇದು ಪೂರಕವಾಗಲಿದೆ ಎಂದು ಸ್ಪಷ್ಟಪಡಿಸಿದರು.



ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳಸೋಗೆಯಿಂದ (ಕಾವೇರಿ ನದಿ) ಕುಡಿಯುವ ನೀರು ಪೂರೈಕೆಗೆ ಅಮೃತ್ 2.0 ಯೋಜನೆಯಡಿ 151 ಕೋಟಿ ರೂ. ವೆಚ್ಚದ ಯೋಜನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ಬೆಂಗಳೂರಿನಲ್ಲಿ ವಿಧಾನ ಸೌಧದಲ್ಲಿ ಅನುಮೋದನೆ ನೀಡಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಪಿರಿಯಾಪಟ್ಟಣ ಶಾಸಕ ಕೆ.ಮಹದೇವ್ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟ, ದಸರಾ ಪ್ರಾಧಿಕಾರ ರಚನೆಗೆ ಜಿಟಿಡಿ ಒತ್ತಾಯ

ಬೆಂಗಳೂರು, ಜು.19– ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಮತ್ತು ದಸರಾ ಪ್ರಾಧಿಕಾರ ರಚಿಸುವಂತೆ ಶಾಸಕ ಜಿ.ಟಿ.ದೇವೇಗೌಡರು ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದರು.



ನಾಡ ಅಧಿದೇವತೆ ಶ್ರೀ ಚಾಮುಂಡೇಶ್ವರಿ ನೆಲೆಸಿರುವ ಶ್ರೀ ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಭಕ್ತರು ಮತ್ತು ಯಾತ್ರಾರ್ಥಿಗಳಿಗೆ ಅಗತ್ಯ ಅನುಕೂಲಗಳನ್ನು ಕಲ್ಪಿಸುವುದರ ಜೊತೆಗೆ ಬೆಟ್ಟದ ಪರಿಸರವನ್ನು ಸಂರಕ್ಷಿಸುವ ದೃಷ್ಟಿಯಿಂದ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಅತ್ಯವಶ್ಯಕವಾಗಿದೆ. ಇದು ಮೈಸೂರು ನಿವಾಸಿಗಳ ಒತ್ತಾಸೆಯಾಗಿದ್ದು, ಪ್ರಾಧಿಕಾರ ರಚನೆ ಸಂಬಂಧ ಶೀಘ್ರ ಕ್ರಮ ವಹಿಸಬೇಕೆಂದು ಮನವಿ ಮಾಡಿದರು. ಒಂಭತ್ತು ದಿನಗಳ ವ್ರತಾಚರಣೆ ನಂತರ ಹತ್ತನೆ ದಿನ(ವಿಜಯದಶಮಿ) ಜಂಬೂ ಸವಾರಿಯನ್ನು 1610ರಲ್ಲಿ ಮೈಸೂರಿನ ಯದುವಂಶದ 9ನೇ ಒಡೆಯರಾದ ರಾಜಾ ಒಡೆಯರ್ ಮೊದಲ ಬಾರಿಗೆ ಆರಂಭಿಸಿದರು. ಅಂದಿನಿಂದ ಈವರೆಗೂ ಪ್ರತಿವರ್ಷ ವೈಭವೋಪೇತವಾಗಿ ದಸರಾ ಉತ್ಸವ ಮುಂದುವರೆಸಲಾಗಿದೆ. ದಸರಾ ವೇಳೆ ಸ್ವಚ್ಛ ಮೈಸೂರು ನಗರ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡು ಕಂಗೊಳಿಸುತ್ತದೆ. ಯುವ ದಸರಾ, ಯುವ ಸಂಭ್ರಮ, ರೈತ ದಸರಾ, ಕ್ರೀಡಾ ದಸರಾ,, ಕುಸ್ತಿ ಪಂದ್ಯಾವಳಿ, ಯೋಗ ಕಾರ್ಯಕ್ರಮ, ಲಲಿತಕಲೆ, ಕರಕುಶಲ ಕಲಾಪ್ರದರ್ಶನ, ಪುಸ್ತಕ ಮೇಳ, ಕವಿಗೋಷ್ಠಿಯಂತಹ ಹತ್ತು ಹಲವು ಕಾರ್ಯಕ್ರಮಗಳು ನಡೆಯುತ್ತವೆ. ಆದರೆ ದಸರಾ ಸಂದರ್ಭದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಬಳಸಿಕೊಂಡು, ಆತುರಾತುರವಾಗಿ ಕಾರ್ಯಕ್ರಮಗಳನ್ನು ಆಯೋಜಿಸಲಾ ಗುತ್ತದೆ. ಇದರಿಂದ ಪ್ರವಾಸಿಗರಿಗೆ ಅಗತ್ಯ ವಾದ ಮೂಲ ಸೌಕರ್ಯ ಕಲ್ಪಿಸುವುದು ಕಷ್ಟಸಾಧ್ಯ. ಅಲ್ಲದೆ ಇಲಾಖೆಗಳಲ್ಲಿ ಸಾರ್ವ ಜನಿಕರ ಕೆಲಸ ಕಾರ್ಯಗಳಿಗೂ ತೊಂದರೆ ಯಾಗುತ್ತದೆ. ಆದ್ದರಿಂದ ದಸರಾ ಪ್ರಾಧಿಕಾರ ರಚಿಸಿದರೆ ವ್ಯವಸ್ಥಿತ ಹಾಗೂ ಅದ್ಧೂರಿ ದಸರಾ ಆಚರಣೆಗೆ ನೆರವಾಗು ತ್ತದೆ ಎಂದು ಮನವರಿಕೆ ಮಾಡಿದರು.

ವ್ಯವಸ್ಥಿತ, ಅದ್ಧೂರಿ ದಸರಾ ಆಚರಣೆಗೆ ಪ್ರಾಧಿಕಾರ ಅನಿವಾರ್ಯ



ನವರಾತ್ರಿಯಲ್ಲಿ ನಗರದ ಪ್ರಮುಖ ಉದ್ಯಾನಗಳಲ್ಲಿ ಸಂಗೀತ ಕಾರ್ಯಕ್ರಮ ನಡೆಸಬೇಕು. ನಗರದ ಎಲ್ಲಾ ಬಡಾವಣೆಗಳ ಪ್ರಮುಖ ರಸ್ತೆಗಳಲ್ಲೂ ವಿದ್ಯುತ್ ದೀಪಾಲಂಕಾರ ಮಾಡಿ, ಹಬ್ಬದ ವಾತಾವರಣ ಸೃಷ್ಟಿಸಬೇಕು. ಮೆರವಣಿಗೆಯಲ್ಲಿ ಸಾಗುವ ಸ್ತಬ್ಧಚಿತ್ರಗಳನ್ನು ಆಯಾ ಜಿಲ್ಲೆಗಳಲ್ಲಿ ಸಿದ್ಧಪಡಿಸಿ ನೇರವಾಗಿ ದಸರಾಗೆ ಆಗಮಿಸುವಂತೆ ನಿರ್ದೇಶನ ನೀಡಬೇಕು. ತಿಂಗಳ ಮುಂಚೆಯೇ ದಸರಾ ವಸ್ತು ಪ್ರದರ್ಶನ ಆರಂಭಿಸಬೇಕು. ಶೀಘ್ರ ಮೈಸೂರು ಟೂರಿಸಂ ಸರ್ಕಿಟ್ ಪ್ರಾರಂಭಿಸಬೇಕು. ಫಲಪುಷ್ಪ ಪ್ರದರ್ಶನವನ್ನು ಮತ್ತಷ್ಟು ಆಕರ್ಷಣೀಯವಾಗಿಸಬೇಕು. ಗ್ರಾಮಾಂತರ ಪ್ರದೇಶದ ಜನ ದಸರಾ ಮಹೋತ್ಸವದಲ್ಲಿ ಭಾಗವಹಿಸಲು ಸೂಕ್ತ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕೆಂದು ಇದೇ ವೇಳೆ ಸಲಹೆ ನೀಡಿದರು.

ದಸರಾ ಸಂಬಂಧ ಶಾಸಕ ರಾಮದಾಸ್ ಮಹತ್ವದ ಸಲಹೆ

ಬೆಂಗಳೂರು, ಜು.19– ಮೈಸೂರು ದಸರಾ ಮಹೋತ್ಸವವನ್ನು ಕುರಿತು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಹಲವು ಮಹತ್ವದ ಸಲಹೆ ನೀಡಿದರು. ಪ್ರಧಾನಿ ಮೋದಿ ಅವರ ಭೇಟಿಯಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಮೈಸೂರು ವ್ಯಾಪಕವಾಗಿ ಗುರುತಿಸಿಕೊಂಡಿದೆ. ಹಾಗಾಗಿ ಈ ಬಾರಿಯ ದಸರಾವನ್ನು ನಾವು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಬೇಕಿದ್ದು, ಈ ಹಿನ್ನೆಲೆಯಲ್ಲಿ ವಿದೇಶಗಳಲ್ಲಿರುವ ಭಾರತೀಯ ರಾಯಭಾರಿಗಳಿಗೆ ಪತ್ರ ಬರೆದು, ಅಲ್ಲಿನ ಪ್ರವಾಸಿಗರಿಗೆ ದಸರಾ ಬಗ್ಗೆ ಪ್ರಚಾರ ಮಾಡಬೇಕಿದೆ. ದೇಶದ ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ದಸರಾ ಬಗ್ಗೆ ರ್‍ಯಾಲಿ ನಡೆಸಿ, ಅಲ್ಲಿಂದ ಬರುವ ಪ್ರವಾಸಿಗರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ದಸರಾ ವೇಳೆ ಯೋಗವನ್ನು ಹೆಚ್ಚಾಗಿ ಪ್ರಚಾರ ಮಾಡಬೇಕು. ಮಿಲಿಟರಿ, ಸೈನ್ಸ್ ಬಗ್ಗೆ 75 ವರ್ಷದಲ್ಲಾದ ಅಭಿವೃದ್ಧಿ ಬಗ್ಗೆ ದಸರಾ ಮೆರವಣಿಗೆಯಲ್ಲಿ ಭಿತ್ತರಿಸಬೇಕು. ಈ ಬಾರಿ ದಸರಾದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಜೋಡಣೆ ಮಾಡಿಕೊಳ್ಳಬೇಕು ಎಂದು ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಪ್ರತಿಪಾದಿಸಿದರು.



ಅಧಿಕಾರಿಗಳ ನಿರ್ಲಕ್ಷ್ಯ; ಸರ್ಕಾರಕ್ಕೆ ಮುಜುಗರ

ಬೆಂಗಳೂರು, ಜು.19– ದಸರಾ ಉನ್ನತ ಮಟ್ಟದ ಸಭೆಯ ಕಾರ್ಯಸೂಚಿ ಮುಖಪುಟದಲ್ಲಿ ವರ್ಷವನ್ನು ತಪ್ಪಾಗಿ ನಮೂದಿಸಿದ್ದು ಸರ್ಕಾರವನ್ನು ಮತ್ತೆ ಮುಜುಗರಕ್ಕೀಡು ಮಾಡಿದೆ.

ಸಭೆಯ ಕಾರ್ಯಸೂಚಿ ಮುಖಪುಟದಲ್ಲಿ ಸಭೆ ನಡೆಯುವ ದಿನಾಂಕ, ಸಮಯ, ಸ್ಥಳವನ್ನು ನಮೂದಿಸಲಾಗಿತ್ತು. ಆದರೆ ದಿನಾಂಕವನ್ನು 19–07–2022ರ ಬದಲಾಗಿ 19–07–2021 ಎಂದು ನಮೂದಿಸಲಾಗಿತ್ತು. ಇದನ್ನು ಗಮನಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧಿಕಾರಿಗಳ ವಿರುದ್ಧ ಗರಂ ಆದ ಪ್ರಸಂಗವೂ ನಡೆಯಿತು. ಈ ಅಧ್ವಾನವನ್ನು ಫೋಟೋ ಸಹಿತ ಟ್ವೀಟ್ ಮಾಡಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ, 'ಕರ್ನಾಟಕ ಬಿಜೆಪಿ ಸರ್ಕಾರ 2021ರಲ್ಲಿಯೇ ಉಳಿದು ಬಿಟ್ಟಿದೆ. 'ಟೇಕ್ ಆಫ್' ಆಗಿಯೇ ಇಲ್ಲ ಎನ್ನುವುದಕ್ಕೆ ಬೇರೆ ಸಾಕ್ಷಿ ಬೇಕೇ?' ಎಂದು ವ್ಯಂಗ್ಯವಾಡಿದ್ದಾರೆ.

ಇದಲ್ಲದೆ ದಸರಾ ಸಾಂಪ್ರದಾಯಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಯ, ಗಜಪಯಣ ಸಂಬಂಧಿತ ಮಾಹಿತಿಯಲ್ಲೂ ಸಾಕಷ್ಟು ಅಕ್ಷರ ದೋಷಗಳಿವೆ. 'ಮುಹೂರ್ತ'ದ ಬದಲಾಗಿ 'ಮಹೂರ್ತ' ಎಂದು ಮುದ್ರಿಸಲಾಗಿದೆ. ಸಾಕಷ್ಟು ಕಡೆ ಅನಗತ್ಯವಾಗಿ ದೀರ್ಘ ಸ್ವರಗಳನ್ನು ಬಳಸಲಾಗಿದೆ. ಮಹತ್ವದ ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲೂ ಇಷ್ಟೊಂದು ಅಧ್ವಾನವಾಗಿರುವುದು ಸರ್ಕಾರಕ್ಕೆ ಮುಜುಗರ ತಂದಿದೆ.

ಕೆಲ ದಿನಗಳ ಹಿಂದೆಯಷ್ಟೇ 'ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರು ಫೋಟೋ ಹಾಗೂ ವಿಡಿಯೋ ಮಾಡುವಂತಿಲ್ಲ ಎಂಬ ಆದೇಶವನ್ನು ಹಿಂಪಡೆದು ಮರು ಆದೇಶ ಹೊರಡಿಸಲಾಗಿತ್ತು. ಅದರಲ್ಲಂತೂ ತಪ್ಪುಗಳೇ ಮೇಳೈಸಿದ್ದವು. ಆ ಪ್ರತಿಯನ್ನು ಸಾರ್ವಜನಿಕರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು ಸರ್ಕಾರವನ್ನು ಹಲವು ರೀತಿಯಲ್ಲಿ ಜಾಡಿಸಿದ್ದರು.

ಕೆಂಪೇಗೌಡರು ಕಟ್ಟಿದ ಬೆಂಗಳೂರು ಜನರ ಆಶಾಕಿರಣ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಭಿಮತ



ಹೆಚ್.ಡಿ.ಕೋಟೆ, ಜು.19– ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯಿಂದ ನಿರ್ಮಿಸಿದ ಬೆಂಗಳೂರು ಅಲ್ಲಿನ ಜನರ ಬದುಕಿಗೆ ಆಶಾಕಿರಣವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಪಟ್ಟಣದ ಪದವಿಪೂರ್ವ ಕಾಲೇಜು ಆವರಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆಂಪೇಗೌಡರು ಬೆಂಗಳೂರಿನ 4 ದಿಕ್ಕಿನಲ್ಲಿ ಕಟ್ಟಿದ ಗೋಪುರವನ್ನು ದಾಟಿ ಈಗ ಬೆಂಗಳೂರು ನಗರ ಬೆಳೆದಿದೆ. ಕೆರೆ–ಕಟ್ಟೆಗಳನ್ನು ನಿರ್ಮಿಸಿ ಬೆಂಗಳೂರನ್ನು ಸಮೃದ್ಧಿಯ ನಗರವನ್ನಾಗಿ ಮಾಡಿದ್ದರು. ಈಗ ಭೂದಾಹಿಗಳ ದುರಾಸೆಯಿಂದ ಕೆರೆಗಳು ನಾಶವಾಗಿವೆ. ಬೆಂಗಳೂರು ನಗರವೊಂದರಿಂದಲೇ ರಾಜ್ಯದ ಅರ್ಧದಷ್ಟು ಆದಾಯ ಬಂದರೂ ಸಹ ಅಧಿಕಾರ ನಡೆಸುವವರ ಲಾಲಸೆಯಿಂದ ಮೂಲ ಸೌಲಭ್ಯ ಕಲ್ಪಿಸಲು ಸಾಧ್ಯವಾಗದೆ ಜನರು ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು.

ನಗರ ಸದಾ ಕಾಲ ಸಂಪದ್ಭರಿತವಾಗಿದ್ದು, ಶ್ರೀಮಂತಿಕೆ ಹಾಗೂ ಬಡತನ ಎರಡನ್ನೂ ಕಾಣುತ್ತಿದ್ದೇವೆ. ಆಳುವ ಸರ್ಕಾರಗಳಿಗೆ ಬಡತನ ಹೋಗಲಾಡಿಸುವ ಹೃದಯ ವೈಶಾಲ್ಯತೆ ಬೇಕಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಬಡವರ ಕೋಟ್ಯಾಂತರ ತೆರಿಗೆ ಹಣ ಲೂಟಿ ಹೊಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ತಿಂಗಳಿನಿಂದ ಧಾರಾಕಾರ ಮಳೆಯಾಗಿ ಸಾಕಷ್ಟು ಜನರು ಮನೆ ಕಳೆದುಕೊಂಡಿದ್ದಾರೆ. ಸರ್ಕಾರ 5 ಲಕ್ಷ ರೂ. ಪರಿಹಾರ ಕೊಡುವುದಾಗಿ ಘೋಷಣೆ ಮಾಡಿದೆ. ಯಾರಿಗೂ ಕೊಟ್ಟಿರುವ ಬಗ್ಗೆ ಉದಾಹರಣೆಯನ್ನು ನಾನು ನೋಡಲೇ ಇಲ್ಲ. ವೈದ್ಯರು ವಿಶ್ರಾಂತಿ ಮಾಡಲು ತಿಳಿಸಿದ್ದರೂ ಸಹ ಅವರ ಸಲಹೆ ಧಿಕ್ಕರಿಸಿ, ನಿಮ್ಮ ಮೇಲಿನ ಪ್ರೀತಿಯಿಂದ ನಾನು ಇಲ್ಲಿಗೆ ಬಂದಿದ್ದೇನೆ ಎಂದರಲ್ಲದೆ, ಕೆಂಪೇಗೌಡರ ಭವನ ನಿರ್ಮಾಣಕ್ಕೆ ಈಗಾಗಲೇ ಶಾಸಕರು ಗುರುತಿಸಿರುವ ಸ್ಥಳವನ್ನು ಸಚಿವ ಸಂಪುಟದಲ್ಲಿ ಅನುಮೋದನೆಗೊಳಿಸಿ ಕಳುಹಿಸಿಕೊಡುವ ಭರವಸೆ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಗದ್ದಿಗೆ ವೃತ್ತದಿಂದ ಪದವಿ ಪೂರ್ವ ಕಾಲೇಜು ಆವರಣದವರೆಗೆ ಕೆಂಪೇಗೌಡರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಆದಿಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ, ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ವೆಂಕಟೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ಅಶ್ವಿನ್ ಕುಮಾರ್, ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಸಮಾಜ ಸೇವಕ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯ್ಕ, ಜಯಪ್ರಕಾಶ್ ಚಿಕ್ಕಣ್ಣ, ಕೃಷ್ಣಸ್ವಾಮಿ, ನಲ್ಲೂರು ಶಂಕರೇಗೌಡ, ಪಿ.ರವಿ, ಕೆ.ಈರೇಗೌಡ, ನರಸಿಂಹೇಗೌಡ, ತಮ್ಮಣ್ಣೇಗೌಡ, ಕ್ಯಾತನಹಳ್ಳಿ ನಾಗರಾಜ್, ಏಜಾಜ್ ಪಾಷಾ, ಸತೀಶ್ ಗೌಡ, ಪುಟ್ಟು ಸ್ವಾಮಿ, ಸಣ್ಣಸ್ವಾಮಿ, ಬಿ.ಪಿ.ಭಾಸ್ಕರ್, ಕೃಷ್ಣೇಗೌಡ, ಸುರೇಂದ್ರ ಡಿ.ಗೌಡ, ಚಲುವರಾಜು, ಸಾಗರೆ ಮಹೇಂದ್ರ ಗೋವಿಂದೇಗೌಡ, ಕಲ್ಲು ವಿರೇಗೌಡ, ಕಾಳಪ್ಪ, ಮುರುಳಿ ಕೃಷ್ಣೇಗೌಡ, ಉಮೇಶ್, ರಾಜೇಶ್, ಸಿದ್ದಪ್ಪ, ರಾಜನಾಯಕ ಇನ್ನಿತರರಿದ್ದರು.

ಕೆಂಪೇಗೌಡರ ಭವನಕ್ಕೆ 50 ಲಕ್ಷ ನೆರವು

ರಾಜ್ಯ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಜನಪ್ರತಿನಿಧಿಗಳಾದ ನಾವು ಎಷ್ಟು ಸುಖವಾಗಿದ್ದೇವೆ ಎನ್ನುವುದು ಮುಖ್ಯವಲ್ಲ. ನಿಮ್ಮನ್ನು ಎಷ್ಟು ಸುಖದಿಂದ ಇಡಬೇಕು ಎನ್ನುವುದು ಮುಖ್ಯ. ಜನಪ್ರತಿನಿಧಿಯಾದ ನಮಗೆ ಕಾಳಜಿ ಹಾಗೂ ಜನಸಾಮಾನ್ಯರನ್ನು ಅರ್ಥ ಮಾಡಿಕೊಳ್ಳುವ ಗುಣ ಇರಬೇಕು ಎಂದರಲ್ಲದೆ, ಕೆಂಪೇಗೌಡರ ಭವನಕ್ಕೆ 50 ಲಕ್ಷ ನೆರವು ನೀಡುವ ಭರವಸೆ ನೀಡಿದರು.

ದೇಶದ ಚರಿತ್ರೆ ಅಳಿಸಲು ನಾವು ಎಂದಿಗೂ ಬಿಡುವುದಿಲ್ಲ. ಬಸವಣ್ಣ, ಶಿಶುನಾಳ ಶರೀಫರು, ಕನಕದಾಸರು, ಕುವೆಂಪು, ಕೆಂಪೇಗೌಡರ ಕರ್ನಾಟಕ ನಮಗೆ ಬೇಕಿದೆ. ಕುವೆಂಪು, ಕೆಂಪೇಗೌಡರು, ನಾರಾಯಣಗುರು ಅವರ ಇತಿಹಾಸವನ್ನು ಬದಲಾವಣೆ ಮಾಡಲು ಹೊರಟಿದ್ದಾರೆ ಎಂದು ರಾಜ್ಯ ಬಿಜೆಪಿ ಸರ್ಕಾರದ ಹೆಸರೇಳದೆ ಆಕ್ರೋಶ ವ್ಯಕ್ತಪಡಿಸಿದರು.

ನಂ.ಗೂಡು ಡೈರಿ ಸಿಇಓಗಳಿಗೆ ವಿಶೇಷ ಕಾರ್ಯಾಗಾರ



ನಂಜನಗೂಡು, ಜು.19– ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ನಗರದಲ್ಲಿ ಮಂಗಳವಾರ ಒಂದು ದಿನದ ವಿಶೇಷ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಮೈಮುಲ್ ಮಾಜಿ ಅಧ್ಯಕ್ಷ, ನಿರ್ದೇಶಕ ಕೆ.ಜಿ.ಮಹೇಶ್ ಉದ್ಘಾಟಿಸಿದರು. ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಎನ್.ಸದಾನಂದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ನೀಲಾಂಬಿಕೆ, ವ್ಯವಸ್ಥಾಪಕ ಡಾ.ಸಣ್ಣ ತಮ್ಮೇಗೌಡ, ಉಪ ವ್ಯವಸ್ಥಾಪಕ ಡಾ.ಶಿವಪ್ರಸಾದ್, ಸಹಕಾರ ಅಭಿವೃದ್ಧಿ ಅಧಿಕಾರಿ ಪ್ರಭಾಕರ್, ಯುನಿಯನ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ವಿಶ್ವೇಶ್ವರಯ್ಯ, ವ್ಯವಸ್ಥಾಪಕ ಪಿ.ಎಸ್.ಹರೀಶ್, ಹಾಲು ಒಕ್ಕೂಟದ ಅಧಿಕಾರಿಗಳು ಹಾಜರಿದ್ದರು.

ಡೈರಿ ಅಭಿವೃದ್ಧಿಗೆ ನಿವೃತ್ತ ಸಿಬ್ಬಂದಿ ಸಹಕಾರ ಅಗತ್ಯ

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮನವಿ



ತಿ.ನರಸೀಪುರ, ಜು.19– ನಿವೃತ್ತ ಹಾಲು ಉತ್ಪಾದಕರ ಸಹಕಾರ ಸಂಘದ ಸಿಬ್ಬಂದಿ ಸಂಘ ಮತ್ತಷ್ಟು ಬಲಿಷ್ಠಗೊಳ್ಳಲು ಸಲಹೆ ನೀಡಬೇಕೆಂದು ತಾಪಂ ಮಾಜಿ ಅಧ್ಯಕ್ಷ ಹಾಗೂ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮನವಿ ಮಾಡಿದರು.

ಪಟ್ಟಣದ ಮೈಮುಲ್ ಉಪ ಕಚೇರಿಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸಿಬ್ಬಂದಿ ಹಾಗೂ ನಿಧನರಾದ ನೌಕರರ ಕುಟುಂಬದವರಿಗೆ ಒಕ್ಕೂಟದಿಂದ ನೀಡಲಾಗುವ ಪರಿಹಾರ ಧನದ ಚೆಕ್ ವಿತರಿಸಿ ಮಾತನಾಡಿದರು.

ಸೇವೆಯಿಂದ ನಿವೃತ್ತರಾದ ನೌಕರರಿಗೆ ಮೈಮುಲ್ ರೈತ ಕಲ್ಯಾಣ ಟ್ರಸ್ಟ್‌ನಿಂದ ನಿವೃತ್ತ ಜೀವನ ಉತ್ತಮವಾಗಿರಲಿ ಎಂಬ ಉದ್ದೇಶದೊಂದಿಗೆ ಸಮಾಧಾನಕರ ಪರಿಹಾರ ಧನ ನೀಡಲಾಗುತ್ತಿದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಸಹಕಾರ ಸಂಘದಲ್ಲಿ ಕೆಲವರು 30 ವರ್ಷ ಸೇವೆ ಸಲ್ಲಿಸಿ ಸಂಘ ಉತ್ತಮವಾಗಿ ಬೆಳೆಯಲು ಕಾರಣರಾಗಿದ್ದಾರೆ. ಪ್ರಾಮಾಣಿಕವಾಗಿ ಸಂಘವನ್ನು ಕಟ್ಟಿ ಬೆಳೆಸಿದ ನಿಮ್ಮ ಸೇವೆಗೆ ಒಕ್ಕೂಟವು 1 ಸಾವಿರ ಲೀಟರ್ ಹಾಲು ಉತ್ಪಾದನೆಗೆ 5 ಲಕ್ಷ, 500 ಲೀಟರ್‌ಗೆ 2.5 ಲಕ್ಷ ರೂ. ಪರಿಹಾರ ಧನ ನೀಡುವ ಮೂಲಕ ಒಕ್ಕೂಟ ತಮ್ಮ ಹಿತಕಾಯಲು ಬದ್ಧವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಪ ವ್ಯವಸ್ಥಾಪಕ ಡಾ.ದಿವಾಕರ್, ಕಾರ್ಯದರ್ಶಿಗಳ ಸಂಘದ ಅಧ್ಯಕ್ಷ ಕುಳ್ಳೇಗೌಡ, ವಿಸ್ತರಣಾಧಿಕಾರಿ ಪ್ರಮೋದ್, ದಿವ್ಯಶ್ರೀ, ಕಾರ್ಯದರ್ಶಿ ಅಂದಾನಿಗೌಡ ಮತ್ತಿತರರಿದ್ದರು.

ಇನ್‌ಸ್ಟಾಗ್ರಾಂನಲ್ಲಿ ನಿಂದಿಸಿದ ಗೆಳೆಯನ ಹತ್ಯೆ ಪ್ರಕರಣ

ಹುಣಸೂರು ಪೊಲೀಸರಿಂದ ಮೂವರ ಬಂಧನ



ಹುಣಸೂರು, ಜು.19– ಇನ್‌ಸ್ಟಾಗ್ರಾಂನಲ್ಲಿ ನಿಂದಿಸಿದ ಗೆಳೆಯನಿಗೆ ಚಾಕುವಿನಿಂದ ಇರಿದು ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಹುಣಸೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ನಗರದ ಗೋಕುಲ್ ರಸ್ತೆಯ ಕುಟ್ಟಿ ಜಿಮ್‌ನಲ್ಲಿ ಕಾರ್ಯ ನಿರ್ವಹಿಸುವ ನಿತಿನ್ ಅಲಿಯಾಸ್ ವಠಾರ(23), ಕಲ್ಕುಣಿಕೆ ಹೌಸಿಂಗ್ ಬೋರ್ಡ್ ವಾಸಿ ಮನೋಜ್ ಕುಮಾರ ಅಲಿಯಾಸ್ ವೋಟು(24) ಹಾಗೂ ಪೋತರಾಜ್(25) ಬಂಧಿತ ಆರೋಪಿಗಳು.

ವಿವರ: ಹೊಸದಾಗಿ ಮದುವೆಯಾಗಿದ್ದ ನಿತಿನ್‌ಗೆ ಇನ್‌ಸ್ಟಾಗ್ರಾಂನಲ್ಲಿ ತಾಲೂಕಿನ ಅಂಗಟಹಳ್ಳಿ ಗ್ರಾಮದ ಬೀರೇಶ್ ಕೆಟ್ಟದಾಗಿ ಮೆಸೇಜ್ ಮಾಡಿದ್ದ ಎನ್ನಲಾಗಿದೆ. ಇದರಿಂದ ಆಕ್ರೋಶಗೊಂಡಿದ್ದ ನಿತಿನ್, ಬೀರೇಶ್‌ನನ್ನು ಹತ್ಯೆ ಮಾಡುವ ಸಂಚು ರೂಪಿಸಿ, ಜು.12ರಂದು ಮಧ್ಯಾಹ್ನ ತನ್ನ ಸ್ನೇಹಿತ ಮನೋಜ್ ಕುಮಾರ್‌ನೊಂದಿಗೆ ಇನ್ನೊಬ್ಬ ಸ್ನೇಹಿತ ಪೋತರಾಜ್ ಹೋಂಡಾ ಆಕ್ಟಿವಾ ಸ್ಕೂಟರ್‌ನಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದು, ಅಲ್ಲಿ ನಿಂತಿದ್ದ ಬೀರೇಶ್‌ನನ್ನು ಮಾತನಾಡಿಸುವ ನೆಪದಲ್ಲಿ ಸ್ಕೂಟರ್‌ಗೆ ಹತ್ತಿಸಿಕೊಂಡು ನಗರದ ಎಪಿಎಂಸಿ ಬಳಿಯ ಬೈಪಾಸ್ ರಸ್ತೆಯಲ್ಲಿ ಹೋಗುವಾಗ ತಮ್ಮ ಮಧ್ಯದಲ್ಲಿ ಕುಳಿತಿದ್ದ ಬೀರೇಶ್ ಬೆನ್ನಿಗೆ ನಿತಿನ್ ಚಾಕುವಿನಿಂದ ಇರಿದು, ಅವನನ್ನು ಸ್ಕೂಟರ್‌ನಿಂದ ಕೆಳಗೆ ತಳ್ಳಿ ಆರೋಪಿಗಳು ಪರಾರಿಯಾಗಿದ್ದರು. ತೀವ್ರ ಗಾಯಗೊಂಡಿದ್ದ ಬೀರೇಶ್ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದರು. ಈ ಸಂಬಂಧ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳ ಬಂಧನಕ್ಕೆ ಡಿವೈಎಸ್ಪಿ ರವಿಪ್ರಸಾದ್, ಇನ್ಸ್‌ಪೆಕ್ಟರ್ ಎಲ್.ಶ್ರೀನಿವಾಸ್ ನೇತೃತ್ವದಲ್ಲಿ ಅಪರಾಧ ವಿಭಾಗದ ಸಿಬ್ಬಂದಿಗಳಾದ ಪ್ರಭಾಕರ, ಇರ್ಫಾನ್, ಎಎಸ್‌ಐ ಪುಟ್ಟನಾಯಕ, ರಾಜೇಗೌಡ ಮತ್ತು ಎಸ್‌ಬಿ ಕರ್ತವ್ಯದ ಸಿಬ್ಬಂದಿ ಪ್ರಸಾದ್ ಧರ್ಮಾಪುರ ಅವರುಗಳನ್ನೊಳಗೊಂಡ ವಿಶೇಷ ತಂಡ ರಚಿಸಲಾಗಿತ್ತು. ತನಿಖೆ ಕೈಗೊಂಡ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ತಂಡವನ್ನು ಎಸ್ಪಿ ಆರ್.ಚೇತನ್, ಎಎಸ್ಪಿ ನಂದಿನಿ ಸೇರಿದಂತೆ ಹುಣಸೂರು ಜನತೆ ಅಭಿನಂದಿಸಿದ್ದಾರೆ.



ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಪೋಸ್ಟ್; ದೂರು ದಾಖಲು



ಹುಣಸೂರು, ಜು.19– ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿರುವ ಕಿಡಿಗೇಡಿಯನ್ನು ಬಂಧಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಹುಣಸೂರಿನ ಯುವ ಕಾಂಗ್ರೆಸ್ ಘಟಕವು ನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ಹುಣಸೂರಿನ ಕಲ್ಕುಣಿಕೆ ನಿವಾಸಿ ಗೋವಿಂದ ನಾಯಕ ಎಂಬಾತ ಫೇಸ್‌ಬುಕ್‌ನಲ್ಲಿ ಸಿದ್ದರಾಮಯ್ಯ ಅವರ ಬಗ್ಗೆ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿದ್ದು, ಈತನು ಸಾಮಾಜಿಕ ಜಾಲತಾಣದಲ್ಲಿ ಸಿದ್ದರಾಮಯ್ಯ ಅವರು ಇದೇ ನನ್ನ ಕೊನೆಯ ಚುನಾವಣೆ ಎಂದು ಹೇಳಿದ್ದ ಹೇಳಿಕೆಗೆ ಸಿದ್ದರಾಮಯ್ಯ ನೀನು ಎಲ್ಲೇ ನಿಂತರೂ ಸೋಲು ಎಂಬಿತ್ಯಾದಿ ಅವಹೇಳನಕಾರಿ ಕಾಮೆಂಟ್ ಮಾಡಿದ್ದು ಸಮಾಜದಲ್ಲಿ ಶಾಂತಿ ಕದಡಲು ಕಾರಣನಾಗಿರುವ ಈತನನ್ನು ಬಂಧಿಸಿ ಕ್ರಮ ಕೈಗೊಳ್ಳಬೇಕೆಂದು ಡಿವೈಎಸ್‌ಪಿ ರವಿಪ್ರಸಾದ್ ಹಾಗೂ ಇನ್ಸ್‌ಪೆಕ್ಟರ್ ಶ್ರೀನಿವಾಸ್‌ರಿಗೆ ದೂರು ನೀಡಲಾಗಿದೆ.

ಈ ವೇಳೆ ಬಿಳಿಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜ್, ಯುವ ಕಾಂಗ್ರೆಸ್ ಅಧ್ಯಕ್ಷ ಸ್ವರೂಪ್, ಗವಿನಾಯಕ, ರಾಘು, ನಾಗರಾಜ್, ರಮೀಜ್, ದರ್ಶನ್, ಶಿಲ್ಪಿ ರವಿಗೌಡ ಮತ್ತಿತರಿದ್ದರು.

ಗುಣಮಟ್ಟದ ಹಾಲು ಪೂರೈಕೆಯಿಂದ ಲಾಭ ಸಾಧ್ಯ

ಮಲ್ಕುಂಡಿ, ಜು.19– ರೈತರು ಗುಣಮಟ್ಟದ ಹಾಲನ್ನು ಪೂರೈಕೆ ಮಾಡಿದಾಗ ಮಾತ್ರ ಸಂಘ ಲಾಭ ಕಾಣಲು ಸಾಧ್ಯ ಎಂದು ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಕೆ.ಜಿ.ಮಹೇಶ್ ತಿಳಿಸಿದರು. ಇಲ್ಲಿನ ಮಡುವಿನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ರಾಸುಗಳಿಗೆ ಉತ್ತಮ ಹಸಿರು ಮೇವು ನೀಡಿದರೆ ಗುಣಮಟ್ಟ ಹಾಲು ಸಿಗುತ್ತದೆ. ಇದರಿಂದ ಸಂಘವು ಲಾಭ ಗಳಿಸಲು ಸಾಧ್ಯವಾಗುತ್ತದೆ. ಹೀಗಾಗಿ ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು ಎಂದ ಅವರು, ಈ ಬಾರಿ ಸಂಘ 6 ಲಕ್ಷ ರೂ. ಲಾಭ ಗಳಿಸಿದೆ ಎಂದರು.

ಸಭೆಯಲ್ಲಿ ಸಂಘದ ಅಧ್ಯಕ್ಷ ಮಹಾಲಿಂಗು, ವಿಸ್ತಾರಣಾಧಿಕಾರಿ ಶಿವಕುಮಾರ್, ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ಮಹದೇವಪ್ಪ, ಪುಟ್ಟಸುಬ್ಬಪ್ಪ, ಚಿನ್ನಪ್ಪ, ಉಮೇಶ್, ರಾಮಶೆಟ್ಟಿ, ಕೃಷ್ಣಮೂರ್ತಿ, ಮಹದೇವಸ್ವಾಮಿ, ಬಸವರಾಜಶೆಟ್ಟಿ, ಮಹದೇವಮ್ಮ, ಮಾಜಿ ಅಧ್ಯಕ್ಷ ಗುರುಸಿದ್ದಪ್ಪ, ಮುಖ್ಯ ಕಾರ್ಯದರ್ಶಿ ಮಹದೇವಪ್ಪ, ಗ್ರಾಪಂ ಸದಸ್ಯ ಲೋಕೇಶ್, ಬಸವರಾಜ್, ಗುರುಮಲ್ಲಪ್ಪ, ಮಂಜು, ಚನ್ನಪ್ಪ, ನಾಗೇಶ್ ಸೇರಿದಂತೆ ಇತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ನಮ್ಮ ಅಪ್ಪಾಜಿ ಕ್ಯಾಂಟೀನ್ ಉದ್ಘಾಟನೆ

ಬಡವರ ಹಸಿವು ನೀಗಿಸಲು ಮುಂದಾಗಿರುವ ಕೃಷ್ಣ ನಾಯಕರ ಕಾರ್ಯ ಶ್ಲಾಘನೀಯ: ಹೆಚ್‌ಡಿಕೆ



ಹೆಚ್.ಡಿ.ಕೋಟೆ, ಜು.19– ಕೂಲಿ ಕಾರ್ಮಿಕರು, ಬಡವರು, ವಿದ್ಯಾರ್ಥಿಗಳು ಹಾಗೂ ಸಂಕಷ್ಟದಲ್ಲಿರುವ ಜನತೆಯ ಅನುಕೂಲಕ್ಕಾಗಿ ಪಟ್ಟಣದಲ್ಲಿ ನಮ್ಮ ಅಪ್ಪಾಜಿ ಕ್ಯಾಂಟೀನ್ ತೆರೆದಿರುವುದು ಉತ್ತಮ ಕಾರ್ಯ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ತಾಲೂಕು ಮಿನಿ ವಿಧಾನಸೌಧದ ಎದುರು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಅವರು ನೂತನವಾಗಿ ಪ್ರಾರಂಭಿಸಿರುವ 'ನಮ್ಮ ಅಪ್ಪಾಜಿ ಕ್ಯಾಂಟೀನ್' ಉದ್ಘಾಟಿಸಿ ಮಾತನಾಡಿದ ಅವರು, ಕೃಷ್ಣನಾಯಕ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆದು ಬಡವರ ಹಸಿವು ನೀಗಿಸಲು ಮುಂದಾಗಿದ್ದಾರೆ. ಇದೊಂದು ಅತ್ಯುತ್ತಮ ಕಾರ್ಯ. ಇಂತಹ ಕ್ಯಾಂಟೀನ್‌ಗಳನ್ನು ರಾಜ್ಯಾದ್ಯಂತ ತೆರೆಯಬೇಕು ಎಂಬುದು ನಮ್ಮ ಜೆಡಿಎಸ್ ಪಕ್ಷದ ಉದ್ದೇಶವಾಗಿದ್ದು, ಇದರಿಂದ ಕೂಲಿ ಕಾರ್ಮಿಕರು, ಬಡವರು ಸೇರಿದಂತೆ ಎಲ್ಲಾ ವರ್ಗದ ಜನತೆಗೆ ಅನುಕೂಲವಾಗಲಿದೆ ಎಂದರು.

ಜೆಡಿಎಸ್ ಬಡವರ ಪಕ್ಷವಾಗಿದ್ದು, ಅದೇ ದಾರಿಯಲ್ಲಿ ಸಾಗಿರುವ ನಮ್ಮ ಪಕ್ಷದ ಕಾರ್ಯಕರ್ತರು ಅಪ್ಪಾಜಿ ಕ್ಯಾಂಟಿನ್ ತೆರೆದು ಬಡವರಿಗೆ ಅತಿ ಕಡಿಮೆ ದರದಲ್ಲಿ ತಿಂಡಿ ಮತ್ತು ಊಟ ನೀಡುತ್ತಿರುವುದು ಶ್ಲಾಘನೀಯ. ಕ್ಯಾಂಟಿನ್ ಅನ್ನು ಸರ್ಕಾರ ಅಥವಾ ಇನ್ನಾರೋ ತೆರೆಯುತ್ತಾರೆ ಎನ್ನುವುದು ಮುಖ್ಯವಲ್ಲ. ಬಡವರಿಗೆ ಅತಿ ಕಡಿಮೆ ದರದಲ್ಲಿ ಊಟ ಸಿಗಬೇಕೆನ್ನುವುದು ನಮ್ಮ ಬಯಕೆ. ಕ್ಯಾಂಟೀನ್ ತೆರೆದು 10 ರೂ.ಗೆ ತಿಂಡಿ, ಊಟ ನೀಡುತ್ತಿರುವ ಕೆ.ಎಂ. ಕೃಷ್ಣನಾಯಕ ಅವರ ಕಾರ್ಯ ಎಲ್ಲರೂ ಮೆಚ್ಚುವಂತಹುದು ಎಂದು ಶ್ಲಾಘಿಸಿದರು.

ಕೃಷ್ಣನಾಯಕ ಅವರು ಜನರ ಒಡನಾಟದಲ್ಲಿದ್ದು, ಮನಸ್ಸಿನಲ್ಲಿ ಇರುವುದನ್ನು ಕಾರ್ಯ ರೂಪಕ್ಕೆ ತಂದು ಕ್ಷೇತ್ರದಲ್ಲಿ ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ ಎಂದರು.

ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಮಾತನಾಡಿ, ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಮಾಜಿ ಸಿಎಂ ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಜಾತ್ಯಾತೀತವಾಗಿ ಜನಸೇವೆ ಮಾಡಿಕೊಂಡು ಬರುತ್ತಿದ್ದು, ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಕೊರೊನಾ ಸಂದರ್ಭದಲ್ಲಿ 25 ಸಾವಿರಕ್ಕೂ ಹೆಚ್ಚು ಆಹಾರ ಕಿಟ್, 10 ಸಾವಿರ ಔಷಧಿ ಕಿಟ್, ಆಂಬುಲೆನ್ಸ್, ಆಕ್ಸಿಜನ್ ಘಟಕ ನೀಡುವ ಮೂಲಕ ಜನತೆಯ ಹಿತ ಕಾಯಲಾಗಿದೆ. ಇದೀಗ ಪಟ್ಟಣದಲ್ಲಿ ಕ್ಯಾಂಟೀನ್ ತೆರೆಯಲಾಗಿದ್ದು, ಶುಚಿ ರುಚಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಗುಣಮಟ್ಟದ ಆಹಾರ ನೀಡಲಾಗುವುದು ಎಂದರು.

ಕ್ಯಾಂಟೀನ್ ಉದ್ಘಾಟನೆಗೆ ಪಟ್ಟಣಕ್ಕೆ ಆಗಮಿಸಿದ ಮಾಜಿ ಸಿಎಂ ಕುಮಾರಸ್ವಾಮಿ ಅವರಿಗೆ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರು 2 ಕ್ರೇನ್ ಮೂಲಕ ಹೂ ಮಳೆಗೈದು, ಬೃಹತ್ ಸೇಬಿನ ಹಾರ ಹಾಕಿ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮೂಲಕ ಅದ್ಧೂರಿಯಾಗಿ ಬರಮಾಡಿಕೊಂಡರು. ಅಲ್ಲದೇ ಮಾದಾಪುರ, ಹ್ಯಾಂಡ್‌ಪೋಸ್ಟ್ ಸೇರಿದಂತೆ ವಿವಿಧೆಡೆ ಅಭಿಮಾನಿಗಳು ಬೃಹತ್ ಸೇಬಿನ ಹಾರ ಹಾಕಿ ಸ್ವಾಗತ ಕೋರಿದರು. ಅಪ್ಪಾಜಿ ಕ್ಯಾಂಟೀನ್ ಉದ್ಘಾಟನೆ ನಂತರ ಕೋಟೆ–ಸರಗೂರು ತಾಲೂಕಿನ ರೈತರಿಗೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಉಚಿತವಾಗಿ 15 ಸಾವಿರ ತೆಂಗಿನ ಸಸಿ ವಿತರಿಸಿದರು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಉಪಾಧ್ಯಕ್ಷ ಶಂಬೇಗೌಡ, ಪ್ರಕಾಶ್, ವಕೀಲರಾದ ಪ್ರಶಾಂತ್, ಪ್ರಸನ್ನ ಕುಮಾರ್, ರವಿ, ರಮೇಶ್, ಮಹೇಂದ್ರ, ಗ್ಯಾಸ್ ಪ್ರಕಾಶ್, ಕಾಳಪ್ಪಾಜಿ, ರಘು, ಶಶಿಕುಮಾರ್, ಶಿವಯ್ಯ, ಶಿವರಾಮೇಗೌಡ, ಜವರೇಗೌಡ, ಹರೀಶ್, ನೆನಪು ರವಿ, ಲೋಕೇಶ್, ಸುದೀಪ್, ಪ್ರದೀಪ್, ನರಸಿಂಹ ರಾಜು, ಮಾದೇಗೌಡ ಇದ್ದರು.

ಕ್ಷೇತ್ರದಲ್ಲಿ ಸೂಕ್ತ ಅಭ್ಯರ್ಥಿ ಕಣಕ್ಕೆ: ಹೆಚ್‌ಡಿಕೆ

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಜೆಡಿಎಸ್ ಭದ್ರಕೋಟೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಸೂಕ್ತ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುವುದು ಎಂದು ಮಾಜಿ ಸಿಎಂ ಕುಮಾರಸ್ವಾಮಿ ತಿಳಿಸಿದರು.

ಮುಂಬರುವ ಚುನಾವಣೆಯ ಅಭ್ಯರ್ಥಿ ವಿಚಾರವಾಗಿ ಕ್ಷೇತ್ರದ ಮುಖಂಡರು, ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಿದೆ. ಅಲ್ಲದೇ ಇತ್ತೀಚೆಗೆ ಬೀಚನಹಳ್ಳಿಯಲ್ಲಿ ನಡೆದ ಜನತಾ ಜಲಧಾರೆ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಸಮ್ಮುಖದಲ್ಲೇ ಎಂಎಲ್‌ಸಿ ಸಿ.ಎನ್.ಮಂಜೇಗೌಡರು ಮಾಜಿ ಶಾಸಕ ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಅವರೇ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದರು ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನಾಗಲೀ, ಸಿ.ಎನ್.ಮಂಜೇಗೌಡರಾಗಲೀ ಅಭ್ಯರ್ಥಿ ಘೋಷಣೆ ಮಾಡಲು ಸಾಧ್ಯವಿಲ್ಲ. ಜೆಡಿಎಸ್ ರಾಜ್ಯಾಧ್ಯಕ್ಷರು ಸೇರಿದಂತೆ ಪಕ್ಷದ ಕೋರ್ ಕಮಿಟಿ ಸಭೆಯಲ್ಲಿ ತೀರ್ಮಾನ ಮಾಡಲಾಗುವುದು. ಅಲ್ಲದೇ ಕ್ಷೇತ್ರದ ಜೆಡಿಎಸ್ ಮುಖಂಡರು, ಕಾರ್ಯಕರ್ತರೊಂದಿಗೆ ಚರ್ಚಿಸಿ, ಅವರ ಸಲಹೆ ಪಡೆದು ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸೂಕ್ತ ಅಭ್ಯರ್ಥಿ ಕಣಕ್ಕಿಳಿಸಲಾಗುವುದು ಎಂದು ಸ್ಪಷ್ಟನೆ ನೀಡಿದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪೆಟ್ರೋಮ್ಯಾಕ್ಸ್ (ಕ): ಬೆ.10.30ಕ್ಕೆ, ಮ.1.20ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಸಂ.4.10ಕ್ಕೆ, 777 ಚಾರ್ಲಿ (ಕ): ಸಂ.6.50ಕ್ಕೆ, ದಿ ವಾರಿಯರ್ (ತೆ): ರಾ.10ಕ್ಕೆ.
ಸ್ಕ್ರೀನ್ 2	ಓ ಮೈ ಲವ್ (ಕ): ಬೆ.10.30ಕ್ಕೆ, ಗಾರ್ಗಿ (ತ): ಮ.1.30ಕ್ಕೆ, ಮೈ ಡಿಯರ್ ಭೂತಂ (ತ): ಸಂ.4.30ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ರಾ.7.20ಕ್ಕೆ, ಲಡ್ಕಿ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.55ಕ್ಕೆ, ಶಬ್ಬಾಶ್ ಮಿಥು (ಹಿಂ): ಮ.1.25ಕ್ಕೆ, ರಾ.9.55ಕ್ಕೆ, ಬೆಂಕಿ (ಕ): ಸಂ.4.30ಕ್ಕೆ, ಹಿಟ್: ದಿ ಫಸ್ಟ್ ಕೇಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಗಾರ್ಗಿ (ಕ): ಬೆ.11.20ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಮ.2.05ಕ್ಕೆ, ಸಂ.4.30ಕ್ಕೆ, ರಾಕೆಟ್ರಿ (ಹಿಂ): ಸಂ.6.55ಕ್ಕೆ, ಚೇಜ಼್ (ಕ): ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಶಬ್ಬಾಶ್ ಮಿಥು (ಹಿಂ): ಬೆ.10.10, ಸಂ.4.05ಕ್ಕೆ, ರಾ.10ಕ್ಕೆ, ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಮ.1.25ಕ್ಕೆ, ರಾ.7.20ಕ್ಕೆ.
ಸ್ಕ್ರೀನ್ 2	777 ಚಾರ್ಲಿ (ಕ): ಬೆ.10ಕ್ಕೆ, ಸಂ.4.10ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಮ.1.20ಕ್ಕೆ, ರಾ.7.30ಕ್ಕೆ, ದಿ ವಾರಿಯರ್ (ತೆ): ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್: ದಿ ಫಸ್ಟ್ ಕೇಸ್ (ಹಿಂ): ಬೆ.10.25ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಗಾರ್ಗಿ (ಕ): ಮ.1.15ಕ್ಕೆ, ಚೇಜ಼್ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪದ್ಮಾವತಿ (ಕ): ಬೆ.10.50ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.40ಕ್ಕೆ, ದಿ ವಾರಿಯರ್ (ತೆ): ಸಂ.4.15ಕ್ಕೆ, ಬೆಂಕಿ (ಕ): ರಾ.7.25ಕ್ಕೆ, ಓ ಮೈ ಲವ್ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಚೇಜ಼್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
ಸ್ಕ್ರೀನ್ 2	ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 3	ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
ಸ್ಕ್ರೀನ್ 4	ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೋಕೆ ಬೈ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಬೈರಾಗಿ (ಕ): ಬೆ.10ಕ್ಕೆ, ಮ.12.15ಕ್ಕೆ, ಮ.1ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, 777 ಚಾರ್ಲಿ (ಕ): ಮ.3.55ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ಹರಿಕಥೆ ಅಲ್ಲ ಗಿರಿಕಥೆ (ಕ): ಸಂ.4.05ಕ್ಕೆ, ತ್ರಿವಿಕ್ರಮ (ಕ): ಮ.12.50ಕ್ಕೆ, ಮಿನಿಯನ್ಸ್ (3ಡಿ)(ಇಂ): ಬೆ.10.05ಕ್ಕೆ, ಮ.3.30ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾ.10ಕ್ಕೆ, ರಾಷ್ಟ್ರ ಕವಚ ಓಂ(ಹಿಂ): ಬೆ.9.40ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ಜಗ್‌ಜಗ್ ಜೀಯೊ (ಹಿಂ): ಮ.12.15ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಬೆ.9ಕ್ಕೆ, ಸಂ.4.40ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ, ರಾಕೆಟ್ರಿ (ತ): ಮ.3.10ಕ್ಕೆ, ವಿಕ್ರಂ (ತ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಯರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖುದಾಫಿಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಗಾರ್ಗಿ (ಕ)	4 ಪ್ರದರ್ಶನಗಳು
ಸಂಗಂ	
ಬೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಬೆಂಕಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ದಿ ವಾರಿಯರ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು

ಮೈಸೂರು ಬೇಸಿಗೆ ರೇಸುಗಳು

10ನೇ ದಿನ, ಬುಧವಾರ 20–7–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಗುಂಡ್ಲುಪೇಟೆ ಪ್ಲೇಟ್–1200 ಮೀ. 3 ವರ್ಷ ಟರ್ವ್ಸ್. ಮ.2.00ಕ್ಕೆ
1. ಕುಶಾಕ್ 2. ಐ ದಿ ಮೈಂಡ್ 3. ರೊಮ್ಯಾಂಟಿಕ್ ಹಾರ್ಟ್

II. ಬನ್ನೇರುಘಟ್ಟ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಕಂಟ್ರೀಸ್ ಪೇಸ್ 2. ಮಿಸ್ ಚೈನಾ 3. ಸ್ವಿಸ್ ಬೆ

III. ನೇತ್ರಾವತಿ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಕ್ಯಾಲಿಪೋರ್ನಿಯ ಗೋಲ್ಡ್ 2. ಏರ್ ವೆಲಾಸಿಟಿ 3. ಚಿಲ್ಲಿ ಬ್ರೀಜ್

IV. ದಾವಣಗೆರೆ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ನ್ಯೂ ಬಿಗಿನಿಂಗ್ 2. ವೈಲ್ಡ್‌ಸ್ಪೆಲ್ 3. ಲವ್ಲಿ ಥಾಟ್ಸ್

V. ವಾರಾಹಿ ಟ್ರೋಫಿ ಡಿ1–1200 ಮೀ. ರೇಟೆಡ್ 20 ರಿಂದ 45. ಸಂ.4.00ಕ್ಕೆ
1. ಫ್ಲೈಯಿಂಗ್ ಪಾಲ್ಕನ್ 2. ಡಾರ್ಕ್ ಸಿಕ್ರೇಟ್ 3. ಲಕ್ಕಿ ಒನ್

VI. ಮಾನಸ ಸರೋವರ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಮ್ಯಾಜಿಕ್ ಸರ್ಕಲ್ 2. ಮುಟಾಂಟ್ 3. ಪ್ಲಾಷ್ ಬಾಂಡ್

VII. ವಾರಾಹಿ ಟ್ರೋಫಿ ಡಿ2–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಕಲಾಹರಿ ಗೋಲ್ಡ್ 2. ಸರ್ ಕಾಲ್‌ಕ್ಯೂಲಸ್ 3. ಕಮ್ ಅಲೈವ್

ದಿನದ ಅತ್ಯುತ್ತಮ	: ಫ್ಲೈಯಿಂಗ್ ಪಾಲ್ಕನ್
ಡಬ್ಬಲ್	: ಮ್ಯಾಜಿಕ್ ಸರ್ಕಲ್, ಕಲಾಹರಿ ಗೋಲ್ಡ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್‌ಸ್ಟರ್ ಪಿಜೆಸಿ